ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಮಾರ್ಚ್ 14 ಗುರುವಾರ 2024

ಸಂಪುಟ: 44 | ಸಂಚಿಕೆ: 325 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಲೋಕಸಭಾ ಚುನಾವಣೆ–2024: ಬಿಜೆಪಿ 2ನೇ ಪಟ್ಟಿ ಪ್ರಕಟ; ರಾಜ್ಯದ 20 ಅಭ್ಯರ್ಥಿಗಳ ಘೋಷಣೆ

ಮೈಸೂರು–ಕೊಡಗು ಕ್ಷೇತ್ರದಿಂದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್; ಚಾ.ನಗರದಿಂದ ಎಸ್.ಬಾಲರಾಜ್; ಬೆಂಗಳೂರು ಗ್ರಾಮಾಂತರದಿಂದ ಡಾ.ಸಿ.ಎನ್.ಮಂಜುನಾಥ್

● ಶೋಭಾ ಕರಂದ್ಲಾಜೆ ಬೆಂಗಳೂರು ಉತ್ತರಕ್ಕೆ ಶಿಫ್ಟ್; ಉಡುಪಿ–ಚಿಕ್ಕಮಗಳೂರಿಗೆ ಕೋಟಾ ಶ್ರೀನಿವಾಸ ಪೂಜಾರಿ ● ಹಾಸನ, ಮಂಡ್ಯ, ಕೋಲಾರ ಜೆಡಿಎಸ್ ಪಾಲಿಗೆ


ಯದುವೀರ್



ಎಸ್.ಬಾಲರಾಜ್


ಡಾ.ಸಿ.ಎನ್.ಮಂಜುನಾಥ್


ಶೋಭಾ ಕರಂದ್ಲಾಜೆ


ಕೋಟಾ ಶ್ರೀನಿವಾಸ


ಪ್ರಹ್ಲಾದ್ ಜೋಶಿ


ಬೊಮ್ಮಾಯಿ


ವಿ.ಸೋಮಣ್ಣ


ಶ್ರೀರಾಮುಲು


ರಾಘವೇಂದ್ರ


ತೇಜಸ್ವಿಸೂರ್ಯ


ಬಸವರಾಜ್


ಅಣ್ಣಾ ಸಾಹೇಬ್ ಜೊಲ್ಲೆ



ಗದ್ದಿಗೌಡರ್


ರಮೇಶ್ ಜಿಗಜಿಣಗಿ


ಉಮೇಶ್ ಜಾದವ್


ಭಗವಂತ ಖೂಬಾ


ಬ್ರಿಜೇಶ್ ಚೌಟ


ಪಿ.ಸಿ.ಮೋಹನ್


ಗಾಯತ್ರಿ ಸಿದ್ದೇಶ್ವರ್

ನವದೆಹಲಿ, ಮಾ.13–ಮುಂಬರುವ ಲೋಕಸಭಾ ಚುನಾವಣೆಗಾಗಿ ಬಿಜೆಪಿ 72 ಕ್ಷೇತ್ರಗಳನ್ನೊಳಗೊಂಡ ಎರಡನೇ ಪಟ್ಟಿ ಪ್ರಕಟಗೊಳಿಸಿದ್ದು, ಇದರ ಪೈಕಿ ಕರ್ನಾಟಕದ 20 ಕ್ಷೇತ್ರಗಳಿಗೆ ಅಭ್ಯರ್ಥಿಗಳನ್ನು ಘೋಷಿಸಿದೆ.

ಮಂಡ್ಯ, ಹಾಸನ ಮತ್ತು ಕೋಲಾರ ಕ್ಷೇತ್ರಗಳನ್ನು ಜೆಡಿಎಸ್‌ಗೆ ಬಿಟ್ಟುಕೊಟ್ಟಿದ್ದು, ಚಿತ್ರದುರ್ಗ, ಬೆಳಗಾವಿ, ಉತ್ತರ ಕನ್ನಡ, ಚಿಕ್ಕಬಳ್ಳಾಪುರ ಮತ್ತು ರಾಯಚೂರು ಕ್ಷೇತ್ರಗಳ ಅಭ್ಯರ್ಥಿಗಳನ್ನು ಇನ್ನಷ್ಟೇ ಪ್ರಕಟಿಸಬೇಕಾಗಿದೆ.

ಮೈಸೂರು–ಕೊಡಗು ಹಾಲಿ ಸಂಸದ ಪ್ರತಾಪ್ ಸಿಂಹ ಅವರಿಗೆ ಟಿಕೆಟ್ ಕೈತಪ್ಪಿದ್ದು, ಈ ಕ್ಷೇತ್ರದಲ್ಲಿ ಮೈಸೂರು ರಾಜವಂಶಸ್ಥ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಹೆಸರನ್ನು ಪ್ರಕಟಿಸಲಾಗಿದೆ. ರಾಜಕೀಯ ನಿವೃತ್ತಿ ಘೋಷಿಸಿರುವ ಚಾಮರಾಜನಗರ ಹಾಲಿ ಶಾಸಕ ವಿ.ಶ್ರೀನಿವಾಸ ಪ್ರಸಾದ್ ಬದಲಿಗೆ ಕೊಳ್ಳೇಗಾಲ ಮಾಜಿ ಶಾಸಕ ಎಸ್.ಬಾಲರಾಜ್ ಅವರನ್ನು ಬಿಜೆಪಿ ಕಣಕ್ಕಿಳಿಸಿದೆ. ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸಹೋದರ ಡಿ.ಕೆ.ಸುರೇಶ್ ಪ್ರತಿನಿಧಿಸುತ್ತಿರುವ ಬೆಂಗಳೂರು ಗ್ರಾಮಾಂತರ ಕ್ಷೇತ್ರಕ್ಕೆ ಜಯದೇವ ಹೃದ್ರೋಗ ಆಸ್ಪತ್ರೆಯ ಮಾಜಿ ನಿರ್ದೇಶಕರಾದ ಡಾ. ಸಿ.ಎನ್.ಮಂಜುನಾಥ್ ಹೆಸರನ್ನು ಘೋಷಿಸಲಾಗಿದೆ.

ಉಡುಪಿ–ಚಿಕ್ಕಮಗಳೂರು ಕ್ಷೇತ್ರವನ್ನು ಪ್ರತಿನಿಧಿಸುತ್ತಿರುವ ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಅವರನ್ನು ಮಾಜಿ ಮುಖ್ಯಮಂತ್ರಿ ಡಿ.ವಿ.ಸದಾನಂದಗೌಡ ಪ್ರತಿನಿಧಿಸುತ್ತಿರುವ ಬೆಂಗಳೂರು ಉತ್ತರ ಕ್ಷೇತ್ರದಲ್ಲಿ ಕಣಕ್ಕಿಳಿಸಿದ್ದು, ಉಡುಪಿ–ಚಿಕ್ಕಮಗಳೂರು ಕ್ಷೇತ್ರದಲ್ಲಿ ವಿಧಾನ ಪರಿಷತ್ ವಿಪಕ್ಷ ನಾಯಕ ಕೋಟಾ ಶ್ರೀನಿವಾಸ ಪೂಜಾರಿ ಅವರಿಗೆ ಅವಕಾಶ ಕಲ್ಪಿಸಲಾಗಿದೆ. ತುಮಕೂರಿನಲ್ಲಿ ಮಾಜಿ ಸಚಿವ ವಿ.ಸೋಮಣ್ಣ ಅವರನ್ನು ಕಣಕ್ಕಿಳಿಸಲಾಗಿದೆ. ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರನ್ನು ಹಾವೇರಿಯಿಂದ ಕಣಕ್ಕಿಳಿ ಸಲಾಗಿದೆ. ಬಳ್ಳಾರಿಯಲ್ಲಿ ಮಾಜಿ ಸಚಿವ ಬಿ.ಶ್ರೀರಾಮುಲು ಅವರನ್ನು ಸ್ಪರ್ಧೆಗಿಳಿಸಿದ್ದರೆ, ದಾವಣಗೆರೆಯಲ್ಲಿ

● 6ನೇ ಪುಟಕ್ಕೆ

ಮೈಸೂರು, ಕೊಡಗಿನ ಏಳ್ಗೆಗೆ ಕೆಲಸ ಮಾಡಲು ಅವಕಾಶ ಕಲ್ಪಿಸಿ

ಮೈಸೂರು–ಕೊಡಗು ಬಿಜೆಪಿ ಘೋಷಿತ ಅಭ್ಯರ್ಥಿ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಕೋರಿಕೆ

ಮೈಸೂರು, ಮಾ. 13– ಮೈಸೂರು ಮತ್ತು ಕೊಡಗಿನ ಸರ್ವಾಂಗೀಣ ಏಳ್ಗೆ ಮತ್ತು ಅಭಿವೃದ್ಧಿಗಾಗಿ ಕೆಲಸ ಮಾಡಲು ತಮಗೆ ಅವಕಾಶ ನೀಡುವಂತೆ ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಬಿಜೆಪಿ ಘೋಷಿತ ಅಭ್ಯರ್ಥಿಯೂ ಆದ ಮೈಸೂರು ರಾಜವಂಶಸ್ಥ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಕೋರಿದ್ದಾರೆ. ಬಿಜೆಪಿ ಅಭ್ಯರ್ಥಿಯಾಗಿ ತಮ್ಮ ಹೆಸರು ಅಧಿಕೃತವಾಗಿ ಘೋಷಣೆಯಾಗುತ್ತಿದ್ದಂತೆಯೇ ಈ ಸಂಬಂಧ ಫೇಸ್‌ಬುಕ್‌ನಲ್ಲಿ ಪೋಸ್ಟ್ ಮಾಡಿರುವ ಅವರು, ತಮಗೆ ಬಿಜೆಪಿ ಟಿಕೆಟ್ ದೊರೆತಿರುವ ಬಗ್ಗೆ ಹರ್ಷ ವ್ಯಕ್ತಪಡಿಸಿದ್ದಾರೆ. ನಮ್ಮ ಪೂರ್ವಜರ ಮಹತ್ತರ ಕೊಡುಗೆಗಳಿಂದ ಕರ್ನಾಟಕ ಜನತೆಯ ಬೆಂಬಲ ಮತ್ತು ಭಾವನಾತ್ಮಕ ಸಂಪರ್ಕವು ನಿಸ್ಸಂದೇಹವಾಗಿ ನಮ್ಮೊಟ್ಟಿಗಿದೆ. ಕಳೆದ 9 ವರ್ಷಗಳಿಂದ ನಾನು ನಮ್ಮ ಕ್ಷೇತ್ರ ಹಾಗೂ ನಮ್ಮ ರಾಜ್ಯದ ಸಾರ್ವಜನಿಕ ಜೀವನದ ಭಾಗವಾಗಿದ್ದು, ಅನೇಕ ಪ್ರಜಾಬಾಂಧವರನ್ನು ಭೇಟಿಯಾಗುವ ಅವಕಾಶ ಸಿಕ್ಕಿದ್ದು, ನನ್ನನ್ನು ನೀವೆಲ್ಲರೂ ಮುಕ್ತವಾಗಿ ಒಬ್ಬ ಸ್ನೇಹಿತನಂತೆ ಸ್ವಾಗತಿಸಿ, ಆತಿಥ್ಯವನ್ನು ನೀಡಿದ್ದೀರಿ. ಈಗ ಆ ಋಣವನ್ನು ತೀರಿಸಲು ಅವಕಾಶ ಕೇಳುತ್ತಿದ್ದೇನೆ ಎಂದು ಅವರು ಹೇಳಿದ್ದಾರೆ. ಚುನಾವಣೆಯಲ್ಲಿ ಪಕ್ಷವನ್ನು ಪ್ರತಿನಿಧಿಸಲು ತಮ್ಮ ಮೇಲೆ ನಂಬಿಕೆ ಇಟ್ಟಿರುವ ಪ್ರಧಾನಿ ಮೋದಿ,

● 6ನೇ ಪುಟಕ್ಕೆ

ಸೆಣಸಾಟಕ್ಕೆ ಸಜ್ಜಾದವರು

- ಹಾಸನ: ಪ್ರಜ್ವಲ್ ರೇವಣ್ಣ(ಜೆಡಿಎಸ್) Vs ಶ್ರೇಯಸ್ ಪಟೇಲ್(ಕಾಂಗ್ರೆಸ್)
- ಬೆಂ.ಗ್ರಾಮಾಂತರ: ಡಾ.ಸಿ.ಎನ್.ಮಂಜುನಾಥ್(ಬಿಜೆಪಿ) Vs ಡಿ.ಕೆ.ಸುರೇಶ್(ಕಾಂಗ್ರೆಸ್)
- ವಿಜಯಪುರ: ರಮೇಶ್ ಜಿಗಜಿಣಗಿ(ಬಿಜೆಪಿ) Vs ರಾಜು ಆಲಗೂಡು (ಕಾಂಗ್ರೆಸ್)
- ಹಾವೇರಿ: ಬೊಮ್ಮಾಯಿ(ಬಿಜೆಪಿ) Vs ಆನಂದಸ್ವಾಮಿ ಗಡ್ಡದೇವರಮಠ(ಕಾಂಗ್ರೆಸ್)
- ತುಮಕೂರು: ವಿ.ಸೋಮಣ್ಣ(ಬಿಜೆಪಿ) Vs ಮುದ್ದುಹನುಮೇಗೌಡ(ಕಾಂಗ್ರೆಸ್)
- ಶಿವಮೊಗ್ಗ: ಬಿ.ವೈ.ರಾಘವೇಂದ್ರ(ಬಿಜೆಪಿ) Vs ಗೀತಾ ಶಿವರಾಜ್‌ಕುಮಾರ್(ಕಾಂಗ್ರೆಸ್)



“ ಮೈಸೂರು–ಕೊಡಗು ಬಿಜೆಪಿ ಅಭ್ಯರ್ಥಿಯಾಗಿರುವ ಯದುವೀರ್ ಅವರಿಗೆ ಕರೆ ಮಾಡಿ, ಅಭಿನಂದನೆ ತಿಳಿಸಿದ್ದೇನೆ. ಇನ್ನೆರಡು ದಿನದಲ್ಲಿ ಪ್ರಚಾರದಲ್ಲಿ ತೊಡಗಿಸಿಕೊಳ್ಳುತ್ತೇನೆ. ದೇಶಕ್ಕಾಗಿ ಮೋದಿಗಾಗಿ ಈಗಿನಿಂದಲೇ ಪ್ರಚಾರ ಶುರು ಮಾಡೋಣ. –ಪ್ರತಾಪ್ ಸಿಂಹ, ಸಂಸದ

“ ಚಾಮರಾಜನಗರ ಮೀಸಲು ಕ್ಷೇತ್ರದಿಂದ ನಾನು ಸ್ಪರ್ಧಿಸಲು ವರಿಷ್ಠರು ಅವಕಾಶ ಕಲ್ಪಿಸಿದ್ದು, ನನಗೆ ಸಂತೋಷ ತಂದಿದೆ. ಪಕ್ಷದ ಎಲ್ಲಾ ಶಾಸಕರು, ಮುಖಂಡರು, ಕಾರ್ಯಕರ್ತರು ಹಾಗೂ ಟಿಕೆಟ್ ಆಕಾಂಕ್ಷಿಗಳನ್ನು ವಿಶ್ವಾಸಕ್ಕೆ ತೆಗೆದುಕೊಂಡು ಚುನಾವಣೆ ಎದುರಿಸುತ್ತೇನೆ. ನರೇಂದ್ರ ಮೋದಿ ಅವರನ್ನು ಮೂರನೇ ಬಾರಿಗೆ ಪ್ರಧಾನಿಯಾಗಿಸುವ ನಿಟ್ಟಿನಲ್ಲಿ ಅವರಿಗೆ ಶಕ್ತಿ ತುಂಬುವ ಕೆಲಸ ಮಾಡುತ್ತೇನೆ. ನನಗೆ ಟಿಕೆಟ್ ಸಿಗುವ ಆಶಾಭಾವನೆ ಇತ್ತು, ಗೆಲ್ಲುವ ವಿಶ್ವಾಸವೂ ಇದೆ. –ಎಸ್.ಬಾಲರಾಜು, ಚಾಮರಾಜನಗರ ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ

ಟಿಕೆಟ್ ಕೈತಪ್ಪಿದವರು

- ಪ್ರತಾಪ್ ಸಿಂಹ: ಮೈಸೂರು–ಕೊಡಗು
- ವಿ.ಶ್ರೀನಿವಾಸಪ್ರಸಾದ್ (ನಿವೃತ್ತಿ): ಚಾಮರಾಜನಗರ
- ಡಿ.ವಿ.ಸದಾನಂದಗೌಡ: ಬೆಂಗಳೂರು ಉತ್ತರ
- ನಳಿನ್‌ಕುಮಾರ್ ಕಟೀಲ್: ದಕ್ಷಿಣ ಕನ್ನಡ
- ದೇವೇಂದ್ರಪ್ಪ: ಬಳ್ಳಾರಿ
- ಶಿವಕುಮಾರ್ ಉದಾಸಿ: ಹಾವೇರಿ
- ಕರಡಿ ಸಂಗಣ್ಣ: ಕೊಪ್ಪಳ
- ಸಿದ್ದೇಶ್ವರ: ದಾವಣಗೆರೆ

ಹೊಸ ಮುಖಗಳು

- ಡಾ.ಸಿ.ಎನ್.ಮಂಜುನಾಥ್ ಬೆಂಗಳೂರು ಗ್ರಾಮಾಂತರ
- ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್: ಮೈಸೂರು–ಕೊಡಗು.
- ಕ್ಯಾಪ್ಟನ್ ಬ್ರಿಜೇಶ್ ಚೌಟ: ದಕ್ಷಿಣ ಕನ್ನಡ
- ಕೋಟಾ ಶ್ರೀನಿವಾಸ ಪೂಜಾರಿ: ಉಡುಪಿ–ಚಿಕ್ಕಮಗಳೂರು.
- ಗಾಯಿತ್ರಿ ಸಿದ್ದೇಶ್ವರ: ದಾವಣಗೆರೆ
- ಡಾ.ಬಸವರಾಜ ಕ್ಯಾವತ್ತೂರ್: ಕೊಪ್ಪಳ

ನೀವು ಸ್ಪರ್ಧಿಸಿ... ಇಲ್ಲ ನಿಮ್ಮ ಕುಟುಂಬದವರ ಗೆಲ್ಲಿಸಿಕೊಂಡು ಬನ್ನಿ

ಸಚಿವರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಟಾಸ್ಕ್



ಬೆಂಗಳೂರು, ಮಾ.13(ಕೆಎಂಶಿ)– ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಅತೀ ಹೆಚ್ಚು ಸ್ಥಾನ ಗಳಿಸಲು ನೀವು ಕಣಕ್ಕಿಳಿಯಿರಿ ಇಲ್ಲದಿದ್ದರೆ, ನಿಮ್ಮ ಕುಟುಂಬದವರನ್ನು ಕಣಕ್ಕಿಳಿಸಿ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಮ್ಮ ಸಂಪುಟದ ಸಹೋದ್ಯೋಗಿಗಳಿಗೆ ತಾಕೀತು ಮಾಡಿದ್ದಾರೆ.

ಸಚಿವ ಸ್ಥಾನ ತೊರೆದು ಚುನಾವಣಾ ಕಣಕ್ಕಿಳಿಯಲು ಆಸಕ್ತಿ ತೋರದೆ ತಮ್ಮ ಕುಟುಂಬದವರನ್ನು ಗೆಲ್ಲಿಸಿಕೊಂಡು ಬರುವ ಭರವಸೆಯನ್ನು ಸಚಿವರುಗಳು ಮುಖ್ಯಮಂತ್ರಿ ಅವರಿಗೆ ನೀಡಿದ್ದಾರೆ. ಆದರೆ, ಸಚಿವ ರಾಮಲಿಂಗಾರೆಡ್ಡಿ ಸಮಯಾವಕಾಶ ಕೋರಿದ್ದರೆ, ಸತೀಶ್ ಜಾರಕಿಹೊಳಿ ಸಾರಾಸಗಟಾಗಿ ತಾವಾಗಲೀ ಅಥವಾ ತಮ್ಮ ಕುಟುಂಬದವರಾಗಲೀ ಕಣಕ್ಕಿಳಿಯುವುದಿಲ್ಲ ಎಂದು ಸಭೆಯಲ್ಲೇ ಸ್ಪಷ್ಟಪಡಿಸಿದ್ದಾರೆ.

ಆದರೆ ಮುಖ್ಯಮಂತ್ರಿ ಅವರು ಪಟ್ಟು ಬಿಡದೆ, ಚುನಾವಣಾ ಪೂರ್ವ ಸಮೀಕ್ಷೆ ಹಾಗೂ ಜನಾಭಿಪ್ರಾಯವನ್ನು ಆಧಾರವಾಗಿಟ್ಟುಕೊಂಡು ನಾನು ಹೇಳುತ್ತಿದ್ದೇನೆ, ನೀವು ಇಲ್ಲವೇ ನಿಮ್ಮ ಕುಟುಂಬದವರನ್ನು ಕಣಕ್ಕಿಳಿಸುವಂತೆ ಬಿಗಿಪಟ್ಟು ಹಿಡಿದಿದ್ದಾರೆಂದು ಹೇಳಲಾಗಿದೆ.

ಈ ಬೆಳವಣಿಗೆ ನಂತರ ಚಾಮರಾಜನಗರ ಮೀಸಲು ಕ್ಷೇತ್ರಕ್ಕೆ ಮಹದೇವಪ್ಪ ಅವರ ಪುತ್ರ ಸುನೀಲ್ ಬೋಸ್, ದಾವಣಗೆರೆಯಿಂದ ಮಲ್ಲಿಕಾರ್ಜುನ ಅವರ ಪತ್ನಿ ಪ್ರಭಾ ಮಲ್ಲಿಕಾರ್ಜುನ್, ಕೋಲಾರದಿಂದ ತಮ್ಮ ಅಳಿಯ ಚಿಕ್ಕಪೆದ್ದಯ್ಯ ಅವರನ್ನು ಮುನಿಯಪ್ಪ ಕಣಕ್ಕಿಳಿಸುತ್ತಿದ್ದಾರೆ. ಇನ್ನು, ಬೆಳಗಾವಿಯಿಂದ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಪುತ್ರ ಮೃಣಾಲ್ ಹೆಸರನ್ನು ಸಿಡಬ್ಲ್ಯುಸಿಗೆ ಶಿಫಾರಸು ಮಾಡಲಾಗಿದೆ. ಚಿಕ್ಕೋಡಿಯಿಂದ ಸತೀಶ್ ಜಾರಕಿಹೊಳಿ ಪುತ್ರಿ ಪ್ರಿಯಾಂಕ, ಬೆಂಗಳೂರು ದಕ್ಷಿಣ ಕ್ಷೇತ್ರದಿಂದ ರಾಮಲಿಂಗಾ ರೆಡ್ಡಿ ಪುತ್ರಿ ಸೌಮ್ಯ ರೆಡ್ಡಿ ವಿಚಾರ ಚರ್ಚೆ ಆಗಿದ್ದರೂ, ಆ ಸಚಿವರು ಸಮ್ಮತಿಸದ ಕಾರಣ ಕ್ಷೇತ್ರದ ಆಯ್ಕೆ ಅಂತಿಮವಾಗಿಲ್ಲ. ಧಾರವಾಡ ಕ್ಷೇತ್ರದಿಂದ ವಿನಯ್ ಕುಲಕರ್ಣಿ ಪತ್ನಿ ಶಿವಲೀಲಾ ಕುಲಕರ್ಣಿ, ಉಡುಪಿ–ಚಿಕ್ಕಮಗಳೂರಿನಿಂದ ಜಯಪ್ರಕಾಶ್ ಹೆಗ್ಗಡೆ, ಚಿಕ್ಕ ಬಳ್ಳಾಪುರದಿಂದ ರಕ್ಷಾರಾಮಯ್ಯ, ಕೊಪ್ಪಳಕ್ಕೆ ರಾಜಶೇಖರ್ ಹಿಟ್ನಾಳ್, ರಾಯಚೂರಿಗೆ ಜಿ.ಕುಮಾರನಾಯಕ್, ಬಾಗಲಕೋಟೆಗೆ ಆನಂದ ನ್ಯಾಮಗೌಡ ಹೆಸರುಗಳು ಅಂತಿಮಗೊಂಡಿವೆ. ಮೈಸೂರು–ಕೊಡಗು ಕ್ಷೇತ್ರಕ್ಕೆ ಸಂಬಂಧಿಸಿದಂತೆ ಲಕ್ಷ್ಮಣ್ ಹೆಸರು ಅಂತಿಮಗೊಂಡಿದ್ದರೂ ಸಿಎಂ ಅವರು, ಬಿಜೆಪಿ ಬೆಳವಣಿಗೆ ನಂತರ ಈ ಕ್ಷೇತ್ರದ ಬಗ್ಗೆ ನಿರ್ಧಾರ ಕೈಗೊಳ್ಳೋಣ ಎಂದು ಸಭೆಯಲ್ಲಿ ತಿಳಿಸಿದ್ದಾರಂತೆ.

28 ಲೋಕಸಭಾ ಕ್ಷೇತ್ರಗಳ ಪೈಕಿ ಏಳಕ್ಕೆ ಅಭ್ಯರ್ಥಿ ಹೆಸರುಗಳನ್ನು ಪ್ರಕಟಿಸಿರುವ ಕಾಂಗ್ರೆಸ್, ಉಳಿದ 21 ಕ್ಷೇತ್ರಗಳಿಗೆ ಅಭ್ಯರ್ಥಿಗಳ ಆಯ್ಕೆಗೆ ಸಂಬಂಧಿಸಿದಂತೆ ಸುದೀರ್ಘ ಸಭೆ ನಡೆಸಿ ಆದೇಶ ಮಾಡಿದ್ದಾರೆ.

ಪೌರತ್ವ ಕಾಯ್ದೆ ಜಾರಿ ಸಂಬಂಧ ಇಂದು ಸಂಪುಟ ಸಭೆಯಲ್ಲಿ ನಿರ್ಧಾರ

ಬೆಂಗಳೂರು, ಮಾ.13(ಕೆಎಂಶಿ)– ಕೇಂದ್ರ ಸರ್ಕಾರ ಕೇವಲ ಲೋಕಸಭಾ ಚುನಾವಣೆ ದೃಷ್ಟಿಯಿಂದ ಪೌರತ್ವ ಕಾಯ್ದೆ ಜಾರಿ ಮಾಡಿದ್ದು, ರಾಜ್ಯದಲ್ಲಿ ಸಿಎಎ ಅನುಷ್ಠಾನ ಕುರಿತು ನಾಳೆ ನಡೆಯಲಿರುವ ಸಚಿವ ಸಂಪುಟ ಸಭೆಯಲ್ಲಿ ಚರ್ಚಿಸಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದ್ದಾರೆ. ಬಿಜೆಪಿಗೆ ಸೋಲಿನ ಭಯ ಕಾಡುತ್ತಿರುವುದರಿಂದ

● 6ನೇ ಪುಟಕ್ಕೆ

ರಾಮೇಶ್ವರಂ ಬಾಂಬ್ ಬ್ಲಾಸ್ಟ್ ಪ್ರಕರಣ

ಬಳ್ಳಾರಿಯಲ್ಲಿ ಶಂಕಿತನನ್ನು ವಶಕ್ಕೆ ಪಡೆದ ಎನ್‌ಐಎ

ಬೆಂಗಳೂರು: ಬೆಂಗಳೂರಿನ ರಾಮೇಶ್ವರಂ ಬಾಂಬ್ ಸ್ಫೋಟ ಪ್ರಕರಣಕ್ಕೆ ಸಂಬಂಧಿಸಿದಂತೆ ಬಳ್ಳಾರಿಯಲ್ಲಿ ದಾಳಿ ನಡೆಸಿದ ಎನ್‌ಐಎ ಅಧಿಕಾರಿಗಳು ಶಂಕಿತನೊಬ್ಬನನ್ನು ವಶಕ್ಕೆ ಪಡೆದಿದ್ದಾರೆ.

ಇಂದು ಮುಂಜಾನೆ 4 ಗಂಟೆ ಸುಮಾರಿಗೆ ಯುವಕನ ಮನೆ ಮೇಲೆ ದಾಳಿ ನಡೆಸಿದ ಎನ್‌ಐಎ ಅಧಿಕಾರಿಗಳು ಆತನನ್ನು ವಶಕ್ಕೆ ಪಡೆದಿದ್ದಾರೆ. ಹೆಚ್ಚಿನ ವಿಚಾರಣೆಗೆ ಯುವಕನನ್ನು ಬೆಂಗಳೂರಿಗೆ ಕರೆತಂದಿದ್ದಾರೆ. ರಾಮೇಶ್ವರಂ ಬಾಂಬ್ ಪ್ರಕರಣಕ್ಕೂ ಮತ್ತು ಈ ಶಂಕಿತ ಯುವಕನಿಗೂ ಲಿಂಕ್ ಇದೆಯೇ ಎಂಬುದು ವಿಚಾರಣೆಯಿಂದ ತಿಳಿದುಬರಬೇಕಿದೆ.

ಏನಿದು ಪ್ರಕರಣ: ಬೆಂಗಳೂರಿನ ವೈಟ್‌ಫೀಲ್ಡ್ ಪ್ರದೇಶದಲ್ಲಿರುವ ರಾಮೇಶ್ವರಂ ಕೆಫೆಯಲ್ಲಿ ಮಾ.1ರಂದು ಭಾರೀ ಸ್ಫೋಟ ಸಂಭವಿಸಿತ್ತು. 9 ಮಂದಿ ಗ್ರಾಹಕರು ಗಾಯಗೊಂಡಿದ್ದರು. ಸುಧಾರಿತ ಕಡಿಮೆ ತೀವ್ರತೆಯ ಬಾಂಬ್



ಇದಾಗಿದ್ದರಿಂದ ದೊಡ್ಡ ಹಾನಿ ಸಂಭವಿಸಿರಲಿಲ್ಲ. ಘಟನೆಗೆ ಸಂಬಂಧಿಸಿದಂತೆ ಬೆಂಗಳೂರು ಸಿಸಿಬಿ ಪೊಲೀಸರು ಕಾನೂನು ಬಾಹಿರ ಚಟುವಟಿಕೆಗಳ ತಡೆ ಕಾಯ್ದೆ (ಯುಎಪಿಎ) ಮತ್ತು ಸ್ಫೋಟಕ ವಸ್ತುಗಳ ಕಾಯ್ದೆಯಡಿ ಪ್ರಕರಣ ದಾಖಲಿಸಿಕೊಂಡು

● 6ನೇ ಪುಟಕ್ಕೆ

ದಸರಾ ವಸ್ತುಪ್ರದರ್ಶನ ಪ್ರಾಧಿಕಾರದ ಆವರಣದಲ್ಲಿ ವರ್ಷವಿಡೀ ಪ್ರದರ್ಶನ ಆಯೋಜಿಸಲು ನಿರ್ಧಾರ

ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ, ಮಾಜಿ ಮೇಯರ್ ಅಯೂಬ್‌ಖಾನ್

ಮೈಸೂರು,ಮಾ.13(ಎಂಟಿವೈ)–ಮೈಸೂರಿನ ದಸರಾ ವಸ್ತುಪ್ರದರ್ಶನ ಪ್ರಾಧಿಕಾರದ ಆವರಣದಲ್ಲಿ ವರ್ಷವಿಡೀ ಪ್ರದರ್ಶನ ಆಯೋಜಿಸಲು ನಿರ್ಧರಿಸಲಾಗಿದ್ದು, ಇದರ ಭಾಗವಾಗಿ ಏಪ್ರಿಲ್ ಮೊದಲ ವಾರದಿಂದ ಮೇ ಅಂತ್ಯದವರೆಗೆ ಬೇಸಿಗೆ ಮೇಳ ನಡೆಸಲು ಉದ್ದೇಶಿಸಲಾಗಿದೆ ಎಂದು ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಅಯೂಬ್ ಖಾನ್ ತಿಳಿಸಿದ್ದಾರೆ.

ದಸರಾ ವಸ್ತುಪ್ರದರ್ಶನದ ಆವರಣದಲ್ಲಿರುವ ಪ್ರಾಧಿಕಾರದ ಕಚೇರಿಯಲ್ಲಿ ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ವರ್ಷದ 365 ದಿನದಲ್ಲಿ ಕೇವಲ 90 ದಿನ ಮಾತ್ರ ದಸರಾ ವಸ್ತುಪ್ರದರ್ಶನದ ಮೈದಾನದಲ್ಲಿ ಚಟುವಟಿಕೆ ನಡೆಯುತ್ತಿತ್ತು. ಈ ಹಿಂದೆ ಪ್ರಾಧಿಕಾರಕ್ಕೆ ಅಧ್ಯಕ್ಷರಾಗಿದ್ದವರು, ಅಧಿಕಾರಿಗಳು ದಸರಾ ವಸ್ತುಪ್ರದರ್ಶನದ ಮೈದಾನದಲ್ಲಿ ವರ್ಷವಿಡೀ ಪ್ರದರ್ಶನ ಆಯೋಜಿಸಲು ಪ್ರಯತ್ನಿಸಿದ್ದಾರೆ. ಆದರೆ, ಕೆಲ ಕಾರಣದಿಂದ ಅದು ಜಾರಿಗೊಳಿಸಲು ಆಗಿಲ್ಲ. ಈ ಹಿನ್ನೆಲೆಯಲ್ಲಿ ನನ್ನ ಅಧಿಕಾರಾವಧಿಯಲ್ಲಿ ವರ್ಷವಿಡೀ ಅಲ್ಲದಿದ್ದರೂ, ವರ್ಷಕ್ಕೆ 6–7 ತಿಂಗಳವರೆಗಾದರೂ ವಸ್ತುಪ್ರದರ್ಶನ ನಡೆಸುವ ಆಲೋಚನೆ ಇದೆ. ಈ ನಿಟ್ಟಿನಲ್ಲಿ ಬೇಸಿಗೆ ಮೇಳ ನಡೆಸಲು ತೀರ್ಮಾನಿಸಲಾಗಿದ್ದು, ಟೆಂಡರ್ ಕರೆಯಲಾಗಿದೆ ಎಂದರು.

ಮೈಸೂರಿನ ಇತರೆ ಸ್ಥಳಗಳಲ್ಲಿ ನಡೆಯುವ ವಸ್ತುಪ್ರದರ್ಶನಗಳಿಗೆ ಅನುಮತಿ ಹಾಗೂ ಎನ್‌ಓಸಿ ನೀಡದಂತೆ ಜಿಲ್ಲಾಧಿಕಾರಿ, ಮೈಸೂರು ಮಹಾನಗರ ಪಾಲಿಕೆಗೆ ಪ್ರಾಧಿಕಾರದ ವತಿಯಿಂದ ಮನವಿ ಮಾಡಲಾಗಿದೆ. ಅಲ್ಲದೆ, ಪತ್ರ ವ್ಯವಹಾರ ನಡೆಸಲಾಗಿದೆ. ಜಿಲ್ಲಾಧಿಕಾರಿಗಳು ಪೂರಕವಾಗಿ ಸ್ಪಂದಿಸಿದ್ದಾರೆ ಎಂದರು.

ಶಾಲಾ–ಕಾಲೇಜು ಉತ್ಸವ: ದಸರಾ ವಸ್ತುಪ್ರದರ್ಶನ ಮೈದಾನ ವಿಶಾಲವಾಗಿದ್ದು, ವೇದಿಕೆ, ಫೌಂಟೇನ್ ಸೇರಿದಂತೆ ವಿವಿಧ ಸೌಲಭ್ಯವಿದೆ. ಇದರಿಂದ ಮೈಸೂರಿನ ಶಾಲಾ–ಕಾಲೇಜುಗಳ ಫೆಸ್ಟ್, ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ದಸರಾ ವಸ್ತುಪ್ರದರ್ಶನದ ಮೈದಾನದಲ್ಲೇ ನಡೆಸುವಂತೆ ಮನವಿ ಸಲ್ಲಿಸುವುದಾಗಿ ಹೇಳಿದರು.

ಅಭಿವೃದ್ಧಿ: ಇತ್ತೀಚೆಗೆ ಜನರ ಮನಸ್ಥಿತಿ ಬದಲಾಗುತ್ತಿದೆ. ಈ ಹಿನ್ನೆಲೆಯಲ್ಲಿ ವಸ್ತುಪ್ರದರ್ಶನದ ಆವರಣದಲ್ಲಿರುವ ಫೌಂಟೇನ್‌ಗಳನ್ನು ಅಭಿವೃದ್ಧಿಪಡಿಸಿ, ಮ್ಯೂಸಿಕಲ್ ಫೌಂಟೇನ್ ಆಗಿ ಪರಿವರ್ತಿಸಲು ಕ್ರಮ ಕೈಗೊಳ್ಳಲಾಗಿದೆ. ಅಲ್ಲದೆ, ಎ ಬ್ಲಾಕ್‌ನಲ್ಲಿರುವ 156 ಮಳಿಗೆಗಳನ್ನು ಹೆರಿಟೇಜ್ ಮಾದರಿಯಲ್ಲಿ ಅಭಿವೃದ್ಧಿಪಡಿಸಲು ಕ್ರಮ ಕೈಗೊಳ್ಳಲಾಗಿದೆ ಎಂದು ತಿಳಿಸಿದರು.

80 ಪೈಸೆಯೂ ಬಂದಿಲ್ಲ: ಇತ್ತೀಚೆಗೆ ದೆಹಲಿಯಿಂದ ಆನ್‌ಲೈನ್ ಮೂಲಕ ಪ್ರಧಾನಿ ನರೇಂದ್ರ ಮೋದಿ ಅವರು ವಿವಿಧ ಕಾಮಗಾರಿಗಳಿಗೆ ಚಾಲನೆ ನೀಡಿದ್ದು, ಅದರಲ್ಲಿ ಸಂಸದ ಪ್ರತಾಪ ಸಿಂಹ ಪತ್ರಿಕೆಗಳಿಗೆ ಜಾಹಿರಾತು ನೀಡಿ, ಸ್ವದೇಶಿ ದರ್ಶನ್–2.0 ಯೋಜನೆಯಡಿ ದಸರಾ ವಸ್ತುಪ್ರದರ್ಶನದ ಮೈದಾನ ಅಭಿವೃದ್ಧಿಗೆ 80 ಕೋಟಿ ರೂ. ಅನುದಾನ ನೀಡಿದ್ದಾರೆ ಎಂದು ಹೇಳಿಕೊಂಡಿದ್ದಾರೆ. ಆದರೆ, ಈ ಕಾರ್ಯಕ್ರಮದಡಿ ವಸ್ತುಪ್ರದರ್ಶನ ಪ್ರಾಧಿಕಾರಕ್ಕೆ 80 ಪೈಸೆಯನ್ನು ಕೇಂದ್ರ ಸರ್ಕಾರ ನೀಡಿಲ್ಲ. ಸುಳ್ಳು ಮಾಹಿತಿ ನೀಡುವ ಮೂಲಕ ಜನರನ್ನು ದಿಕ್ಕು ತಪ್ಪಿಸುತ್ತಿದ್ದಾರೆ ಎಂದು ಆರೋಪಿಸಿದರು.

ದೇಶದ 28 ರಾಜ್ಯಗಳಲ್ಲೂ ಯೂನಿಟಿ ಮಾಲ್: ಕರ್ನಾಟಕ ಸೇರಿದಂತೆ ದೇಶದ 28 ರಾಜ್ಯಗಳಲ್ಲೂ ಯೂನಿಟಿ ಮಾಲ್ ಸ್ಥಾಪಿಸಲು ಕೇಂದ್ರ ಸರ್ಕಾರ 5 ಸಾವಿರ ಕೋಟಿ ಅನುದಾನ ಮೀಸಲಿಟ್ಟಿದ್ದು, ಅದರಲ್ಲಿ ರಾಜ್ಯಕ್ಕೆ 193 ಕೋಟಿ ಬಿಡುಗಡೆಯಾಗಿದೆ. ಇದರಿಂದ ಬೆಂಗಳೂರಿನಲ್ಲಿ ಯೂನಿಟಿ ಮಾಲ್ ಸ್ಥಾಪಿಸಬೇಕು ಎಂಬ ಚಿಂತನೆಗಳಿದ್ದು, ಮುಖ್ಯಮಂತ್ರಿ ಸಿದ್ದರಾಮಯ್ಯನವರ ಆಶಯದಂತೆ ಮೈಸೂರಿನಲ್ಲಿ ಯೂನಿಟಿ ಮಾಲ್ ಸ್ಥಾಪಿಸಲು ಎಲ್ಲಾ ಪ್ರಯತ್ನಗಳನ್ನು ಮಾಡಲಾಗುತ್ತಿದೆ. ಈಗಾಗಲೇ ಅಧಿಕಾರಿಗಳ ತಂಡ ಮಂಡಕಳ್ಳಿ ವಿಮಾನ ನಿಲ್ದಾಣದ ಸಮೀಪ ಹಾಗೂ ಸರ್ಕಾರಿ ಅತಿಥಿಗೃಹದ ಆವರಣದ ಜಾಗ ಕೇಳಿದ್ದಾರೆ. ಇನ್ನು ಅದರ ಬಗ್ಗೆ ಸ್ಪಷ್ಟ ನಿಲುವು ಪ್ರಕಟಿಸಿಲ್ಲ. ಆದರೆ, ಪ್ರತಾಪ ಸಿಂಹ ಮೈಸೂರಿಗೆ ನನ್ನ ಶ್ರಮದಿಂದ ಯೂನಿಟಿ ಮಾಲ್ ಮಂಜೂರಾಗಿದೆ ಎಂದು ಹೇಳಿರುವುದರಲ್ಲಿ ಅರ್ಥವಿಲ್ಲ. ದೇಶದಾದ್ಯಂತ ಯೂನಿಟಿ ಮಾಲ್ ಸ್ಥಾಪಿಸಲಾಗುತ್ತಿದೆ. ದೇಶದ ಎಲ್ಲಾ ರಾಜ್ಯಗಳ ಹಾಗೂ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಸಿಗುವ ವಿಶೇಷ ವಸ್ತುಗಳನ್ನು ಒಂದೇ ಸೂರಿನಡಿ ಲಭ್ಯವಾಗುವಂತೆ ಯೂನಿಟಿ ಮಾಲ್ ಸ್ಥಾಪಿಸುವ ಉದ್ದೇಶ ಹೊಂದಲಾಗಿದೆ ಎಂದರು. ಸುದ್ದಿಗೋಷ್ಠಿಯಲ್ಲಿ ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಸಿಇಓ ರಾಜೇಶ್‌ಗೌಡ ಇದ್ದರು.



ದಸರಾ ವಸ್ತುಪ್ರದರ್ಶನದ ಕಚೇರಿಯಲ್ಲಿ ಬುಧವಾರ ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಅಯೂಬ್ ಖಾನ್ ಮಾತನಾಡಿದರು. ಪ್ರಾಧಿಕಾರದ ಸಿಇಓ ರಾಜೇಶ್‌ಗೌಡ ಅವರನ್ನು ಕಾಣಬಹುದು.

ದಕ್ಷಿಣ ಪಾಕ, ಕಾಂಟಿನೆಂಟಲ್ ಹೋಟೆಲ್ ಇಂದು ಉದ್ಘಾಟನೆ



ಮೈಸೂರು,ಮಾ.13(ಆರ್‌ಕೆ)– ಮೈಸೂರಿನ ನಜರ್‌ಬಾದ್‌ನ ಮಿನಿವಿಧಾನಸೌಧದ ಬಳಿ ಯೂನಿಟಿ ಬಿಲ್ಡಿಂಗ್‌ನಲ್ಲಿ ಆರಂಭವಾಗಲಿರುವ ದಕ್ಷಿಣ ಪಾಕ ಸಸ್ಯಾಹಾರಿ ಮತ್ತು ಕಾಂಟಿನೆಂಟಲ್ ಇನ್ ಅಂಡ್ ಸೂಟ್ಸ್ ಹೋಟೆಲ್ ಅನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ನಾಳೆ (ಮಾ.14) ಬೆಳಗ್ಗೆ 11 ಗಂಟೆಗೆ ಉದ್ಘಾಟಿಸುವರು ಎಂದು ಸಪ್ತಪದಿ ಅಸೋಸಿಯೇಟ್ಸ್ ವ್ಯವಸ್ಥಾಪಕ ಪಾಲುದಾರರಾದ ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ಸಿ.ನಾರಾಯಣಗೌಡ ತಿಳಿಸಿದ್ದಾರೆ.

ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಸಂಸದರಾದ ಪ್ರತಾಪ್ ಸಿಂಹ, ವಿ.ಶ್ರೀನಿವಾಸಪ್ರಸಾದ್, ಶಾಸಕರಾದ ತನ್ವೀರ್ ಸೇಠ್, ಜಿ.ಟಿ.ದೇವೇಗೌಡ, ಟಿ.ಎಸ್.ಶ್ರೀವತ್ಸ, ಕೆ.ಹರೀಶ್‌ಗೌಡ, ವಿಧಾನಪರಿಷತ್ ಸದಸ್ಯರಾದ ಮರಿತಿಬ್ಬೇಗೌಡ, ಡಾ.ಡಿ.ತಿಮ್ಮಯ್ಯ, ಸಿ.ಎನ್.ಮಂಜೇಗೌಡ, ಮಾಜಿ ಶಾಸಕರಾದ ಎಲ್.ನಾಗೇಂದ್ರ, ಸಂದೇಶ್ ನಾಗರಾಜ್ ಸೇರಿದಂತೆ ಹಲವು ಗಣ್ಯರು ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವರು ಎಂದು ಪಾಲುದಾರರಾದ ಕೆ.ಆರ್. ಸತ್ಯನಾರಾಯಣ್ ಹಾಗೂ ಚಿಕ್ಕಕೆಂಪೇಗೌಡ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಯುವ ಜನತೆಯಲ್ಲಿ ನಾಯಕತ್ವ ಗುಣ ಬೆಳೆಸುವ ಕಾರ್ಯಾಗಾರ



ಮೈಸೂರು, ಮಾ. 13– ರೋಟರಿ ಮೈಸೂರು ಮಿಡ್ ಟೌನ್ ಆಶ್ರಯದಲ್ಲಿ ಮೈಸೂರು ವಿವಿ ವಿಜ್ಞಾನ ಭವನದಲ್ಲಿ ಯುವಜನತೆಯಲ್ಲಿ ನಾಯಕತ್ವದ ಗುಣ ಬೆಳೆಸುವ ಉದ್ದೇಶದ ಎರಡು ದಿನಗಳ ಕಾರ್ಯಾಗಾರ ಆಯೋಜಿಸಲಾಗಿತ್ತು.

ಈ ವೇಳೆ ತಜ್ಞವೈದ್ಯರಾದ ಡಾ. ರಘುನಾಥ ಆಲದಕಟ್ಟಿ ಮಾತನಾಡಿ, ಇತ್ತೀಚಿನ ವರ್ಷಗಳಲ್ಲಿ ಯುವಜನರೇ ಹೃದಯ ಸ್ತಂಭನ, ಹೃದಯಾಘಾತದಿಂದ ಸಾವಿಗೀಡಾಗುತ್ತಿರುವುದು ಆತಂಕದ ವಿಷಯವಾಗಿದೆ. ಆದರೆ ಅಂತಹ ತುರ್ತು ಸಂದರ್ಭ ನಿಭಾಯಿಸುವ ನಿಟ್ಟಿನಲ್ಲಿ ಯುವಜನತೆಗೆ ಸೂಕ್ತ ಕೌಶಲ್ಯ ತರಬೇತಿ ನೀಡಿದ್ದಲ್ಲಿ ಪ್ರಥಮ ಚಿಕಿತ್ಸೆ ಮೂಲಕ ಅನೇಕರ ಜೀವ ಉಳಿಸಬಹುದಾಗಿದೆ ಎಂದು ತಿಳಿಸಿದರು.

ಹೃದಯಾಘಾತದ ವೇಳೆ ರೋಗಿಗಳು ಎದೆನೋವು ಮೊದಲಾದ ಸಮಸ್ಯೆ ಎದುರಿಸುತ್ತಾರೆ. ಹತ್ತಿರದ ಆಸ್ಪತ್ರೆಗೆ ಕೂಡಲೇ ತೆರಳಲು ಸಾಧ್ಯವಾಗದಿರುವುದು ಅಥವಾ ಸೂಕ್ತ ಸಮಯದಲ್ಲಿ ಚಿಕಿತ್ಸೆ ದೊರೆಯದಿರುವುದು ಸಾವಿಗೆ ಕಾರಣಾಗಬಹುದೆಂದು ಎಚ್ಚರಿಸಿದರು.

ಯಾವೊಬ್ಬ ವ್ಯಕ್ತಿ ಹೃದಯಾಘಾತದ ಸಮಸ್ಯೆ ಎದುರಿಸುವ ವೇಳೆ ಆಗಮಿಸುವ ಜೀವರಕ್ಷಕ ಸಿಬ್ಬಂದಿ ತಮ್ಮೊಡನೆ ಈ ಸಾಧನ ತರಲಿದ್ದು, ಅದನ್ನು ಬಳಸಿಕೊಂಡು ತಕ್ಷಣ ಅಗತ್ಯವಾದ ಚಿಕಿತ್ಸೆ ನೀಡುತ್ತಾರೆ. ಹೀಗಾಗಿ ರೋಗಿಯ ಜೀವ ಉಳಿಸುತ್ತಾರೆ. 1947ರಲ್ಲಿ ಪ್ರಥಮ ಬಾರಿಗೆ ಈ ಸಾಧನ ಬಳಸಲಾಯಿತಾದರೂ, 1957ರಲ್ಲಿ ಎಲ್ಲೆಡೆ ಕೊಂಡೊಯ್ಯಬಹುದಾದ ಪೋರ್ಟಬಲ್ ಸಾಧನ ತಯಾರಿಸಲಾಯಿತು. ಈ ಬಳಿಕ ಅಸಂಖ್ಯಾ ರೋಗಿಗಳ ಜೀವ ಉಳಿದಂತಾಗಿದೆ ಎಂದರು. ರೋಟರಿ ಪದಾಧಿಕಾರಿಗಳಾದ ಎಚ್.ಆರ್. ಕೇಶವ್, ಡಿ.ಶ್ರೀನಿವಾಸನ್, ಸತ್ಯೇಂದ್ರ ಕಶ್ಯಪ್, ಮೋಹನ್ ಗುರುಮೂರ್ತಿ, ಡಾ.ಕೆ.ಎ.ಪ್ರಹ್ಲಾದ್ ಇನ್ನಿತರರಿದ್ದರು.



2023–24ನೇ ಸಾಲಿನ ಅಖಿಲ ಭಾರತ ಅಂತರ ವಿವಿ ಪುರುಷರ ಮತ್ತು ಮಹಿಳೆಯರ ಕರಾಟೆ ಪಂದ್ಯಾವಳಿಯು ಮಾ.16ರಿಂದ 19ರವರೆಗೆ ಚಂಡೀಗಢ್‌ನ ಪಂಜಾಬ್ ವಿವಿಯಲ್ಲಿ ನಡೆಯಲಿದೆ. ಪಂದ್ಯಾವಳಿಗೆ ಮೈಸೂರು ವಿವಿ ಪುರುಷರ ಮತ್ತು ಮಹಿಳೆಯರ ಕರಾಟೆ ತಂಡ ಭಾಗವಹಿಸಲಿದೆ. ಚಿತ್ರದಲ್ಲಿ (ನಿಂತಿರುವವರು) ಪವನ್, ವಿಜಯಸೂರ್ಯ, ವಿನಯ, ಶಶಾಂಕ್, ತೇಜಸ್, ದಾಕ್ಷಾಯಿಣಿ, ಸಾನಿಯಾ ಫಾತಿಮಾ (ಕುಳಿತಿರುವವರು): ಪ್ರೀತಮ್ (ನಾಯಕ), ಜಸ್ವಂತ್ (ತರಬೇತುದಾರರು) ಡಾ.ಸಿ.ವೆಂಕಟೇಶ್, ನಿರ್ದೇಶಕರು, ಜಯಶ್ರೀ (ವ್ಯವಸ್ಥಾಪಕರು), ಸುಧಾ (ನಾಯಕಿ) ಕಾಣಬಹುದು.


ಜೆಎಸ್‌ಎಸ್ ಕಾನೂನು ಕಾಲೇಜು ವಿದ್ಯಾರ್ಥಿಗಳ ಸಾಧನೆ

ಮೈಸೂರು,ಮಾ.13(ಪಿಎಂ)– ಅಖಿಲ ಭಾರತ ಅಣಕು ನ್ಯಾಯಾಲಯ ಸ್ಪರ್ಧೆಯಲ್ಲಿ ವಿಜೇತರಾದ ಮೈಸೂರಿನ ಜೆಎಸ್‌ಎಸ್ ಕಾನೂನು ಕಾಲೇಜಿನ ಮೂವರು ವಿದ್ಯಾರ್ಥಿಗಳು ಮಾ.15ರಂದು ಮುಂಬೈನಲ್ಲಿ ನಡೆಯುವ 'ವಿಶ್ವ ಗ್ರಾಹಕರ ಹಕ್ಕುಗಳ ದಿನಾಚರಣೆ'ಯಲ್ಲಿ ಬಹುಮಾನ ಸ್ವೀಕರಿಸಲಿದ್ದಾರೆ.

'ಗ್ರಾಹಕರ ಕಾನೂನು' ಕುರಿತಂತೆ ಭಾರತ ಸರ್ಕಾರದ ಗ್ರಾಹಕ ವ್ಯವಹಾರಗಳ ಸಚಿವಾಲಯದ ಗ್ರಾಹಕ ವ್ಯವಹಾರಗಳ ಇಲಾಖೆ ವತಿಯಿಂದ ನಡೆದ ಅಖಿಲ ಭಾರತ ಅಣಕು ನ್ಯಾಯಾಲಯ ಸ್ಪರ್ಧೆಯಲ್ಲಿ ವಿಜೇತರಾದ ಮೈಸೂರಿನ ಜೆಎಸ್‌ಎಸ್ ಕಾನೂನು ಕಾಲೇಜಿನ ವಿದ್ಯಾರ್ಥಿಗಳಾದ ರೋಹನ್ ವಿ.ಗಂಗಾಡ್ಕರ್, ಅಮೂಲ್ಯ ಎನ್.ಪ್ರಸಾದ್, ನಿಕಿತಾ ಸುಸಾನ್ ಈಪೆನ್ ಅವರನ್ನು ಮುಂಬೈನಲ್ಲಿ ನಡೆಯುವ ವಿಶ್ವ ಗ್ರಾಹಕರ ಹಕ್ಕುಗಳ ದಿನಾಚರಣೆಯಲ್ಲಿ ಪಾಲ್ಗೊಂಡು ಬಹುಮಾನ ಸ್ವೀಕರಿಸುವಂತೆ ಆಹ್ವಾನ ನೀಡಲಾಗಿದೆ.

ಅಣಕು ನ್ಯಾಯಾಲಯ ಸ್ಪರ್ಧೆ ನಡೆಸಿದ್ದ ಪುದುಚೇರಿ ಡಾ.ಅಂಬೇಡ್ಕರ್ ಸರ್ಕಾರಿ ಕಾನೂನು ಕಾಲೇಜು ವತಿಯಿಂದ ಜೆಎಸ್‌ಎಸ್ ಕಾನೂನು ಕಾಲೇಜಿನ ವಿದ್ಯಾರ್ಥಿಗಳಿಗೆ ಆಹ್ವಾನ ನೀಡಲಾಗಿದೆ. ಮುಂಬೈನ ಠಾಕೂರ್ ಕಾಲೇಜ್ ಆಫ್ ಇಂಜಿನಿಯರಿಂಗ್‌ನ ಠಾಕೂರ್ ಸಭಾಂಗಣದಲ್ಲಿ ವಿಶ್ವ ಗ್ರಾಹಕರ ಹಕ್ಕುಗಳ ದಿನಾಚರಣೆ ನಡೆಯಲಿದೆ.

ಮಹಿಳಾ ದಿನಾಚರಣೆ ಪ್ರಯುಕ್ತ ವಿವಿಧ ಸ್ಪರ್ಧೆ



ಮೈಸೂರು,ಮಾ.13–ಮೈಸೂರಿನ ನೇಗಿಲಯೋಗಿ ಮಹಿಳಾ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯ ಪ್ರಯುಕ್ತ ವಿವಿಧ ಸ್ಪರ್ಧೆಗಳನ್ನು ನಾಳೆ (ಮಾ.14) ಕೆ.ಜಿ.ಕೊಪ್ಪಲಿನ ನೇಗಿಲಯೋಗಿ ಸೇವಾ ಭವನದಲ್ಲಿ ಆಯೋಜಿಸಲಾಗಿದೆ. ರಾಗಿಯಿಂದ ಮಾಡಲಾಗುವ ವಿವಿಧ ಬಗೆಯ ಖಾದ್ಯಗಳು, ಮನೆಯ ಬಾಗಿಲಿಗೆ ಹೂವು ಮತ್ತು ಎಲೆಗಳಿಂದ ಮಾಡುವ ತೋರಣ ಮತ್ತು ಇತರ ಸ್ಪರ್ಧೆಗಳು ನಡೆಯಲಿವೆ. ಬಹುಮಾನವನ್ನು ಮಾ.29ರಂದು ನಡೆಯುವ ಸಮಾರಂಭದಲ್ಲಿ ನೀಡಲಾಗುವುದು. ಅಧ್ಯಕ್ಷತೆಯನ್ನು ಸಂಘದ ಅಧ್ಯಕ್ಷೆ ಶೋಭ ರಮೇಶ್ ವಹಿಸಲಿದ್ದು, ಮುಖ್ಯ ಅತಿಥಿಯಾಗಿ ಪ್ರಕೃತಿ ಆಹಾರ ತಜ್ಞರಾದ ಜಿ.ಎಂ.ಸುನೀತ, ವಿದ್ವಾನ್ ರಘು ಉಪಸ್ಥಿತರಿರುವರು.

ಉನ್ನತ ಶಿಕ್ಷಣದ ಪುನಶ್ಚೇತನ: ತಂತ್ರಗಳು, ಆವಿಷ್ಕಾರಗಳ ಕುರಿತು ವಿಚಾರ ಸಂಕಿರಣ

ಮೈಸೂರು,ಮಾ.13–ಮೈಸೂರು ಸಂತ ಜೋಸೆಫರ ಶಿಕ್ಷಣ ಮಹಾವಿದ್ಯಾಲಯವು ಮಾ.15ರಂದು ಬೆಳಗ್ಗೆ 10 ಗಂಟೆಗೆ ಉನ್ನತ ಶಿಕ್ಷಣದ ಪುನಶ್ಚೇತನ: ತಂತ್ರಗಳು ಮತ್ತು ಆವಿಷ್ಕಾರಗಳ ಕುರಿತು ವಿಚಾರ ಸಂಕಿರಣ ಏರ್ಪಡಿಸಿದೆ. ವಿಚಾರ ಸಂಕಿರಣದಲ್ಲಿ ಎಂಡಿಇಎಸ್‌ನ ಕಾರ್ಯದರ್ಶಿ ವಿಜಯ್‌ಕುಮಾರ್, ಆಡಳಿತ ನಿರ್ವಾಹಕ ಅವಿನಾಶ್ ಉಪಸ್ಥಿತರಿರುವರು. ಆರ್‌ಐಇ ಪ್ರಾಂಶುಪಾಲ ಪ್ರೊ.ಯಜ್ಞಮೂರ್ತಿ ಶ್ರೀಕಾಂತ್ ವಿಚಾರ ಸಂಕಿರಣ ಉದ್ಘಾಟಿಸಲಿದ್ದಾರೆ. ಸಂಪನ್ಮೂಲ ವ್ಯಕ್ತಿಗಳಾಗಿ ಡಾ.ಲಾನ್ಸಿ ಡಿಸೋಜಾ, ರೆ. ಫಾ.ಅವಿನಾಶ್, ಡಾ.ಎಸ್.ಪ್ರಭುಶಂಕರ್, ಡಾ. ಪ್ರಿಯಾ ಮ್ಯಾಥ್ಯೂ, ಡಾ.ಆಶಾ ಪತ್ರೋಶ್ ಭಾಗವಹಿಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಮೈಸೂರಲ್ಲಿ ನಮೋ 'ಯುವ ಚೌಪಾಲ್' ಕಾರ್ಯಕ್ರಮ



ಮೈಸೂರು,ಮಾ.13–ಮೈಸೂರು ನಗರ ಬಿಜೆಪಿ ಯುವ ಮೋರ್ಚಾ ವತಿಯಿಂದ ನಮೋ "ಯುವ ಚೌಪಾಲ್ " ಕಾರ್ಯಕ್ರಮದಡಿ ಚಾಮರಾಜ ವಿಧಾನಸಭಾ ಕ್ಷೇತ್ರದಲ್ಲಿ ಗೋಕುಲಂ, 6ನೇ ವಾರ್ಡಿನ ಯುವಕರು ಹಾಗೂ ವಾರ್ಡ್ ನಂ.58 ಚಾಮುಂಡೇಶ್ವರಿ ಕ್ಷೇತ್ರದ ಯುವಕರು, ವಿಜಯನಗರ ಚಾಮುಂಡೇಶ್ವರಿ ಕ್ಷೇತ್ರ ಗ್ರಾಮಾಂತರ ಯುವಕರೊಂದಿಗೆ ಪ್ರಧಾನಿ ನರೇಂದ್ರ ಮೋದಿಯವರ ಅಭಿವೃದ್ಧಿ ಕಾರ್ಯಗಳನ್ನು ತಿಳಿಸಲಾಯಿತು.

ಈ ವೇಳೆ ಮೈಸೂರು ನಗರ ಪ್ರಧಾನ ಕಾರ್ಯದರ್ಶಿ ಗಿರಿಧರ್, ಮೈಸೂರು ನಗರ ಯುವ ಮೋರ್ಚಾ ಅಧ್ಯಕ್ಷ ರಾಕೇಶ್ ಗೌಡ, ಪ್ರಧಾನ ಕಾರ್ಯದರ್ಶಿಗಳಾದ ಡಿ.ಲೋಹಿತ್, ಸಚಿನ್, ಮೈಸೂರು ಮಹಾನಗರಪಾಲಿಕೆ ಮಾಜಿ ಸದಸ್ಯ ಶರತ್, ಸಂಚಾಲಕ ಭರತ್, ಚಾಮರಾಜ ವಿಧಾನಸಭಾ ಕ್ಷೇತ್ರ ಮಂಡಲ ಅಧ್ಯಕ್ಷ ದಿನೇಶ್‌ಗೌಡ, ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದ ಮಂಡಲ ಅಧ್ಯಕ್ಷ ರಾಕೇಶ್‌ಭಟ್, ಯುವ ಮುಖಂಡರಾದ ಕಾರ್ತಿಕ್ ಮರಿಯಪ್ಪ, ಅರ್ಜುನ್, ಶಿವು, ನಿಖಿಲ್, ಪ್ರಕಾಶ್, ಕಿರಣ್, ಅಶೋಕ್, ಮನೀಷ್, ಚಾಮುಂಡೇಶ್ವರಿ ಗ್ರಾಮಂತರ ಯುವ ಮುಖಂಡರಾದ ಶಿವು ಮತ್ತಿತರರು ಉಪಸ್ಥಿತರಿದ್ದರು.

ರೈತರಿಗೆ ತರಬೇತಿ

ಮೈಸೂರು,ಮಾ.13– ನಾಗನಹಳ್ಳಿಯ ಜಿಲ್ಲಾ ಕೃಷಿ ತರಬೇತಿ ಕೇಂದ್ರದಲ್ಲಿ ಮಾ.15ರಂದು ರೇಷ್ಮೆಕೃಷಿ ನೂತನ ಸಾಕಾಣಿಕಾ ಪದ್ಧತಿಗಳು ಮತ್ತು ಮಾರುಕಟ್ಟೆ ವ್ಯವಸ್ಥೆ ವಿಷಯ ಕುರಿತು ರೈತರು ಮತ್ತು ರೈತ ಮಹಿಳೆಯರಿಗೆ ಒಂದು ದಿನದ ತರಬೇತಿ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ. ತರಬೇತಿಯಲ್ಲಿ ಭಾಗವಹಿಸುವ ರೈತರು, ರೈತ ಮಹಿಳೆಯರಿಗೆ ಊಟದ ವ್ಯವಸ್ಥೆಯನ್ನು ಒದಗಿಸಲಾಗುವುದು.

ಆಸಕ್ತ ರೈತರು ಕೃಷಿ ಅಧಿಕಾರಿ ಎಲ್.ಮಾಲತಿ ಅವರ ದೂ.ಸಂ:8277933116ಗೆ ಕರೆ ಮಾಡಿ ತಮ್ಮ ಹೆಸರುಗಳನ್ನು ನೋಂದಾಯಿಸಿಕೊಳ್ಳಬಹುದು. ಮೈಸೂರು ಜಿಲ್ಲೆಯ 50 ರೈತರು, ರೈತ ಮಹಿಳೆಯರಿಗೆ ಮಾತ್ರ ಅವಕಾಶವಿದ್ದು, ಮೊದಲು ನೋಂದಣಿ ಮಾಡಿದವರಿಗೆ ಹೆಚ್ಚಿನ ಆದ್ಯತೆ ನೀಡಲಾಗುವುದು.



ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ಮೈಸೂರಿನ ರಾಜೇಂದ್ರ ನಗರದ ಶ್ರೀ ಛಾಯಾದೇವಿ ಶಿಕ್ಷಣ ಮಹಾವಿದ್ಯಾಲಯದಲ್ಲಿ ಹಮ್ಮಿಕೊಳ್ಳಲಾಗಿತ್ತು. ವೃತ್ತ ನಿರೀಕ್ಷಕಿ ಎಂ.ಗೀತಾ ಕಾರ್ಯಕ್ರಮವನ್ನು ಉದ್ಘಾಟಿಸಿದರು. ಸಂಸ್ಥೆಯ ಅಧ್ಯಕ್ಷ ಡಾ.ಭಾನುಪ್ರಕಾಶ್ ಅಧ್ಯಕ್ಷತೆ ವಹಿಸಿದ್ದರು. ಈ ವೇಳೆ ಪ್ರಾಥಮಿಕ ಆರೋಗ್ಯ ಕೇಂದ್ರ ರಾಜೇಂದ್ರನಗರದ ನರ್ಸ್ ಮೇರಿ ಹಾಗೂ ಆಶಾ ಕಾರ್ಯಕರ್ತೆಯರನ್ನು ಸನ್ಮಾನಿಸಲಾಯಿತು. ಕಾಲೇಜಿನ ಪ್ರಾಂಶುಪಾಲರಾದ ಡಾ.ಅಂತೋನಿ ಪೌಲ್‌ರಾಜ್, ಅಧ್ಯಾಪಕರು ಮತ್ತು ಪ್ರಶಿಕ್ಷಣಾರ್ಥಿಗಳು ಉಪಸ್ಥಿತರಿದ್ದರು.

ಗ್ಯಾರಂಟಿ ಸಮೀಕ್ಷೆಗೆ ವಿಪಕ್ಷ ನಾಯಕ ಅಶೋಕ್ ವ್ಯಂಗ್ಯ



ಬೆಂಗಳೂರು,ಮಾ.13(ಕೆಎಂಶಿ)– ರೈತರ ಆತ್ಮಹತ್ಯೆ, ಕೃಷಿ ಕಾರ್ಮಿಕರು, ನೇಕಾರರು, ಮೀನುಗಾರರು ಹಾಗೂ ಕುಡಿಯುವ ನೀರಿನ ಸಮಸ್ಯೆ ಕುರಿತು ಸಮೀಕ್ಷೆ ನಡೆಸದೆ, ಮುಖ್ಯ ಮಂತ್ರಿ ಸಿದ್ದರಾಮಯ್ಯ ನೂರಾರು ಕೋಟಿ ರೂ. ವೆಚ್ಚ ಮಾಡಿ ಗ್ಯಾರಂಟಿಗಳ ಬಗ್ಗೆ ಸಮೀಕ್ಷೆ ನಡೆಸುತ್ತಿದ್ದಾರೆ ಎಂದು ವಿಧಾನ ಸಭೆಯ ವಿರೋಧ ಪಕ್ಷದ ನಾಯಕ ಆರ್.ಅಶೋಕ್ ಇಂದಿಲ್ಲಿ ಟೀಕಿಸಿದ್ದಾರೆ.

ಈ ಕುರಿತು ಟ್ವೀಟ್ ಮಾಡಿರುವ ಅವರು, ಹೊಟ್ಟೆಪಾಡಿಗಾಗಿ ಗುಳೆ ಹೋಗುತ್ತಿರುವ ಲಕ್ಷಾಂತರ ಕೂಲಿ ಕಾರ್ಮಿಕರ ಬಗ್ಗೆ ಸಮೀಕ್ಷೆ ನಡೆಸಲಿಲ್ಲ, ರಾಜಧಾನಿ ಬೆಂಗಳೂರಿನಲ್ಲಿ ಎದುರಾಗಿರುವ ಕುಡಿಯುವ ನೀರಿನ ಸಮಸ್ಯೆ ಬಗ್ಗೆ ಸಮೀಕ್ಷೆ ನಡೆಸಲಿಲ್ಲ. ಆದರೆ ಗ್ಯಾರಂಟಿ ಬಗ್ಗೆ ಹತ್ತಾರು ಮೂಲಗಳಿಂದ ಸಮೀಕ್ಷೆ ಮಾಡಿಸಲು ಮುಖ್ಯಮಂತ್ರಿ ಅವರಿಗೆ ಎಲ್ಲಿಲ್ಲದ ಆಸಕ್ತಿ, ಆತುರವಿದೆ. ಕಳೆದ 9 ತಿಂಗಳ ಆಡಳಿತದಲ್ಲಿ ಕಾಂಗ್ರೆಸ್ ಸರ್ಕಾರ ರಾಜ್ಯವನ್ನು ಅಭಿವೃದ್ಧಿ ಶೂನ್ಯ ಮಾಡಿದೆ, ಲೋಕಸಭಾ ಚುನಾವಣೆಯಲ್ಲಿ ಜನರಿಗೆ ಮುಖ ತೋರಿಸಲು ಸಮೀಕ್ಷೆಗಳ ಮೂಲಕ ಗ್ಯಾರಂಟಿ ಯೋಜನೆಗಳ ಸರ್ಟಿಫಿಕೇಟ್ ಪಡೆಯುವ ಹಠಕ್ಕೆ ಬಿದ್ದಿದೆ.

ಗ್ಯಾರಂಟಿ ಯೋಜನೆಗಳು ನಿಜವಾಗಿಯೂ ಜನರಿಗೆ ತಲುಪಿದ್ದರೆ, ಜನ ಮೆಚ್ಚಿದ್ದರೆ ಸಮೀಕ್ಷೆ ನಡೆಸುವ ಅಗತ್ಯವೇನಿದೆ ಎಂದಿದ್ದಾರೆ. ಜನರ ಬದುಕಿನ ಮೇಲೆ ಗ್ಯಾರಂಟಿ ಯೋಜನೆಗಳ ಪರಿಣಾಮ ತಿಳಿಯಲು, ಯೋಜನೆ ಜಾರಿಯಾಗಿ ಒಂದು ವರ್ಷ ಕಳೆದಿರಬೇಕು, ತರಾತುರಿಯಲ್ಲಿ ಮೂರು ದಿನಗಳಲ್ಲಿ ಸಮೀಕ್ಷೆ ಮಾಡಲು ಹೇಗೆ ಸಾಧ್ಯ.


ಖಾಸಗಿ ಸಂಸ್ಥೆಯ ಸಮೀಕ್ಷೆಗೆ ಈಗಾಗಲೇ ಒಂದು ಕೋಟಿ ರೂ. ವೆಚ್ಚ ಮಾಡಿ, ಈಗ ಮತ್ತೆ ಮೂರು ದಿನದೊಳಗೆ ಸಮೀಕ್ಷೆ ಪೂರ್ಣಗೊಳಿಸುವಂತೆ ಸೂಚಿಸಿರುವುದು ಅವೈಜ್ಞಾನಿಕ. ಗ್ಯಾರಂಟಿ ಅನುಷ್ಠಾನಕ್ಕೆ ಸಮಿತಿ ರಚಿಸಿ, ಸಿಕ್ಕಸಿಕ್ಕವರಿಗೆಲ್ಲಾ ಸಂಪುಟ ದರ್ಜೆ ಸ್ಥಾನಮಾನ ನೀಡಿ 16 ಕೋಟಿ ರೂ. ದುಂದು ವೆಚ್ಚ ಮಾಡಿದ್ದಲ್ಲದೆ, 1.2 ಲಕ್ಷ 'ಗ್ಯಾರಂಟಿ ಸ್ವಯಂ ಸೇವಕರ' ಹುದ್ದೆ ಸೃಷ್ಟಿಸುವ ಮೂಲಕ 12 ಕೋಟಿ ರೂ. ವ್ಯರ್ಥ ಮಾಡಲಾಗಿದೆ ಎಂದು ಟೀಕಿಸಿದ್ದಾರೆ.

ಕುಡಿಯುವ ನೀರಿನ ಸಮಸ್ಯೆ: ಸಹಾಯವಾಣಿ ಸ್ಥಾಪನೆ



ಮೈಸೂರು,ಮಾ.13–ಬೇಸಿಗೆಯಲ್ಲಿ ಗ್ರಾಮೀಣ ಪ್ರದೇಶದಲ್ಲಿ ಕುಡಿಯುವ ನೀರಿನ ಸಮಸ್ಯೆ ಪರಿಹರಿಸುವ ನಿಟ್ಟಿನಲ್ಲಿ ಮೈಸೂರು ತಾಲೂಕು ಪಂಚಾಯಿತಿ ವ್ಯಾಪ್ತಿಯ ಗ್ರಾಮ ಪಂಚಾಯಿತಿಗಳಿಗೆ ಮೈಸೂರು ತಾಲೂಕು ಕೇಂದ್ರದಲ್ಲಿ ಜಲಸೇವಾ ನಿಯಂತ್ರಣ ಕೊಠಡಿಯನ್ನು ಸ್ಥಾಪಿಸಲಾಗಿದ್ದು, ಸಹಾಯವಾಣಿ ಸ್ಥಿರ ದೂ.ಸಂ: 0821–2414433 ಅನ್ನು ಸಂಪರ್ಕಿಸಬಹುದು ಎಂದು ಮೈಸೂರು ತಾಲೂಕು ಪಂಚಾಯಿತಿಯ ಕಾರ್ಯನಿರ್ವಾಹಕ ಅಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

14.3.2024 ಗುರುವಾರ, ಮಳೆ ನಕ್ಷತ್ರ: ಪೂರ್ವಭಾದ್ರ 4.03.2024ರಿಂದ 16.03.2024
ಶ್ರೀ ಶೋಭಕೃತ್ ನಾಮ ಸಂವತ್ಸರ, ಉತ್ತರಾಯಣ, ಶಿಶಿರ ಋತು, ಪಾಲ್ಗುಣ ಮಾಸ,
ಶುಕ್ಲ ಪಕ್ಷ, ತಿಥಿ: ಚೌತಿ, ನಕ್ಷತ್ರ: ಭರಣಿ, ರಾಹುಕಾಲ: ಮಧ್ಯಾಹ್ನ 1.30ರಿಂದ 3ರವರೆಗೆ

■ **ರಾಮ್‌ಸನ್ಸ್ ಬೊಂಬೆ ಮನೆ :** ದಸರೆ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10ರಿಂದ ಸಂಜೆ 7ರವರೆಗೆ.

■ **ಎಂಎಂಕೆ ಮತ್ತು ಎಸ್‌ಡಿಎಂ ಮಹಿಳಾ ವಿದ್ಯಾಲಯ :** ಬಯೋಕೆಮಿಸ್ಟ್ರಿ–ಎಮರ್ಜಿಂಗ್ ಸೈನ್ಸ್ ಅಂಡ್ ಟೆಕ್ನಾಲಜಿ ಕುರಿತು ರಾಷ್ಟ್ರೀಯ ವಿಚಾರ ಸಂಕಿರಣ, ಮುಖ್ಯ ಅತಿಥಿಗಳು : ಸಿಎಸ್‌ಆರ್‌ಟಿಐ ನಿವೃತ್ತ ಜಂಟಿ ನಿರ್ದೇಶಕ ಡಾ. ಟಿ. ತಿಪ್ಪೇಸ್ವಾಮಿ, ಪ್ರಾಸ್ತಾವಿಕ ನುಡಿ : ಸಿಎಸ್‌ಐಆರ್–ಸಿಎಫ್‌ಟಿಆರ್‌ಐ ಮುಖ್ಯ ವಿಜ್ಞಾನಿ ಡಾ. ಆರ್.ಪಿ. ಸಿಂಗ್, ಅಧ್ಯಕ್ಷತೆ : ವಿದ್ಯಾಲಯ ಪ್ರಿನ್ಸಿಪಾಲ್ ಪ್ರೊ. ಸಾಯಿನಾಥ್ ಮಲ್ಲಿಗೆಮಾಡು, ಸ್ಥಳ: ಕಾಲೇಜು ಸಭಾಂಗಣ, ಬೆಳಗ್ಗೆ 9.30ಕ್ಕೆ.

■ **ಮರಿಮಲ್ಲಪ್ಪ ಪ್ರೌಢಶಾಲೆ:** ಬೀಳ್ಕೊಡುಗೆ ಮತ್ತು ಶಾಲಾ ವಾರ್ಷಿಕ ಸಂಚಿಕೆ ಬಿಡುಗಡೆ ಸಮಾರಂಭ, ಅಧ್ಯಕ್ಷತೆ: ಮರಿಮಲ್ಲಪ್ಪ ವಿದ್ಯಾಸಂಸ್ಥೆ ಗೌರವ ಕಾರ್ಯದರ್ಶಿ ಪ್ರೊ.ಕೆ.ಎನ್.ಪಂಚಾಕರಸ್ವಾಮಿ, ಉಪಸ್ಥಿತರು: ಡಾ.ಎಂ.ಎನ್.ಭೀಮೇಶ್, ಮಂಗಳ ಮುದ್ದುಮಾದಪ್ಪ, ಎಸ್.ಮಮತಾ, ಹೆಚ್.ಎಸ್. ಮಹೇಶ್, ಸ್ಥಳ: ಶಾಲಾ ಆವರಣ, ಬೆಳಗ್ಗೆ 9.30ಕ್ಕೆ.

■ **ಶ್ರೀ ಶಿವಯೋಗಿ ಸ್ವಾಮಿ ಪ್ರೌಢಶಾಲೆ, ಜಿಲ್ಲಾ ಅಂಧತ್ವ ನಿವಾರಣೆ ಸಂಸ್ಥೆ, ಎಂಆರ್‌ಸಿ ಚಾರಿಟೆಬಲ್ ಟ್ರಸ್ಟ್ ಕಣ್ಣಿನ ಆಸ್ಪತ್ರೆ :** ಉಚಿತ ಕಣ್ಣಿನ ಪೊರೆ ತಪಾಸಣೆ ಮತ್ತು ಚಿಕಿತ್ಸಾ ಶಿಬಿರ, ಸ್ಥಳ: ಶಾಲಾ ಆವರಣ, ಗಾಂಧಿನಗರ, ಬೆಳಗ್ಗೆ 9 ರಿಂದ.

■ **ಶ್ರೀ ನಟರಾಜ ಮಹಿಳಾ ವಸತಿ ಪ್ರಥಮ ದರ್ಜೆ ಕಾಲೇಜು :** ರಾಷ್ಟ್ರಕವಿ ಜಿ.ಎಸ್.ಶಿವರುದ್ರಪ್ಪ ಸಾಹಿತ್ಯ ಸಂವಾದ, ಸಾನ್ನಿಧ್ಯ : ಶ್ರೀ ನಟರಾಜ ಪ್ರತಿಷ್ಠಾನ ಅಧ್ಯಕ್ಷ ಶ್ರೀ ಚಿದಾನಂದ ಸ್ವಾಮೀಜಿ, ಸಂವಾದದಲ್ಲಿ : ಡಾ. ಜಿ.ಎಸ್. ಶಿವರುದ್ರಪ್ಪನವರ ಸುಪುತ್ರ ಡಾ. ಜಿ.ಎಸ್. ಜಯದೇವ್, ಅಧ್ಯಕ್ಷತೆ : ಶ್ರೀ ನಟರಾಜ ಪ್ರತಿಷ್ಠಾನ ವಿಶೇಷಾಧಿಕಾರಿ ಪ್ರೊ. ಎಸ್. ಶಿವರಾಜಪ್ಪ, ಉಪಸ್ಥಿತರು : ಕಾಲೇಜು ಪ್ರಾಂಶುಪಾಲ ಡಾ. ಎಂ. ಶಾರದಾ, ಉಪ ಪ್ರಾಂಶುಪಾಲ ಡಾ. ಜಿ. ಪ್ರಸಾದಮೂರ್ತಿ, ಸ್ಥಳ: ಶ್ರೀನಟರಾಜ ಸಭಾ ಭವನ, ಬೆಳಗ್ಗೆ 11ಕ್ಕೆ.

■ **ಮೈಸೂರು ವಿಶ್ವವಿದ್ಯಾನಿಲಯ, ಗಾಂಧಿ ಅಧ್ಯಯನ ಕೇಂದ್ರ, ಗಾಂಧಿ ಭವನ, ಮಹಾರಾಜ ಕಾಲೇಜು:** ಶರಣ ತತ್ವ ಮತ್ತು ಗಾಂಧಿ ತತ್ವ: ಅನುಸಂಧಾನ ಕುರಿತು ವಿಶೇಷ ಉಪನ್ಯಾಸ, ಉದ್ಘಾಟನೆ: ಮೈಸೂರು ವಿವಿ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್, ಚಿಂತಕ ಶಂಕರ ದೇವನೂರ ಅವರಿಂದ ಉಪನ್ಯಾಸ, ಅಧ್ಯಕ್ಷತೆ: ಮಹಾರಾಜ ಕಾಲೇಜು ಪ್ರಿನ್ಸಿಪಾಲ್ ಪ್ರೊ.ಎಚ್.ಸೋಮಶೇಖರಪ್ಪ, ಉಪಸ್ಥಿತರು: ಕಾಲೇಜು ಆಡಳಿತಾಧಿಕಾರಿ ಪ್ರೊ.ವಿ.ಷಣ್ಮುಗಂ, ಸ್ಥಳ: ಜೂನಿಯರ್ ಬಿ.ಎ.ಹಾಲ್, ಮಹಾರಾಜ ಕಾಲೇಜು, ಮಧ್ಯಾಹ್ನ 2.30ಕ್ಕೆ.

■ **ಶ್ರೀ ಬಸವೇಶ್ವರ ಸಾಂಸ್ಕೃತಿಕ ಪ್ರತಿಷ್ಠಾನ :** ಕ್ಯಾಲೆಂಡರ್ ಬಿಡುಗಡೆ ಮತ್ತು ಶರಣಯುವಸಿರಿ ಪ್ರಶಸ್ತಿ ಪ್ರದಾನ ಸಮಾರಂಭ, ಸಾನ್ನಿಧ್ಯ : ಶ್ರೀ ಹೊಸಮಠದ ಮಠಾಧ್ಯಕ್ಷ ಶ್ರೀ ಚಿದಾನಂದ ಸ್ವಾಮೀಜಿ, ಉದ್ಘಾಟನೆ : ಸಾಹಿತಿ ಬನ್ನೂರು ಕೆ. ರಾಜು, ಕ್ಯಾಲೆಂಡರ್ ಬಿಡುಗಡೆ : ಮುಡಾ ಅಧ್ಯಕ್ಷ ಮರೀಗೌಡ, ಉಪಸ್ಥಿತರು : ನಗರ ಪಾಲಿಕೆ ಮಾಜಿ ಸದಸ್ಯ ಎಂ. ಪ್ರದೀಪ್ ಕುಮಾರ್, ಅಧ್ಯಕ್ಷತೆ : ಸಮಾಜ ಸೇವಕ ಡಾ. ರಘುರಾಂ ವಾಜಪೇಯಿ, ಕವಿ ಡಾ. ಜಯಪ್ಪ ಹೊನ್ನಾಳಿ, ಮಾಲಂಗಿ ಸುರೇಶ್, ಡಾ. ಕೆ. ಲೀಲಾ ಪ್ರಕಾಶ್, ರವಿಕುಮಾರ್, ಸ್ಥಳ: ನಮನ ಕಲಾ ಮಂಟಪ, ಕೃಷ್ಣಮೂರ್ತಿಪುರಂ, ಸಂಜೆ 5.30ಕ್ಕೆ.

■ **ಶ್ರೀರಾಮಕೃಷ್ಣ ಆಶ್ರಮ :** ಸ್ವಾಮಿ ಜ್ಞಾನಯೋಗಾನಂದ ಅವರಿಂದ ಶ್ರೀಮದ್ಭಗವದ್ಗೀತಾ ಕುರಿತು ಉಪನ್ಯಾಸ, ಸ್ಥಳ: ಆಶ್ರಮದ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.

■ **ಶ್ರೀ ರಾಘವೇಂದ್ರಸ್ವಾಮಿ ಸೇವಾ ಸಮಿತಿ :** ಶ್ರೀರಾಘವೇಂದ್ರಸ್ವಾಮಿಗಳ ಪಟ್ಟಾಭಿಷೇಕ ಹಾಗೂ ವರ್ಧಂತಿ ಮಹೋತ್ಸವ, ಬೆಳಗ್ಗೆ 6.30 ರಿಂದ ಶ್ರೀ ಮದನಗೋಪಾಲಕೃಷ್ಣ ಮಹಾಯಾಗ ಹಾಗೂ ಮೃತ್ಯುಂಜಯ ಹೋಮ, ಸ್ಥಳ: ಶ್ರೀ ರಾಘವೇಂದ್ರಸ್ವಾಮಿ ದೇವಸ್ಥಾನ, ಜಯಲಕ್ಷ್ಮಿಪುರಂ.

■ **ಶ್ರೀ ದಂಡಿನ ಮಾರಮ್ಮನವರ ಪೂಜಾ ಮಹೋತ್ಸವ ಸಮಿತಿ :** ಶ್ರೀ ಮನೆಮಂಚಮ್ಮ ಶ್ರೀ ದಂಡಿನ ಮಾರಮ್ಮ, ಬಿಸಿಲು ಮಾರಮ್ಮ ಜಾತ್ರಾ ಮಹೋತ್ಸವ, ಸ್ಥಳ: ದಂಡಿನಮಾರಮ್ಮ ದೇವಸ್ಥಾನ, ಮೈಸೂರು–ಬೆಂಗಳೂರು ರಸ್ತೆ

ಹಾರೋಹಳ್ಳಿ ಗ್ರಾಮ (ಮೈಸೂರು ತಾಲೂಕು)

■ **ಮೈಸೂರು ವಿಶ್ವವಿದ್ಯಾನಿಲಯ, ರಾಷ್ಟ್ರೀಯ ಸೇವಾ ಯೋಜನೆ ಮತ್ತು ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜು:** ವಾರ್ಷಿಕ ವಿಶೇಷ ಶಿಬಿರ, ಬೆಳಗ್ಗೆ 6.30ಕ್ಕೆ ಧ್ವಜಾರೋಹಣ: ಗ್ರಾಮದ ಮುಖಂಡ ಚಂದ್ರು, ಬೆಳಗ್ಗೆ 8.30ಕ್ಕೆ ಶ್ರಮದಾನ, ಕನ್ನಡ ಸಹ ಪ್ರಾಧ್ಯಾಪಕ ಡಾ.ಎನ್.ಆರ್.ಚಂದ್ರೇಗೌಡ ಅವರಿಂದ ಪ್ರಸ್ತುತ ಗ್ರಾಮ ಪರಿಸರದ ಸಾಂಸ್ಕೃತಿಕ ಸ್ಥಿತ್ಯಂತರಗಳು ಕುರಿತು ಉಪನ್ಯಾಸ, ಅಧ್ಯಕ್ಷತೆ: ತಾ.ಪಂ ಸದಸ್ಯ ಸುರೇಶ್ ಕುಮಾರ್, ಮುಖ್ಯ ಅತಿಥಿಗಳು: ಸಂಯೋಜನಾಧಿಕಾರಿ ಡಾ.ಅವರೇಕಾಡು ವಿಜಯ್‌ಕುಮಾರ್, ಗ್ರಾಮದ ಮುಖಂಡರಾದ ಚಲುವರಾಜು, ಮಹದೇವಸ್ವಾಮಿ, ಮಹದೇವಪ್ಪ, ಮರಿಮಾದೇಗೌಡ, ಸಣ್ಣಸ್ವಾಮಿ, ಸ್ಥಳ: ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಹಾರೋಹಳ್ಳಿ ಗ್ರಾಮ, ಮೈಸೂರು ತಾಲೂಕು, ಸಂಜೆ 4.30ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10ಕ್ಕೆ ಮೊಬೈಲ್ ಬಳಸೋಣ ಬನ್ನಿ– ಪ್ರಪಂಚಕ್ಕೆ ಬೆಳಕಿನ ಕಿಂಡಿಯಾದ ಸಾಧನದ ಸದುಪಯೋಗ ಕುರಿತ ಬಾನುಲಿ ಸರಣಿ. ಪ್ರಸ್ತುತಿ–ಮೈಸೂರಿನ ಎನ್. ರವಿಶಂಕರ್, 6.40 ಪದ ಸಂಸ್ಕೃತಿ, ಪ್ರಸ್ತುತಿ–ಡಾ.ಶ್ರೀಧರ ಹೆಗಡೆ ಭದ್ರನ್, 7.15 ಹಸಿರು ಹೊನ್ನು–ಪ್ರಾಯೋಜಿತ ಕಾರ್ಯಕ್ರಮ, 10.00 ಅನೂರಾಧ ಸುರೇಶ್ ಕೃಷ್ಣಮೂರ್ತಿ–ಹಾಡುಗಾರಿಕೆ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ **ಮಧ್ಯಾಹ್ನ:** 12.30 ದೇವರನಾಮ–ವಾಣಿ ಜಯರಾಂ, ವಿಕಾಸ್ ಕಟ್ಟೆ ವಸಿಷ್ಟ, 1.20 ಭಾವಗೀತೆ–ಅಕ್ಷತಾ ಅದ್ದೋನಿ, 4.30 ವಿಜ್ಞಾನ ಭಾರತಿ–ಸರ್.ಸಿ.ವಿ.ರಾಮನ್ ಮಟ್ಟು ರಾಷ್ಟ್ರೀಯ ವಿಜ್ಞಾನ ದಿನಾಚರಣೆ ಬಗ್ಗೆ ಮಾತನಾಡುತಾರೆ ಅಭಿಷೇಕ್ ಬಿ.ಎಸ್., ಮೈಕ್ರೋಪ್ಲಾಸ್ಟಿಕ್ ಕುರಿತು ಸುತ್ತೂರು ಎಸ್.ಮಾಲಿನಿ ಅವರಿಂದ ಮಾಹಿತಿ, ಪ್ರಸ್ತುತಿ–ಜಿ.ಶಾಂತಕುಮಾರ್, 6.50 ಕೃಷಿರಂಗ–ಕೃಷಿ ಪ್ರವಾಸೋದ್ಯಮದ ಪ್ರಾಮುಖ್ಯತೆ ಕುರಿತು ಮಾತನಾಡುತ್ತಾರೆ ಎ.ಎಸ್.ಮಹೇಶ್, 8.00 ಯುವವಾಣಿ–ಯುವಜನತೆ ಮತ್ತು ಮಾನಸಿಕ ಆರೋಗ್ಯ ಕುರಿತು ಮಾತುಕತೆಯಲ್ಲಿ ಭಾಗವಹಿಸುವವರು ದಿಯಾ ಎಸ್.ಅರಸ್, ಪೂನಂ ಸಿಂಗ್ ಸುಬೇದಾರ್, ಸಾತ್ವಿಕೆ ಎಚ್.ಪಿ, ಯತೀಶ್ ಎಸ್. ನಡೆಸಿಕೊಡುತ್ತಾರೆ ದೀಕ್ಷಿತ್ ನಾಯರ್ ಕೆ.ಎಂ., 10.00 ನಾಟಕ 'ವೆಂಕಟರಾಯನ ಪಿಶಾಚಿ' ಮೂಲ ಸಂಸ್ಕೃತಿ ಸಣ್ಣಕಥೆ–ಡಾ.ಮಾಸ್ತಿ ವೆಂಕಟೇಶ್ ಅಯ್ಯಂಗಾರ್, ಬಾನುಲಿ ರೂಪ–ಟಿ.ಎಂ.ಸತೀಶ್, ನಿರ್ದೇಶನ–ಉದಯಾದ್ರಿ, 10.30 ಸವಿನೆನಪು

ಮೈಸೂರು ಮಿತ್ರ

ಮುಖ್ಯಮಂತ್ರಿ ಸಿದ್ದರಾಮಯ್ಯ ಸರ್ಕಾರ ನುಡಿದಂತೆ ನಡೆದಿದೆ; ಗ್ಯಾರಂಟಿ ಸಮಾವೇಶ ಯಶಸ್ವಿಗೊಳಿಸಿ

ಪೂರ್ವಭಾವಿ ಸಭೆಯಲ್ಲಿ ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಮನವಿ



ಗ್ಯಾರಂಟಿ ಯೋಜನೆಗಳ ಫಲಾನುಭವಿಗಳ ಸಮಾವೇಶದ ಪೂರ್ವಭಾವಿ ಸಭೆಯಲ್ಲಿ ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಮಾತನಾಡಿದರು.

ಮೈಸೂರು, ಮಾ.13(ಎಂಕೆ)– ನುಡಿದಂತೆ ನಡೆದಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ರಾಜ್ಯ ಸರ್ಕಾರದ ಗ್ಯಾರಂಟಿ ಯೋಜನೆಗಳ ಫಲಾನುಭವಿಗಳ ಸಮಾವೇಶದಲ್ಲಿ ಕೆ.ಆರ್ ಕ್ಷೇತ್ರದಿಂದ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವಂತೆ ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಕರೆ ನೀಡಿದರು.

ಮೈಸೂರಿನ ಕುವೆಂಪುನಗರದಲ್ಲಿರುವ ಚಿಕ್ಕಮ್ಮಾನಿಕೇತನ ಕಲ್ಯಾಣ ಮಂಟಪದಲ್ಲಿ ಸಮಾವೇಶದ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದ ಅವರು, ಮಾ.15 ರಂದು ಮಹಾರಾಜ ಕಾಲೇಜು ಮೈದಾನದಲ್ಲಿ ಆಯೋಜಿಸಿರುವ ಗ್ಯಾರಂಟಿ ಯೋಜನೆಗಳ ಫಲಾನುಭವಿಗಳ ಸಮಾವೇಶಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಫಲಾನುಭವಿಗಳು ಭಾಗವಹಿಸಬೇಕಾಗಿದ್ದು, ಪಕ್ಷದ ಮುಖಂಡರು ಫಲಾನುಭವಿಗಳನ್ನು ಸಮಾವೇಶಕ್ಕೆ ಕರೆತರುವ ಕಾರ್ಯ ಮಾಡಬೇಕಿದೆ ಎಂದರು.

ಸಿಎಂ ಸಿದ್ದರಾಮಯ್ಯ ಅವರು ಈ ಹಿಂದೆ ಮುಖ್ಯಮಂತ್ರಿ ಆಗಿದ್ದಾಗಲೂ ಅಪಾರ ಜನಮನ್ನಣೆ ಗಳಿಸಿದ್ದರು. ಅದರಂತೆ ಎರಡನೇ ಬಾರೀ ರಾಜ್ಯದ ಮುಖ್ಯಮಂತ್ರಿಯಾಗಿ ಜನತೆಗೆ ನೀಡಿದ್ದ ಐದು ಗ್ಯಾರಂಟಿಗಳನ್ನು ಈಡೇರಿಸಿದ್ದಾರೆ. ಈ ಮೂಲಕ ರಾಜ್ಯದ ಜನರ ವಿಶ್ವಾಸವನ್ನು ಉಳಿಸಿಕೊಂಡಿದ್ದಾರೆ. ಮಹಿಳೆಯರ ಆರ್ಥಿಕ ಸ್ವಾವಲಂಬನೆಗಾಗಿ 'ಶಕ್ತಿ', 'ಗೃಹಲಕ್ಷ್ಮಿ' ಯೋಜನೆಗಳೊಂದಿಗೆ ಅನ್ನಭಾಗ್ಯ, ಗೃಹಜ್ಯೋತಿ ಹಾಗೂ ಯುವನಿಧಿ ಮೂಲಕ ನಿರುದ್ಯೋಗ ಪದವೀಧರರಿಗೂ ಚೈತನ್ಯ ನೀಡಿದ್ದಾರೆ ಎಂದರು.

ಕೃಷ್ಣರಾಜ ವಿಧಾನಸಭಾ ಕ್ಷೇತ್ರದಲ್ಲಿ ಸುಮಾರು 35 ಸಾವಿರಕ್ಕೂ ಹೆಚ್ಚು ಕುಟುಂಬಗಳಿದ್ದು, ಅಷ್ಟೂ ಕುಟುಂಬಗಳು ಒಂದಲ್ಲ ಒಂದು ಗ್ಯಾರಂಟಿ ಯೋಜನೆಗಳ ಫಲಾನುಭವಿಗಳಾಗಿದ್ದಾರೆ. ಅದರಲ್ಲೂ 25,000ಕ್ಕೂ ಹೆಚ್ಚು ಬಿಪಿಎಲ್ ಕುಟುಂಬಸ್ಥರಿದ್ದು, ಎಲ್ಲರಿಗೂ ಗ್ಯಾರಂಟಿ ಯೋಜನೆಗಳು ತಲುಪುತ್ತಿವೆ. ಆದ್ದರಿಂದ ಈ ಎಲ್ಲಾ ಫಲಾನುಭವಿಗಳನ್ನು ಸಮಾವೇಶಕ್ಕೆ ಕರೆತರುವ ಕೆಲಸವಾಗಬೇಕಿದೆ.

ಈ ನಿಟ್ಟಿನಲ್ಲಿ ಕಾಂಗ್ರೆಸ್ ಮುಖಂಡರು, ಕಾರ್ಯಕರ್ತರು ಕ್ಷೇತ್ರದ ಮನೆ ಮನೆಗೆ ತೆರಳಿ, ಸಮಾವೇಶದಲ್ಲಿ ಭಾಗವಹಿಸಲು ಮನವಿ ಮಾಡುವಂತೆ ಸೂಚಿಸಿದರು.

ಬಡವರ ಕಲ್ಯಾಣ ಕಾರ್ಯ ಮಾಡದ ಈ ಹಿಂದಿನ ಬಿಜೆಪಿ ರಾಜ್ಯ ಹಾಗೂ ಕೇಂದ್ರ ಸರ್ಕಾರ, ಕೇವಲ ಕೋಮುವಾದ ಹಿಂದುತ್ವ ಮತ್ತಿತರ ಭಾವನಾತ್ಮಕ ವಿಚಾರಗಳನ್ನು ಮುಂದಿಟ್ಟುಕೊಂಡು ಧರ್ಮ ರಾಜಕಾರಣ ನಡೆಸುವ ಮೂಲಕ ದೇಶದ ಮತ್ತು ರಾಜ್ಯದ ಜನರನ್ನು ವಂಚಿಸುತ್ತಿದೆ. ಸುಳ್ಳುಗಳ ಮೂಲಕ ಜನರ ದಿಕ್ಕು ತಪ್ಪಿಸುವ ಕೆಲಸವನ್ನು ಮಾಡುತ್ತಿದೆ. ಆದರೆ, ರಾಜ್ಯ ಕಾಂಗ್ರೆಸ್ ಸರ್ಕಾರ ಕೊಟ್ಟ ಭರವಸೆಗಳನ್ನು ಯಶಸ್ವಿಯಾಗಿ ಈಡೇರಿಸಿ ಜನರ ವಿಶ್ವಾಸ ಗಳಿಸಿದೆ ಎಂದು ಹೇಳಿದರು.

ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಜಿ.ಸೋಮಶೇಖರ್, ಶ್ರೀಧರ್, ಮಹಿಳಾ ಆಯೋಗದ ಮಾಜಿ ಅಧ್ಯಕ್ಷೆ ಮಂಜುಳಾ ಮಾನಸ, ಮಾಜಿ ಮೇಯರ್‌ಗಳಾದ ಟಿ.ಬಿ ಚಿಕ್ಕಣ್ಣ, ಪುಷ್ಪಲತಾ ಚಿಕ್ಕಣ್ಣ, ಮುಖಂಡರಾದ ರವಿಶಂಕರ್, ವಿಜಯಕುಮಾರ್, ಈಶ್ವರ್ ಚಕ್ಕಡಿ, ಡೈರಿ ವೆಂಕಟೇಶ್, ಮೂರ್ತಿ, ಸುಂದರ್, ನಾಸೀರ್, ಮಹಿಳಾ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ವಿದ್ಯಾ, ಭವ್ಯ, ಲತಾ ರಂಗನಾಥ್, ಯುವ ಕಾಂಗ್ರೆಸ್‌ನ ನಿರಾಲ್ ಶಾ, ರಾಕೇಶ್ ಮತ್ತಿತರರು ಉಪಸ್ಥಿತರಿದ್ದರು.

ಸಿಎಎ ಜಾರಿ ವಿರೋಧಿಸಿ ಮೈಸೂರಲ್ಲಿ ಎಸ್‌ಡಿಪಿಐ ಪ್ರತಿಭಟನೆ



ಕೇಂದ್ರ ಸರ್ಕಾರ ಸಿಎಎ ಕಾಯ್ದೆ ಜಾರಿಗೊಳಿಸಿರುವುದನ್ನು ವಿರೋಧಿಸಿ ಎಸ್‌ಡಿಪಿಐ ಮೈಸೂರು ಜಿಲ್ಲಾ ಘಟಕದ ಪದಾಧಿಕಾರಿಗಳು ಸೆಂಟ್ ಫಿಲೋಮಿನಾ ಚರ್ಚ್ ವೃತ್ತದಲ್ಲಿ ಬುಧವಾರ ಪ್ರತಿಭಟನೆ ನಡೆಸಿದರು.

ಮೈಸೂರು, ಮಾ.13(ಎಸ್‌ಪಿಎನ್)– ಕೇಂದ್ರ ಸರ್ಕಾರ ಪೌರತ್ವ ತಿದ್ದುಪಡಿ ಕಾಯ್ದೆ(ಸಿಎಎ) ಜಾರಿಗೊಳಿಸಿರುವುದನ್ನು ವಿರೋಧಿಸಿ ಸೋಷಿಯಲ್ ಡೆಮಾಕ್ರಟಿಕ್ ಪಾರ್ಟಿ ಆಫ್ ಇಂಡಿಯಾ (ಎಸ್‌ಡಿಪಿಐ) ಮೈಸೂರು ಜಿಲ್ಲಾ ಘಟಕದ ಪದಾಧಿಕಾರಿಗಳು ಸೆಂಟ್ ಫಿಲೋಮಿನಾ ಚರ್ಚ್ ವೃತ್ತದಲ್ಲಿ ಬುಧವಾರ ಪ್ರತಿಭಟನೆ ನಡೆಸಿದರು.

ಎಸ್‌ಡಿಪಿಐ ಜಿಲ್ಲಾಧ್ಯಕ್ಷ ರಫತ್ ವುಲ್ಲಾ ಖಾನ್ ನೇತೃತ್ವದಲ್ಲಿ ಪ್ರತಿಭಟನೆ ನಡೆಸಿ, ಕೇಂದ್ರ ಸರ್ಕಾರದ ವಿರುದ್ಧ ವಿವಿಧ ಘೋಷಣೆಗಳನ್ನು ಕೂಗಿ, ತಮ್ಮ ಆಕ್ರೋಶ ವ್ಯಕ್ತಪಡಿದರು. ನಂತರ ರಾಜ್ಯಾಧ್ಯಕ್ಷ ಅಬ್ದುಲ್ ಮಜೀದ್ ಮಾತನಾಡಿ, ಕೇಂದ್ರ ಸರ್ಕಾರ ಸಿಎಎ ಕಾಯ್ದೆಯನ್ನು ಚುನಾವಣೆಗೋಸ್ಕರ ಜಾರಿ ಮಾಡಿದ್ದು, ಅಸಂವಿಧಾನಿಕ ಎಂದು ಆರೋಪಿಸಿದರು.

ಸಂವಿಧಾನ ವಿರೋಧಿಯಾಗಿರುವ ಸಿಎಎ ಕಾಯ್ದೆಯನ್ನು ಕೇಂದ್ರ ಸರ್ಕಾರ ವಾಪಸ್ ಪಡೆಯುವವರೆಗೂ ಹೋರಾಟ ಮುಂದುವರೆಯಲಿದೆ. ಈ ಕಾಯ್ದೆ ಜಾರಿಯಿಂದ ಅಲ್ಪಸಂಖ್ಯಾತರು, ದಲಿತರು, ಆದಿವಾಸಿ, ಬುಡಕಟ್ಟು ಜನರಿಗೆ ತೊಂದರೆಗಳು ಉಂಟಾಗುತ್ತವೆ ಎಂದು ತಿಳಿಸಿದರು.

ಈ ಕಾಯ್ದೆಯಡಿ ಪಾಕಿಸ್ತಾನ, ಬಾಂಗ್ಲಾದೇಶ ಮತ್ತು ಆಫ್ಘಾನಿಸ್ತಾನದಲ್ಲಿ ಧರ್ಮಧಾರಿತವಾಗಿ ದೌರ್ಜನ್ಯಗೊಳಗಾದ ಅಲ್ಪಸಂಖ್ಯಾತರಿಗೆ ಪೌರತ್ವ ಕೊಡುವುದಾಗಿದೆ. ಇದರಲ್ಲಿ ಮುಸ್ಲಿಮರ ಪರಿಗಣಿಸಿಲ್ಲ. ಹಾಗಾಗಿ ಈ ಕಾಯ್ದೆಯನ್ನು ಎಸ್‌ಡಿಪಿಐ ಪ್ರಬಲವಾಗಿ ವಿರೋಧಿಸುತ್ತದೆ ಎಂದು ತಿಳಿಸಿದರು.

ಈ ಕಾಯ್ದೆಯನ್ನು ಕರ್ನಾಟಕದ ನೆರೆಹೊರೆ ರಾಜ್ಯಗಳಾದ ಕೇರಳ ಮತ್ತು ತಮಿಳುನಾಡು ಜಾರಿ ಮಾಡುವುದಿಲ್ಲ ಎಂದು ಅಲ್ಲಿನ ಮುಖ್ಯಮಂತ್ರಿಗಳು ಘೋಷಿಸಿದ್ದಾರೆ. ಇದೇ ರೀತಿಯಲ್ಲಿ ಕರ್ನಾಟಕ ರಾಜ್ಯದಲ್ಲಿ ಸಿಎಎ ಜಾರಿ ಮಾಡುವುದಿಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿಕೆ ನೀಡಬೇಕು. ಭಾರತದ ಸಂವಿಧಾನ ಹಿಂದೂ, ಮುಸ್ಲಿಂ, ಕ್ರೈಸ್ತ ಧರ್ಮ ಸೇರಿದಂತೆ ಎಲ್ಲರಿಗೂ ಸಮಾನ ಸ್ವಾತಂತ್ರ್ಯ ಅವಕಾಶ ನೀಡುತ್ತದೆ. ಆದರೆ ಕೇಂದ್ರ ಸರ್ಕಾರ ಜಾರಿಗೊಳಿಸಿರುವ ಸಿಎಎ ಕಾಯ್ದೆಯು ಮುಸ್ಲಿಂ ಧರ್ಮವನ್ನು ಹೊರಗಿಟ್ಟಿರುವುದು ಅಕ್ಷಮ್ಯ ಅಪರಾಧ ಎಂದು ಪ್ರತಿಭಟನಾಕಾರರು ದೂರಿದರು.

ಭಾರತ ಸಂವಿಧಾನದ ಕಲಂ 14ರಲ್ಲಿ ಸಮಾನತೆ ಬಗ್ಗೆ ಕೂಲಂಕುಷವಾಗಿ ವಿವರಿಸಿದೆ. ಇದೀಗ ಸಿಎಎ ಕಾಯ್ದೆಯನ್ನು ಜಾರಿ ಮಾಡುವುದರಿಂದ ಭಾರತದ ಮುಸ್ಲಿಂ ಸಮುದಾಯದವರಿಗೆ ಯಾವುದೇ ಸಮಸ್ಯೆ ಇಲ್ಲ ಎಂದು ಹೇಳಿದರೂ ಮುಂದಿನ ಎನ್‌ಆರ್‌ಸಿ, ಯುಸಿಸಿ ಕಾಯ್ದೆಗಳನ್ನು ಜಾರಿಗೊಳಿಸುವುದಾಗಿ ಬಿಜೆಪಿ ಸರ್ಕಾರ ಹೇಳಿರುವುದರಿಂದ ಮುಸ್ಲಿಂ ಸಮುದಾಯದಲ್ಲಿ ಆತಂಕ ಮನೆ ಮಾಡಿದೆ ಎಂದು ತಿಳಿಸಿದರು. ಪ್ರತಿಭಟನೆಯಲ್ಲಿ ರಾಜ್ಯ ಸಮಿತಿಯ ಸದಸ್ಯ ಅಮ್ಜಾದ್ ಖಾನ್, ಜಿಲ್ಲಾ ಪತ್ರಿಕಾ ಕಾರ್ಯದರ್ಶಿ ಮಹಮ್ಮದ್ ಶಫಿವುಲ್ಲಾ, ಮುಖಂಡರಾದ ಇಬ್ರಾಹಿಂ ಪಠಾಣ್, ಮೊಹಮ್ಮದ್ ಫಿರ್ದೋಸ್, ಫೈಸಲ್, ಅಲ್ತಾಫ್, ಫೈರೋಜ್ ಉಲ್ಲಾ ಷರೀಫ್ ಇತರರು ಭಾಗವಹಿಸಿದ್ದರು.

ಹೋಟೆಲು ಮಾಲೀಕರ ಪತ್ತಿನ ಸಹಕಾರ ಸಂಘದ ರಜತ ಮಹೋತ್ಸವದ ಸ್ಮರಣಿಕೆ ಬಿಡುಗಡೆ

ಮೈಸೂರಲ್ಲಿ ದಿನಕ್ಕೆ 90 ಮಿಲಿಯನ್ ಲೀಟರ್ ನೀರು ಪೋಲು

ಮಿತವ್ಯಯ ಬಳಕೆ ವಿಧಾನ ಅಳವಡಿಕೆ ಅಗತ್ಯ ; ಸುಸ್ಥಿರ ಜೀವನ ಸಲಹೆಗಾರ ರಮೇಶ್ ಕಿಕ್ಕೇರಿ



ಹೋಟೆಲು ಮಾಲೀಕರ ಪತ್ತಿನ ಸಹಕಾರ ಸಂಘದ ರಜತ ಮಹೋತ್ಸವದ ಸ್ಮರಣ ಸಂಚಿಕೆಯನ್ನು ಬುಧವಾರ ಬಿಡುಗಡೆ ಮಾಡಲಾಯಿತು.

ಮೈಸೂರು, ಮಾ.13(ಪಿಎಂ)– ಮೈಸೂರು ಮಹಾನಗರ ಪಾಲಿಕೆಯ ಅಂಕಿ ಅಂಶದ ಪ್ರಕಾರ ಮೈಸೂರು ನಗರಕ್ಕೆ ದಿನಕ್ಕೆ 210 ಮಿಲಿಯನ್ ಲೀಟರ್ ನೀರನ್ನು ಪೂರೈಕೆ ಮಾಡುತ್ತಿದ್ದು, ಈ ಪೈಕಿ 90 ಮಿಲಿಯನ್ ಲೀಟರ್ ಪೋಲು ಮಾಡಲಾಗುತ್ತಿದೆ ಹೀಗಾಗಿ ಹೋಟೆಲ್ ಉದ್ಯಮ, ನಾಗರಿಕರು ನೀರಿನ ಮಿತವ್ಯಯ ಬಳಕೆ ವಿಧಾನಗಳನ್ನು ಅಳವಡಿಸಿಕೊಳ್ಳಬೇಕಿದೆ ಎಂದು ಸುಸ್ಥಿರ ಜೀವನ ಸಲಹೆಗಾರ ರಮೇಶ್ ಕಿಕ್ಕೇರಿ ಹೇಳಿದರು.

ಮೈಸೂರಿನ ಬಿಎನ್ ರಸ್ತೆಯಲ್ಲಿರುವ ಖಾಸಗಿ ಹೋಟೆಲ್ ಸಭಾಂಗಣದಲ್ಲಿ ಹೋಟೆಲು ಮಾಲೀಕರ ಪತ್ತಿನ ಸಹಕಾರ ಸಂಘದ ವತಿಯಿಂದ ಬುಧವಾರ ಹಮ್ಮಿಕೊಂಡಿದ್ದ ಸಂಘದ ರಜತ ಮಹೋತ್ಸವದ ಸ್ಮರಣ ಸಂಚಿಕೆ 'ಸಹಕಾರ ಮಿತ್ರ' ಬಿಡುಗಡೆ ಹಾಗೂ ಅಭಿನಂದನಾ ಸಮಾರಂಭದಲ್ಲಿ 'ನೀರಿನ ಮಿತವ್ಯಯ ಬಳಕೆ' ಕುರಿತು ಅವರು ಮಾತನಾಡಿದರು.

ಈ ಪ್ರಮಾಣದಲ್ಲಿ ಪೋಲಾಗುತ್ತಿರುವ ಅಂಕಿ ಅಂಶವು ಪಾಲಿಕೆಯದ್ದೇ ಆಗಿದೆ. ಮೈಸೂರು ನಗರದ ಜನಸಂಖ್ಯೆ 15 ಲಕ್ಷ ಮುಟ್ಟುತ್ತಿದೆ. ಇಷ್ಟು ಜನಕ್ಕೆ ನೀರು ಪೂರೈಸಬೇಕಿದೆ. ಹೋಟೆಲ್‌ಗಳ ಮೇಲ್ಛಾವಣಿ ಸೇರಿದಂತೆ ನಾಗರಿಕರು ತಮ್ಮ ಮನೆ ಮೇಲ್ಛಾವಣಿ ಮೇಲೆ ಮಳೆ ನೀರು ಕೊಯ್ಲು ವ್ಯವಸ್ಥೆ ಮೂಲಕ ನೀರು ಸಂಗ್ರಹಕ್ಕೆ ಒತ್ತು ನೀಡಬೇಕಿದೆ ಅರಮನೆಯಲ್ಲಿ ಮಳೆ ನೀರು ಕೊಯ್ಲು ವ್ಯವಸ್ಥೆ ಮಾಡಿದ್ದು, ಇದರಿಂದ 3ರಿಂದ 4 ಲಕ್ಷ ಲೀಟರ್ ನೀರು ಸಂಗ್ರಹ ಸಾಧ್ಯವಾಗಿದೆ ಮಳೆ ನೀರು ಕೊಯ್ಲು ವ್ಯವಸ್ಥೆ ಇಂದು ಅಗತ್ಯವಿದ್ದು, ಅದಕ್ಕೆ ಅವಕಾಶವೂ ಇದೆ ಎಂದರು.

100 ಚದರ ಅಡಿ ವಿಸ್ತೀರ್ಣದ ಕಟ್ಟಡದಲ್ಲಿ 2 ಸಾವಿರ ಲೀಟರ್ ಸಾಮರ್ಥ್ಯದ ಟ್ಯಾಂಕ್ ಮಾಡಿಕೊಳ್ಳಲು ಅವಕಾಶವಿದೆ. ಇದರಿಂದ ಪ್ರತಿವರ್ಷ ಮಳೆಗಾಲದಲ್ಲಿ ನೀರು ಸಂಗ್ರಹಿಸಬಹುದು. ಮಳೆ ನೀರಿನಲ್ಲಿ ಯಾವುದೇ ರೀತಿಯ ರಾಸಾಯನಿಕ ಇರುವುದಿಲ್ಲ. ಜೊತೆಗೆ 150 ವರ್ಷಗಳವರೆಗೆ ಹಾಳಾಗುವುದಿಲ್ಲ. ಮಳೆ ನೀರು ಹರಿದು ಹೋದಂತೆ ಕಲುಷಿತವಾಗಲಿದ್ದು, ಬಿದ್ದಲ್ಲೇ ಶೇಖರಣೆ ಮಾಡಿ ಕುಡಿದರೆ ಏನೂ ಆಗಲ್ಲ ಎಂದು ತಿಳಿಸಿದರು.

ಒಬ್ಬ ವ್ಯಕ್ತಿಗೆ ಒಂದು ದಿನಕ್ಕೆ 135 ಲೀಟರ್ ನೀರು ಅಗತ್ಯ ಎಂದು ಹೇಳಲಾಗುತ್ತದೆ. ಆದರೆ 80 ಲೀಟರ್ ನೀರು ಸಾಕು. ಈ 80 ಅಥವಾ 135 ಲೀಟರ್ ನೀರಿನ ಪೈಕಿ ಶೇ.95 ಪರಿಶುದ್ಧವಾಗಿಯೇ ಇರಬೇಕೆಂದಿಲ್ಲ. ಅಂದರೆ ಬಟ್ಟೆ ಹೊಗೆಯುವುದು ಸೇರಿದಂತೆ ಇತ್ಯಾದಿಗೆ ಪರಿಶುದ್ಧ ನೀರನ್ನೇ ಬಳಸಬೇಕೆಂದಿಲ್ಲ. 2 ಲೀಟರ್ ಕುಡಿಯುವ ನೀರು ಮತ್ತು 3 ಲೀಟರ್ ಆಹಾರದ ಮೂಲಕ ತೆಗೆದುಕೊಳ್ಳುವ ನೀರು ಶುದ್ಧವಿದ್ದರೆ ಸಾಕು ಎಂದರು.

ಮೈಸೂರಿನ ಹೋಟೆಲ್‌ಗಳಲ್ಲಿ ನೀರು ಮಿತ ಬಳಕೆ ವಿಧಾನಗಳನ್ನು ಅಳವಡಿಸಿಕೊಳ್ಳಬೇಕಿದೆ. ನಾಲ್ಕು ಮಂದಿ ಕಾಫಿ ಕುಡಿಯಲು ಬಂದರೆ ನಾಲ್ಕು ಲೋಟ ನೀರು ಕೊಟ್ಟರೆ ಅವರಲ್ಲಿ ಎಲ್ಲರೂ ನೀರು ಕುಡಿಯುವುದಿಲ್ಲ. ಇಲ್ಲವೇ ಸ್ವಲ್ಪ ಸೇವಿಸಿ ಉಳಿಸುತ್ತಾರೆ. ಚಂಬಿನಲ್ಲಿ ನೀರು ಇಟ್ಟು ಜೊತೆಯಲ್ಲಿ ಖಾಲಿ ಲೋಟಗಳನ್ನಿಟ್ಟರೆ ಅಗತ್ಯ ಇರುವವರೂ ಮಾತ್ರವೇ ನೀರು ಕುಡಿಯುತ್ತಾರೆ. ಈ ವಿಧಾನದಿಂದ ಶೇ.80 ರಷ್ಟು ನೀರು ಉಳಿಸಬಹುದು. ಪಾತ್ರೆಗಳನ್ನು ನೆನಸಿ ತೊಳೆಯುವುದ ರಿಂದಲೂ ನೀರು ಉಳಿಸಬಹುದು. ಈ ರೀತಿಯ ಸಣ್ಣ ಸಣ್ಣ ವಿಧಾನಗಳಿಂದ ನೀರಿನ ಮಿತ ಬಳಕೆ ಸಾಧ್ಯವಾಗಲಿದೆ ಎಂದು ವಿವರಿಸಿದರು.


ಇದಕ್ಕೂ ಮುನ್ನ ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್ ಸ್ಮರಣ ಸಂಚಿಕೆ ಬಿಡುಗಡೆಗೊಳಿಸಿ ಮಾತನಾಡಿದರು. ಇದೇ ವೇಳೆ ಮೈಸೂರು ವಿವಿ ಗೌರವ ಡಾಕ್ಟರೇಟ್ ಪದವಿಗೆ ಭಾಜನರಾ ಗಿರುವ

> ಹೋಟೆಲ್ ಉದ್ಯಮದಿಂದ ಈಗ ಮೈಸೂರು ಆತಿಥ್ಯ ನಗರಿ ಎಂಬ ಹೆಸರು ಗಳಿಸಿದೆ. ಇಲ್ಲಿ ರಾಜಮಹಾರಾಜರ ಕಾಲದಿಂದಲೂ ಅರಮನೆಗೆ ಇಂದ್ರಭವನ ಮತ್ತಿತರ ಹೋಟೆಲ್‌ಗಳಿಂದ ಊಟ–ಉಪಾಹಾರ ಕಳುಹಿಸಲಾಗುತ್ತಿತ್ತು. ಈಗಲೂ ಮೈಸೂರಿನ ಹೋಟೆಲ್ ಉದ್ಯಮ ಅತಿಥಿ–ಅಭ್ಯಾಗತರನ್ನು ಸತ್ಕರಿಸುವ ಕೆಲಸ ಮಾಡುತ್ತಿದೆ.
> –ಡಾ.ಭಾಷ್ಯಂ ಸ್ವಾಮೀಜಿ

ವಿಜಯನಗರದ ಶ್ರೀ ಯೋಗ ನರಸಿಂಹ ಸ್ವಾಮಿ ದೇವಸ್ಥಾನದ ಡಾ.ಭಾಷ್ಯಂ ಸ್ವಾಮೀಜಿ ಮತ್ತು ಮೈಸೂರು ಆಕಾಶವಾಣಿ ನಿವೃತ್ತ ಕಾರ್ಯಕ್ರಮ ನಿರ್ವಾಹಕ ದಿವಾಕರ ಜಿ.ಹೆಗಡೆ ಅವರನ್ನು ಸನ್ಮಾನಿಸಲಾಯಿತು.

ಮೈಸೂರು ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ಸಿ.ನಾರಾಯಣಗೌಡ, ಸಂಘದ ಅಧ್ಯಕ್ಷ ನಾರಾಯಣ ವಿ.ಹೆಗಡೆ, ಉಪಾಧ್ಯಕ್ಷ ಎಂ.ಆನಂದ್‌ಶೆಟ್ಟಿ, ನಿರ್ದೇಶಕರಾದ ಕೆ.ಸಿ.ವಿಶ್ವಾನಂದ ಭಟ್, ಹೇಮಂತ ಕುಮಾರ್, ಸುಮಿತ್ರಾ ಅನಂತ ತಂತ್ರಿ, ಸುಲೋಚನ ಚಂದ್ರಶೇಖರ ಶೆಟ್ಟಿ, ಸ್ಮರಣ ಸಂಚಿಕೆ ಸಂಪಾದಕ ಎಂ.ರಘುವೀರ್ ಪುರಾಣಿಕ್ ಮತ್ತಿತರರು ಹಾಜರಿದ್ದರು.

ಮೈಸೂರು ಮಹಾರಾಣಿ ಕಲಾ ಕಾಲೇಜಿನ 33 ಹೆಚ್ಚುವರಿ ಕೊಠಡಿ ನಿರ್ಮಾಣಕ್ಕೆ ಶಾಸಕ ಹರೀಶ್‌ಗೌಡ ಶಂಕುಸ್ಥಾಪನೆ



ಮೈಸೂರು ಮಹಾರಾಣಿ ಮಹಿಳಾ ಕಲಾ ಕಾಲೇಜಿನಲ್ಲಿ 33 ಹೆಚ್ಚುವರಿ ಕೊಠಡಿಗಳ ನಿರ್ಮಾಣಕ್ಕೆ ಶಾಸಕ ಕೆ.ಹರೀಶ್‌ಗೌಡ ಬುಧವಾರ ಗುದ್ದಲಿಪೂಜೆ ನೆರವೇರಿಸಿದರು.

ಮೈಸೂರು, ಮಾ.13(ಎಂಕೆ)– ಮೈಸೂರು ಮಹಾರಾಣಿ ಮಹಿಳಾ ಕಲಾ ಕಾಲೇಜಿನಲ್ಲಿ 13.7 ಕೋಟಿ ರೂ. ವೆಚ್ಚದ 33 ಹೆಚ್ಚುವರಿ ಕೊಠಡಿಗಳ ನಿರ್ಮಾಣಕ್ಕೆ ಚಾಮರಾಜ ವಿಧಾನಸಭಾ ಕ್ಷೇತ್ರದ ಶಾಸಕ ಕೆ.ಹರೀಶ್‌ಗೌಡ ಬುಧವಾರ ಗುದ್ದಲಿಪೂಜೆ ನೆರವೇರಿಸಿದರು.

ಬಳಿಕ ಮಾತನಾಡಿದ ಅವರು, ಮಹಾರಾಣಿ ಮಹಿಳಾ ಕಲಾ ಕಾಲೇಜಿ(ಸ್ನಾತಕ ಮತ್ತು ಸ್ನಾತಕೋತ್ತರ ಕೇಂದ್ರ)ನಲ್ಲಿ ವಿದ್ಯಾರ್ಥಿನಿಯರಿಗೆ ಪಾಠ ಮಾಡಲು ಹೆಚ್ಚುವರಿ ಕೊಠಡಿ ಹಾಗೂ ಅಧ್ಯಾಪಕರಿಗೆ ಕೊಠಡಿಯ ಅವಶ್ಯಕತೆ ಇತ್ತು. ಆದ್ದರಿಂದ ಹೆಚ್ಚುವರಿ ಕೊಠಡಿಗಳ ನಿರ್ಮಾಣ ಕಾಮಗಾರಿ ಕೈಗೊಳ್ಳಲಾಗಿದೆ. ಮುಖ್ಯವಾಗಿ ಚಾಮರಾಜ ವಿಧಾನಸಭಾ ಕ್ಷೇತ್ರದಲ್ಲಿ ಶಿಕ್ಷಣಕ್ಕೆ ಮೊದಲ ಆದ್ಯತೆ ನೀಡುವುದು ನನ್ನ ಕರ್ತವ್ಯವಾಗಿದ್ದು, ಈ ನಿಟ್ಟಿನಲ್ಲಿ ಕಾರ್ಯರೂಪಿಸಲಾಗುತ್ತಿದೆ. ಎಸ್‌ಸಿಎಸ್‌ಪಿ ಯೋಜನೆಯಡಿ ಮಂಜೂರಾಗಿರುವ ಅನುದಾನದಲ್ಲಿ ಹೆಚ್ಚುವರಿ ಕೊಠಡಿಯನ್ನು ಕಟ್ಟಿಸಿಕೊಡುವ ಬಗ್ಗೆ ಈ ಹಿಂದೆಯೇ ಕರ್ನಾಟಕ ಗೃಹ ಮಂಡಳಿಯ ಕಾರ್ಯಪಾಲಕ ಅಭಿಯಂತರರು ಹಾಗೂ ಅವರ ತಂಡದೊಂದಿಗೆ ಸ್ಥಳ ಪರಿಶೀಲನೆ ನಡೆಸಿ ಸರ್ಕಾರದ ಹಂತದಲ್ಲಿ ಟೆಂಡರ್ ಪ್ರಕ್ರಿಯೆ ಪೂರ್ಣಗೊಳಿಸಲಾಗಿತ್ತು. ಅದರ ಪ್ರತಿಫಲವಾಗಿ ಈ ದಿನ ಕಾಮಗಾರಿಗೆ ಶಂಕುಸ್ಥಾಪನೆಯನ್ನು ನಡೆಸುತ್ತಿರುವುದು ಹರ್ಷದಾಯಕ ಸಂಗತಿ ಎಂದರು.


ರಾಮನಗರದ ಮೇ ಎನ್‌ಹೆಚ್‌ಡಿ ಕನ್‌ಸ್ಟ್ರಕ್ಷನ್ ಅವರಿಗೆ ಈ ಕಾಮಗಾರಿಯನ್ನು ನೀಡಲಾಗಿದ್ದು, 11 ತಿಂಗಳೊಳಗಾಗಿ ಪೂರ್ಣಗೊಳಿಸುವಂತೆ ತಿಳಿಸಲಾಗಿದೆ. ಹೊಸ ಬ್ಲಾಕ್, ಕೆಳ ಮಹಡಿಯಲ್ಲಿ 22 ಕ್ಲಾಸ್ ರೂಮ್‌ಗಳು, 8 ಸ್ಟಾಫ್ ರೂಮ್, 2 ಸ್ಟೈರ್ ಕೇಸ್ ಮತ್ತು 2 ಲಿಫ್ಟ್ ಹಾಗೂ ಹಳೆ ಕಟ್ಟಡದ ಎರಡನೇ ಮಹಡಿಯಲ್ಲಿ 10 ಕ್ಲಾಸ್ ರೂಮ್, 2 ಸ್ಟೈರ್ ಕೇಸ್ ನಿರ್ಮಾಣ ಮಾಡಲಾಗುವುದು. ಅಂದಾಜು ವೆಚ್ಚ 13.97 ಕೋಟಿ ಮೊತ್ತದ ಕಾಮಗಾರಿ ಇದಾಗಿದೆ ಎಂದು ವಿವರಿಸಿದರು.

ಅಲ್ಲದೆ 2024–25ನೇ ಸಾಲಿನ ಆಯವ್ಯಯದಲ್ಲಿ ಮೈಸೂರಿನ ಮಹಾರಾಣಿ ಮಹಿಳಾ ವಾಣಿಜ್ಯ ಕಾಲೇಜಿನ ಹೆಚ್ಚುವರಿ ಕಟ್ಟಡ ನಿರ್ಮಾಣಕ್ಕೆ 49 ಕೋಟಿ ರೂ., ಮಹಾರಾಣಿ ಕಲಾ ಮತ್ತು ವಿಜ್ಞಾನ ಕಾಲೇಜಿನ ಹಾಸ್ಟೆಲ್ ಕಟ್ಟಡ ಪುನರ್ ನಿರ್ಮಾಣಕ್ಕೆ 161 ಕೋಟಿ ರೂ.ಗಳ ಅನುದಾನವನ್ನು ಮುಖ್ಯಮಂತ್ರಿಗಳು ಘೋಷಣೆ ಮಾಡಿದ್ದಾರೆ. ಅದಕ್ಕೂ ಮುನ್ನ ಮುಖ್ಯಮಂತ್ರಿಗಳು ಹಾಗೂ ಉನ್ನತ ಶಿಕ್ಷಣ ಸಚಿವರು ಖುದ್ದು ಕಾಲೇಜಿಗೆ ಭೇಟಿ ನೀಡಿ ಇಲ್ಲಿನ ವಸ್ತುಸ್ಥಿತಿ ಗಮನಿಸಿ ದರಲ್ಲದೆ ವಿದ್ಯಾರ್ಥಿನಿಯರೊಂದಿಗೆ ಸಂವಾದ ನಡೆಸಿ, ಕಾಲೇಜು ಹಾಗೂ ಹಾಸ್ಟೆಲ್ ಅಭಿವೃದ್ಧಿಗೆ ಡಿಪಿಆರ್ ತಯಾರಿಸುವಂತೆ ಅಧಿಕಾರಿಗಳಿಗೆ ಸೂಚಿಸಿದರು ಎಂದು ಸ್ಮರಿಸಿದರು.

ನೀರನ್ನು ಮಿತವಾಗಿ ಬಳಸಿ: ಜೀವ ಸಂಕುಲದ ವೈವಿಧ್ಯದಲ್ಲಿ ನೀರಿನ ಅಗತ್ಯ ಅತೀ ಮುಖ್ಯವಾಗಿದೆ. ರಾಜ್ಯಾದಂತ ಕುಡಿಯುವ ನೀರಿನ ಸಮಸ್ಯೆ ತಲೆದೂರಿದ್ದು, ಮೈಸೂರು ನಗರಕ್ಕೆ ಇಲ್ಲಿಯವರೆಗೂ ನೀರಿನ ತೊಂದರೆಯಾಗಿರುವುದಿಲ್ಲ. ನೀರಿನ ಕೊರತೆಯುಂಟಾಗದಂತೆ ಮುಂಜಾಗ್ರತಾ ಕ್ರಮವಾಗಿ ನೀರನ್ನು ಮಿತವಾಗಿ ಬಳಸಿ, ಸದ್ಬಳಕೆ ಮಾಡುವಂತೆ ವಿದ್ಯಾರ್ಥಿನಿಯರಿಗೆ ಕಿವಿ ಮಾತು ಹೇಳಿದರಲ್ಲದೆ ವಿದ್ಯಾರ್ಥಿನಿಯರು ನೀರಿನ ಬಳಕೆ ಬಗ್ಗೆ ತಮ್ಮ ಮನೆಯವರಿಗೆ ಹಾಗೂ ಅಕ್ಕ–ಪಕ್ಕದ ಮನೆಯವರಿಗೂ ತಿಳಿಸುವಂತೆ ಸೂಚಿಸಿದರು.

ಕಾಲೇಜು ಶಿಕ್ಷಣ ಇಲಾಖೆಯ ಜಂಟಿ ನಿರ್ದೇಶಕಿ ಡಾ.ವಿಜಯಲಕ್ಷ್ಮಿ, ಕರ್ನಾಟಕ ಗೃಹ ಮಂಡಳಿಯ ಕಾರ್ಯಪಾಲಕ ಇಂಜಿನಿಯರ್ ಎಂ.ಬಿ. ಸೋಮಶೇಖರ್, ಮಹಾರಾಣಿ ಮಹಿಳಾ ಕಲಾ ಕಾಲೇಜಿನ ಪ್ರಾಂಶುಪಾಲ ಡಾ.ಬಿ.ವಿ.ವಸಂತಕುಮಾರ್, ಕಾಲೇಜಿನ ಬೋಧಕ ಹಾಗೂ ಬೋಧಕೇತರ ಸಿಬ್ಬಂದು, ವಿದ್ಯಾರ್ಥಿನಿಯರು ಉಪಸ್ಥಿತರಿದ್ದರು.

ರಾಹುಕಾಲ ಭೀತಿ! ತಮ್ಮ ಬರುವ ಮುನ್ನವೇ ದೀಪ ಬೆಳಗಿಸಿದ ಶಾಸಕ ಹೆಚ್.ಡಿ.ರೇವಣ್ಣ



ಹಾಸನ, ಮಾ.13– ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ನೇತೃತ್ವದಲ್ಲಿ ಹಾಸನ ಲೋಕಸಭಾ ಕ್ಷೇತ್ರದ ಚುನಾವಣೆ ಪೂರ್ವ ಸಿದ್ಧತೆ ಸಭೆಯನ್ನು ಹಮ್ಮಿಕೊಳ್ಳಲಾಗಿತ್ತು. ಆದರೆ, ಕಾರ್ಯಕ್ರಮ ಉದ್ಘಾಟನೆಗಾಗಿ ಮುಖ್ಯ ಅತಿಥಿ ಕುಮಾರಸ್ವಾಮಿ ಅವರಿಗೆ ಕಾಯಲಾಗುತ್ತಿತ್ತು. ಆದರೆ, ಇನ್ನೂ ತಡ ಮಾಡಿದರೆ ರಾಹುಕಾಲ ಬಂದುಬಿಡುತ್ತದೆ ಅಂತಾ ಕುಮಾರಸ್ವಾಮಿಗಾಗಿ ಕಾಯದೇ ಶಾಸಕ ಹೆಚ್.ಡಿ.ರೇವಣ್ಣ ಅವರು ವೇದಿಕೆ ಮೇಲಿದ್ದ ಸ್ಥಳೀಯ ನಾಯಕರೊಂದಿಗೆ ದೀಪ ಬೆಳಗಿಸಿ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ನಕ್ಕರೆ ಅದೇ ಸ್ವರ್ಗ

ಅವರು : ನೀವು ಒಂದು ಲೀಟರ್ ಪೆಟ್ರೋಲ್‌ನಿಂದ ಕಾರ್ ಎಷ್ಟು ಕಿಲೋಮೀಟರ್ ಓಡಿಸ್ತೀರಾ?
ಇವರು : ಐದು ಕಿಲೋಮೀಟರ್
ಅವರು : ಏನು ಕೇವಲ 5 ಕಿಲೋಮೀಟರ್ರೇ?
ಇವರು : ಇನ್ನುಳಿದ 15 ಕಿಲೋಮೀಟರ್ ನನ್ನ ಪತ್ನಿ ಓಡಿಸ್ತಾಳೆ!

ಮೈಸೂರು ಮಿತ್ರ

ಗುರುವಾರ, 14 ಮಾರ್ಚ್ 2024

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ..........

ಎಲ್ಲಾ ಕೆಲಸಗಳಲ್ಲಿ ಸಾಧಕವಾಗುವುದು ಜ್ಞಾನದ ಬಲ –ಕಥಾ ಸರಿತ್ಸಾಗರ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಸಲವಿಲ್ಲದ್ದು ಸಾವಿರವಿದ್ದು ಫಲವೇನು?

ನಿಮ್ಮ ಪತ್ರಗಳು

■ ಕೆಎಎಸ್ ಪೂರ್ವಭಾವಿ ಪರೀಕ್ಷೆ ಆಕಾಂಕ್ಷಿಗಳ ಹಿತದೃಷ್ಟಿಯಿಂದ ಮುಂದೂಡಲಿ

ಮಾನ್ಯರೆ,

ಸುಮಾರು ಮೂರೂವರೆ ವರ್ಷಗಳ ನಂತರ ಅಧಿಸೂಚನೆ ಹೊರಡಿಸಲಾಗಿರುವ ಗೆಜೆಟೆಡ್ ಪ್ರೊಬೇಷನರಿ ಹುದ್ದೆಗಳ (ಕೆಎಎಸ್) ಪೂರ್ವಭಾವಿ ಪರೀಕ್ಷೆ ಮೇ ಐದರಂದು ನಿಗದಿಯಾಗಿದ್ದು, ಇನ್ನೇನು, ಕೆಲವೇ ದಿನಗಳಲ್ಲಿ ಲೋಕಸಭಾ ಚುನಾವಣೆ ನಡೆಯುವುದರಿಂದ ಸದ್ಯ ವಿವಿಧ ಇಲಾಖೆಗಳ ಸರ್ಕಾರಿ ಸೇವೆಯಲ್ಲಿರುವ ನೌಕರರು ಚುನಾವಣಾ ಕರ್ತವ್ಯದಲ್ಲಿ ಸಿಬ್ಬಂದಿಗಳಾಗಿ ಭಾಗಿಯಾಗಬೇಕಿರುವುದು ಒಂದು ಕಡೆಯಾದರೆ, ಆರ್ಥಿಕ ಪರಿಸ್ಥಿತಿ ಉತ್ತಮವಿಲ್ಲದೆ ಸಾಕಷ್ಟು ಪ್ರತಿಭಾವಂತರು ಖಾಸಗಿ ವಲಯಗಳಲ್ಲಿ ಉದ್ಯೋಗ ಮಾಡಿಕೊಂಡು ಸರ್ಕಾರಿ ಕೆಲಸಗಳಿಗೆ ಅಧ್ಯಯನ ನಡೆಸುತ್ತಿರುತ್ತಾರೆ. ಈ ಎಲ್ಲಾ ರೀತಿಯ ಆಕಾಂಕ್ಷಿ ವಿದ್ಯಾರ್ಥಿ ಸಮೂಹ ಕೇವಲ ಎರಡು ತಿಂಗಳಲ್ಲಿ ಈ ಪರೀಕ್ಷೆಯನ್ನು ಯಶಸ್ವಿಯಾಗಿ ಎದುರಿಸಲು ಸಾಧ್ಯವೇ?

ಯುಪಿಎಸ್ಸಿ ಕೇಂದ್ರ ನಾಗರೀಕ ಸೇವಾ ಪರೀಕ್ಷೆ ವರ್ಷದ ಆರಂಭದಲ್ಲೇ ಇಂತಿಂಥ ಪರೀಕ್ಷೆಗಳು ಈ ದಿನಾಂಕಗಳಂದು ನಡೆಯುತ್ತದೆ ಎಂದು ತಮ್ಮ ಅಧಿಕೃತ ವಾರ್ಷಿಕ ಕ್ಯಾಲೆಂಡರ್‌ನಲ್ಲಿ ಈ ಮೊದಲೇ ಪ್ರಕಟಿಸುವುದರಿಂದ ಅಲ್ಲಿ ಯಾವುದೇ ಗೊಂದಲ ಆಗುವುದಿಲ್ಲ. ಆದರೆ, ಇತ್ತೀಚಿನ ವರ್ಷಗಳಲ್ಲಿ (ಕೆಪಿಎಸ್ಸಿ) ಕರ್ನಾಟಕ ಲೋಕಸೇವಾ ಆಯೋಗದಲ್ಲಿ ಪರೀಕ್ಷೆಗಳ ಅಧಿಸೂಚನೆ ಹೊರಡಿಸುವುದೇ ತೀರಾ ಅಪರೂಪವಾಗಿದೆ. ಈ ಸನ್ನಿವೇಶ ಇರುವಾಗ ರಾಜ್ಯದ ಪ್ರತಿಷ್ಠಿತ ಪರೀಕ್ಷೆಯಾಗಿರುವ ಕೆಎಎಸ್‌ಗೆ ಅಧಿಸೂಚನೆ ಹೊರಡಿಸಿದ ನಂತರ ಪೂರ್ವಭಾವಿ ಪರೀಕ್ಷೆಗೆ ದಿನಾಂಕ ಗೊತ್ತುಪಡಿಸಿ ಕೇವಲ 65 ದಿನಗಳ ಸಮಯಾವಕಾಶ ನೀಡಿದರೆ ಸಾಕಾಗುತ್ತದೆಯೇ? ಮೂರು ಹಂತಗಳಲ್ಲಿ ಈ ಪರೀಕ್ಷೆ ನಡೆಯುವುದರಿಂದ ಪೂರ್ವಭಾವಿ ಪರೀಕ್ಷೆ ಅತ್ಯಂತ ಹೆಚ್ಚು ಪ್ರಮುಖ ಹಂತವಾಗಿದೆ. ಇದನ್ನೆಲ್ಲಾ ಅವಲೋಕಿಸಿ ಈ ವಿಚಾರ ಸಂಬಂಧ ಕೆಪಿಎಸ್ಸಿ ಆಯೋಗ ಹಾಗೂ ರಾಜ್ಯ ಸರ್ಕಾರ ಸಮಸ್ತ ಆಕಾಂಕ್ಷಿಗಳ ಹಿತದೃಷ್ಟಿಯಿಂದ ಪೂರ್ವಭಾವಿ ಪರೀಕ್ಷೆಯ ದಿನಾಂಕವನ್ನು ಇನ್ನೊಂದು ತಿಂಗಳುಗಳ ಕಾಲ ಮುಂದೂಡುವ ಕುರಿತು ಶೀಘ್ರ ನಿರ್ಧಾರ ಕೈಗೊಳ್ಳಲಿ.

– ಅನಿಲ್ ಕುಮಾರ್, ನಂಜನಗೂಡು

■ ಕೆ.ಆರ್.ಠಾಣೆ ಮುಖ್ಯ ಆರಕ್ಷಕರಲ್ಲಿ ಮನವಿ

ಮಾನ್ಯರೆ,

ಮೈಸೂರಿನ ಕೆ.ಆರ್. ಮೊಹಲ್ಲಾ ಸುಣ್ಣದ ಕೇರಿ ಭಾಗದಲ್ಲಿ ಕ್ರಿಕೆಟ್ ಬೆಟ್ಟಿಂಗ್ ದಂಧೆ ಅವ್ಯಾಹತವಾಗಿ ನಡೆಯುತ್ತಿದೆ. ದಂಧೆ ನಡೆಸುತ್ತಿರುವ ಕ್ರಿಕೆಟ್ ಬುಕ್ಕಿಗಳು ನಿರಾಯಾಸವಾಗಿ ಲಕ್ಷಾಂತರ ರೂ. ಗಳಿಸುತ್ತಿದ್ದಾರೆ. ಹಣ ಕಳೆದುಕೊಂಡ ಯುವಕರು ತಮ್ಮ ಅಮೂಲ್ಯ ಜೀವನವನ್ನೇ ಹಾಳು ಮಾಡಿಕೊಳ್ಳುತ್ತಿದ್ದಾರೆ. ಅನೇಕರು ಆತ್ಮಹತ್ಯೆಗೆ ಪ್ರಯತ್ನಿಸಿದ್ದು ಉಂಟು. ಹಣ ಕಳೆದುಕೊಂಡ ಯುವಕರು ಮೊಬೈಲ್ ಕಳ್ಳತನ, ದ್ವಿಚಕ್ರ ವಾಹನ ಕಳ್ಳತನ, ಸರಗಳ್ಳತನಕ್ಕೆ ಯತ್ನಿಸಿ ಸಮಾಜಕ್ಕೆ ಕಂಟಕರಾಗುತ್ತಿದ್ದಾರೆ. ಕೆ.ಆರ್. ಠಾಣೆಯ ಹಿರಿಯ ಅಧಿಕಾರಿಗಳು ಕ್ರಿಕೆಟ್ ಬುಕ್ಕಿಗಳ ಹೆಡೆಮುರಿ ಕಟ್ಟಿ ನಿವಾಸಿಗಳಲ್ಲಿ ಶಾಂತಿಯಿಂದ ಬದುಕಲು ಅವಕಾಶ ಮಾಡಿಕೊಡಿ.

–ನೊಂದ ನಾಗರಿಕರು

■ ಬೀದಿ ನಾಯಿಗಳ ಕಾಟ ತಪ್ಪಿಸಿ

ಮಾನ್ಯರೇ,



ಮೈಸೂರಿನ ಒಂಟಿಕೊಪ್ಪಲು 2ನೇ ಮುಖ್ಯ ರಸ್ತೆ (ನಿರ್ಮಲಾ ಕಾನ್ವೆಂಟ್ ಬೀದಿ)ಯಲ್ಲಿ ಇತ್ತೀಚೆಗೆ ಬೀದಿ ನಾಯಿಗಳ ಕಾಟ ಜಾಸ್ತಿಯಾಗಿದೆ. ಸುಮಾರು 10 ರಿಂದ 12 ತಂಡವಿರುವ ಬೀದಿ ನಾಯಿಗಳು ರಸ್ತೆಯಲ್ಲಿ ಓಡಾಡುವ ಸಾರ್ವಜನಿಕರಿಗೆ ದಿನನಿತ್ಯ ತೊಂದರೆ ಕೊಡುತ್ತಿವೆ. ಮೊನ್ನೆ ನಿರ್ಮಲಾ ಕಾನ್ವೆಂಟ್‌ಗೆ ಹೋಗುತ್ತಿದ್ದ ಇಬ್ಬರು ಮಕ್ಕಳಿಗೆ ಎಗರಿ ಕಚ್ಚಿ ಗಾಯಗೊಳಿಸಿವೆ. ಶಾಲಾ ವಿದ್ಯಾರ್ಥಿಗಳು ಈ ರಸ್ತೆಯಲ್ಲಿ ಓಡಾಡಲು ಭಯಭೀತರಾಗಿದ್ದಾರೆ. ಇದರ ಜೊತೆಗೆ ರಾತ್ರಿ ವೇಳೆಯಲ್ಲಿ ಖಾಲಿ ನಿವೇಶನ ಇರುವ ಮನೆಗಳಿಗೆ ನುಗ್ಗಿ ಗಲಾಟೆ ಮಾಡಿ, ಅಕ್ಕಪಕ್ಕದ ಮನೆಯವರು ಮಲಗಲು ಬಿಡುತ್ತಿಲ್ಲ. ಈ ನಾಯಿಗಳಿಗೆ ಆಪರೇಷನ್ ಆಗಿದೆಯೋ ಅಥವಾ ಇಲ್ಲವೋ ಗೊತ್ತಿಲ್ಲ. ಇವುಗಳು ಸಾಮಾನ್ಯವಾಗಿ ನಿರ್ಮಲಾ ಕಾನ್ವೆಂಟ್ ಸಮೀಪ, 8ನೇ ಕ್ರಾಸ್ ಸೇರುವ ರಸ್ತೆ ಹಾಗೂ ನಳಪಾಕ್ ಹೊಟೇಲ್ ಬಳಿ ಕಾಣಿಸಿಕೊಳ್ಳುತ್ತಿವೆ. ಜೊತೆಗೆ ಬೇಸಿಗೆ ಕಾಲವಾದ್ದರಿಂದ ರಾತ್ರಿ ಸಮಯದಲ್ಲಿ ಹಾವುಗಳು ಕಾಣಿಸಿಕೊಂಡು ಈ ನಾಯಿಗಳಿಗೆ ಏನಾದರೂ ಕಚ್ಚಿದರೆ ಬಹಳ ಅನಾಹುತವಾಗುವ ಸಾಧ್ಯತೆ ಇದೆ. ಪರೀಕ್ಷಾ ಸಮಯವಾದ್ದರಿಂದ ವಿದ್ಯಾರ್ಥಿಗಳು ಗಾಯಗೊಂಡರೆ ತೊಂದರೆ ಅನುಭವಿಸಬೇಕಾಗುತ್ತದೆ. ಮೈಸೂರು ಮಹಾನಗರ ಪಾಲಿಕೆಯವರು ತಕ್ಷಣ ಎಚ್ಚೆತ್ತು ಈ ನಾಯಿಗಳನ್ನು ಸುರಕ್ಷಿತ ಪ್ರದೇಶಕ್ಕೆ ಸಾಗಿಸಿ, ಸಾರ್ವಜನಿಕರಿಗೆ ನೆಮ್ಮದಿ ದೊರಕಿಸಿಕೊಡಬೇಕಿದೆ.

– ಜಿ.ಪಿ.ಹರೀಶ್, ವಿ.ವಿ.ಮೊಹಲ್ಲಾ, ಮೈಸೂರು

■ ಕಾಟನ್ ಕ್ಯಾಂಡಿ, ಗೋಬಿಗೆ ಬಳಸುವ ಕೃತಕ ಬಣ್ಣ ನಿಷೇಧ; ರಾಜ್ಯ ಸರ್ಕಾರದ ಒಳ್ಳೆಯ ನಿರ್ಧಾರ

ಮಾನ್ಯರೆ,

ಕಲರ್ ಕಾಟನ್ ಕ್ಯಾಂಡಿ ಮತ್ತು ಗೋಬಿ ಮಂಚೂರಿಗೆ ಬಳಸುವ ಕೃತಕ ಬಣ್ಣದಿಂದ ಕ್ಯಾನ್ಸರ್ ಕಾರಕ ಅಂಶ ಇದೆ ಎಂಬ ವಿಷಯ ಬೆಳಕಿಗೆ ಬಂದ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರ ಇವುಗಳಿಗೆ ನಿಷೇಧ ಹೇರಿರುವುದು ಒಳ್ಳೆಯ ನಿರ್ಧಾರ. ಇದು ಮಾತ್ರ ಅಲ್ಲ. ನಾವು ಪ್ರತಿನಿತ್ಯ ಉಪಯೋಗಿಸುವ ಅನೇಕ ಆಹಾರಗಳು ಕಲಬೆರಕೆಯಿಂದ ಕೂಡಿದ್ದಾಗಿರುತ್ತದೆ. ಇತ್ತೀಚಿನ ದಿನಗಳಲ್ಲಿ ಯಾವುದೇ ದುಷ್ಚಟಗಳಿಲ್ಲದಿದ್ದರೂ, ಸದೃಢರಾಗಿದ್ದರೂ ಸಣ್ಣ ವಯಸ್ಸಿನಲ್ಲೇ ಅನಾರೋಗ್ಯಕ್ಕೀಡಾಗುವವರ ಸಂಖ್ಯೆ ಜಾಸ್ತಿ ಆಗಿದೆ. ಇದಕ್ಕೆ ಮುಖ್ಯ ಕಾರಣ ನಾವು ಸೇವಿಸುವ ಕಲಬೆರಕೆ ಆಹಾರ. ಆದ್ದರಿಂದ ಸರ್ಕಾರ, ಆರೋಗ್ಯ ಇಲಾಖೆಯವರು ಈ ಬಗ್ಗೆ ಅಧ್ಯಯನ ನಡೆಸಿ ಸರಿಯಾದ ಕ್ರಮ ಕೈಗೊಳ್ಳಲಿ.

–ರಾಘವೇಂದ್ರ ಜೋಯಿಸ್, ಮೈಸೂರು

ಮಂಥನ



ನಿವೇದಿತಾ ಎಚ್
ಇಂಗ್ಲಿಷ್ ಉಪನ್ಯಾಸಕಿ
ಯುವರಾಜ ಕಾಲೇಜು
ಮೈಸೂರು

ಅಬ್ಬಬ್ಬಾ; ಪರೀಕ್ಷೆಗಳು...! ಪರೀಕ್ಷೆಗಳು...!!

ಪರೀಕ್ಷೆಗಳು ನಮ್ಮ ಜೀವನದ ಅವಿಭಾಜ್ಯ ಅಂಗವಾಗಿ ಯಾವುದೋ ಕಾಲವಾಯಿತು. ಮನುಷ್ಯನ ಬುದ್ಧಿ ಮಟ್ಟವನ್ನು ಅಳೆಯಲು ಪರೀಕ್ಷೆಗಳು ಸಾಧನವಾಗಿರುವುದು ವಿಷಾದಕರವೆನಿಸಿದರೂ, ನಾವು ಅದಕ್ಕೆ ಪಕ್ಕಾಗಿ ನಮ್ಮ ವ್ಯಕ್ತಿತ್ವವನ್ನೇ ಮಾರ್ಪಡಿಸಿಕೊಂಡಿರುವುದು ಆಶ್ಚರ್ಯಕರ.

ಪರೀಕ್ಷೆ ಎಂದರೆ ತೀರ ಭಯ ಆವರಿಸಿ, ಮರೆವು ಪ್ರಾರಂಭವಾಗಿ, ಬೇರೇನೂ ಕಾಣದೆ, ಅದೇ ಕಣ್ಣಮುಂದೆ ಕುಣಿಯುತ್ತಾ ಇರುವ ಅನುಭವ ಬಹುತೇಕ ಎಲ್ಲರಿಗೂ ಆಗಿರುತ್ತದೆ. ಎಷ್ಟೇ ಚೆನ್ನಾಗಿ ಓದಿ ತಯಾರಾಗಿದ್ದರೂ ಅಂತಿಮ ಕ್ಷಣಗಳನ್ನು ಎದುರಿಸುವ ಧೈರ್ಯ ಸಾಲದೆ ಸರಿಯಾಗಿ ಬರೆಯದವರೂ ಬಹಳ ಮಂದಿ ಇದ್ದಾರೆ.

ಏಕೆ ಈ ಭಯ, ಆತಂಕ? ದುಃಸ್ವಪ್ನದಂತೆ ಪರೀಕ್ಷೆ ಏಕೆ ನಮ್ಮನ್ನು ಕಾಡುತ್ತದೆ ಎಂಬಿತ್ಯಾದಿ ಪ್ರಶ್ನೆಗಳಿಗೆಲ್ಲಾ, ಮನಃಶಾಸ್ತ್ರಜ್ಞರು ಸಾಕಷ್ಟು ಪರಿಹಾರಗಳನ್ನು ಕಂಡುಹಿಡಿದಿದ್ದಾರೆ ಮತ್ತು ಕಂಡುಹಿಡಿಯುತ್ತಲೂ ಇದ್ದಾರೆ. ಅದನ್ನು ನಾನಿಲ್ಲಿ ಹೇಳಲು ಹೋಗುವುದಿಲ್ಲ.

ಯಾಕಾದರೂ ಪರೀಕ್ಷೆ ಬಂತಪ್ಪಾ, ಯಾರು ಇದನ್ನು ಕಂಡುಹಿಡಿದರು ಎಂದು ಹಿಡಿ ಶಾಪ ಹಾಕುವವರ ನೋವುಗಳಿಗೆ ಉತ್ತರ ಹುಡುಕಲು ಹೊರಟಾಗ ಒಂದಷ್ಟು ವಿಚಾರಗಳನ್ನು ಹಂಚಿಕೊಳ್ಳೋಣವೆನಿಸಿತು.

ಪರೀಕ್ಷೆಯನ್ನು ಯಾರು ಕಂಡುಹಿಡಿದರು ಎಂದು ಅನ್ವೇಷಿಸ ಹೊರಟಾಗ ಇದರ ಮೂಲ ಚೀನಾ ಎಂದು ತಿಳಿಯಿತು. ಸುಯಿ ಸಾಮ್ರಾಜ್ಯದ ಚಕ್ರವರ್ತಿ ಯಾಂಗ್ ತನ್ನ ಸಾಮ್ರಾಜ್ಯದಲ್ಲಿ ಉತ್ತಮ ಆಡಳಿತ ನೀಡುವುದಕ್ಕಾಗಿ ಉತ್ತಮ ಅಧಿಕಾರಿಗಳನ್ನು ನೇಮಿಸಿಕೊಳ್ಳಲು ಬಯಸಿದ. ತನ್ನ ಆಸ್ಥಾನದಲ್ಲಿದ್ದ ತಜ್ಞರ ಸಲಹೆ ಪಡೆದು ಸೂಕ್ತ ಪರೀಕ್ಷೆ ನಡೆಸಲು ತೀರ್ಮಾನಿಸಿದ. ಕ್ರಿ.ಶ.605ರಲ್ಲಿ ಪ್ರಪ್ರಥಮ ಬಾರಿಗೆ ಪರೀಕ್ಷೆ ನಡೆಸಿದ. ಕೇಜು ಎಂದು ಕರೆಯಲಾದ Imperial examina tion ಮೌಖಿಕ ಮತ್ತು ಕೌಶಲ್ಯ ಪರೀಕ್ಷೆಗಳು ಮುಂದಿನ ಪರೀಕ್ಷಾ ಯುಗಕ್ಕೆ ಅಡಿಪಾಯವನ್ನು ಹಾಕಿದವು ಎಂದು ಹೇಳಲಾಗುತ್ತದೆ. ನಂತರದ ದಿನಮಾನಗಳಲ್ಲಿ ಚೀನಾದ ರಾಣಿ ಟ್ಯಾಂಗ್ ಸಾಮ್ರಾಜ್ಯದವು ಝುಟಿಯಾನ್ ಲಿಖಿತ ಪರೀಕ್ಷೆ ನಡೆಸಿದ ಮೊದಲಿಗಳಾದಳು. ಒಬ್ಬ ವ್ಯಕ್ತಿಯ ಸಾಮರ್ಥ್ಯವಲ್ಲಿ ಹುಟ್ಟಿನಿಂದಲ್ಲದೆ ಅವನ ಅಂತಃ ಶಕ್ತಿಯಿಂದ ಅಳೆಯಬೇಕು ಎಂಬ ಸದುದ್ದೇಶವೇ ಈ ಇಬ್ಬರದ್ದೂ ಆಗಿತ್ತು ಎನ್ನುವುದು ಪ್ರಶಂಸನೀಯ ಸಂಗತಿ.

ಆಧುನಿಕ ಯುಗಕ್ಕೆ ಬಂದರೆ, 19ನೇ ಶತಮಾನದ ಆರಂಭದಲ್ಲಿ, ಅಮೆರಿಕದ ಇಂಡಿಯಾನ ವಿಶ್ವವಿದ್ಯಾನಿಲಯದ ಧಾರ್ಮಿಕ ವಿಭಾಗದಲ್ಲಿ ಪ್ರಾಧ್ಯಾಪಕರಾಗಿದ್ದ ಹೆನ್ರಿ ಎ ಫಿಷಲ್ ಪರೀಕ್ಷೆಗಳ ಪರಿಪಾಠವನ್ನು ಆರಂಭಿಸಿದ ಎಂದು ಹೇಳಲಾಗುತ್ತದೆ. 1800ರಲ್ಲಿಯೇ ಹೆನ್ರಿ ಫಿಷಲ್ ಎಂಬ ವ್ಯಾಪಾರಿಯೊಬ್ಬನು ಪರೀಕ್ಷೆಗಳನ್ನು ಆರಂಭಿಸಿದ ಎಂಬ ಗೊಂದಲ ಇದೆಯಾದರೂ, ವಿವಿಯಲ್ಲಿ ಕೆಲಸ ಮಾಡುತ್ತಿದ್ದ ಹೆನ್ರಿ ಫಿಷಲ್ ನಿಜ ವಾದವ ಎನ್ನುವ ವಾದವಿದೆ. ಅದೇನೇ ಇದ್ದರೂ, 19ನೆಯ ಶತಮಾನದ ಆದಿಯಲ್ಲಿ ಪರೀಕ್ಷೆಗಳ ಯುಗ ಅಧಿಕೃತವಾಗಿ ಶುರುವಾಯಿತು.

ವಸಾಹತುಶಾಹಿ ಯೂರೋಪಿಯನ್ನರು ಪ್ರಪಂಚದೆಲ್ಲೆಡೆ ಪಸರಿಸಿದ ಮೇಲೆ, ತಮ್ಮ ವಿಧಾನವನ್ನು ಎಲ್ಲೆಡೆ ತೆಗೆದುಕೊಂಡು ಹೋದರು. ಹಾಗೆ ಭಾರತದಲ್ಲಿ 1853ರಲ್ಲಿ ಮೊದಲ ಬಾರಿಗೆ ನಾಗರಿಕ ಸೇವಾ ಪರೀಕ್ಷೆಗಳನ್ನು ನಡೆಸಲಾಯಿತು.

ಈಗ ಸರ್ಕಾರಿ ಅಥವಾ ಖಾಸಗಿ ಸಂಸ್ಥೆಗಳಾಗಲಿ ಎಲ್ಲೆಡೆ ಯಾವುದೇ ನಿಯುಕ್ತಿ ಆಗಬೇಕೆಂದರೆ ಪರೀಕ್ಷೆಗಳು ಸಾಮಾನ್ಯವೆನಿಸಿಬಿಟ್ಟಿವೆ. ದೇಶದ ಸುಗಮ ಆಡಳಿತಕ್ಕಾಗಿ ಇರುವ ಅಧಿಕಾರಿ ವರ್ಗದ ಆಯ್ಕೆಗೆ ನಡೆಯುವ ಪರೀಕ್ಷೆಗಳು ಅತ್ಯಂತ ಕಠಿಣತಮ ಎನಿಸಿವೆ. IAS, SSC, NDA, JCE, NEET, CEED, CAT, GATE, ಪರೀಕ್ಷೆಗಳು ನಿರ್ಣಾಯಕ ಮಟ್ಟದವು.



> “ಕಾಲ ಬದಲಾದಂತೆ ಬದುಕುವ ಪರಿ, ಜೀವನ ಶೈಲಿ ಬದಲಾಗುತ್ತದೆ. ಅದಕ್ಕೆ ತಕ್ಕಂತೆ ಎಲ್ಲವೂ ಬದಲಾಗುತ್ತದೆ. ಹಾಗೆಯೇ, ಅಂದು ಬಿಲ್ಲು ಬಾಣ ಭರ್ಜಿಗಳನ್ನು ಹಿಡಿದು ಮನುಷ್ಯ ಜೀವನ ಸಾಗರವನ್ನು ಈಜಿದರೆ, ಈಗ ಪೆನ್ನು–ಪೇಪರುಗಳನ್ನು ಹಿಡಿದು ಜೀವನವನ್ನು ಎದುರಿಸಬೇಕಿದೆ. ಆಗುವುದಿಲ್ಲ ಎಂದರೆ ಸೋಲು, ಅಪಯಶಸ್ಸು, ಅಪಜಯ, ಹೀನ ಜೀವನ ಕಟ್ಟಿಟ್ಟ ಬುತ್ತಿ. ಎಲ್ಲರಿಗೂ ಅಪರಿಮಿತ ಯಶಸ್ಸು ಸಿಗುವುದಿಲ್ಲವಾದರೂ, ಜೀವನ ಯಾರಿಗೂ ಖಂಡಿತಾ ಮೋಸ ಮಾಡುವುದಿಲ್ಲ ಎನ್ನುವುದು ಸತ್ಯ.”

ಇಂದು ಪರೀಕ್ಷಾ ಕಾಲ ಮತ್ತು ಫಲಿತಾಂಶದ ಸಮಯ ಬಂದರೆ ಎಲ್ಲೆಡೆ ಆತಂಕದ ವಾತಾವರಣ ನಿರ್ಮಾಣವಾಗಿಬಿಡುತ್ತದೆ. ಆತ್ಮಹತ್ಯೆಗಳ ಸುದ್ದಿಗಳ ಭರಾಟೆ ನೋವನ್ನುಂಟು ಮಾಡುತ್ತದೆ. ಉಜ್ವಲ ಭವಿಷ್ಯದ ವಾರಸುದಾರರೆನಿಸಿರುವ ಯುವಜನರು ಜೀವನದ ಹೊಸ್ತಿಲಲ್ಲೇ ಮುಗ್ಗರಿಸುವುದು ಭಯಂಕರವೆನಿಸುತ್ತದೆ. ಭಾರತದಲ್ಲಿ ವಿದ್ಯಾರ್ಥಿಗಳ ಆತ್ಮಹತ್ಯೆಯ ಕೇಸುಗಳು ದಿನೇ ದಿನೆ ಹೆಚ್ಚುತ್ತಿವೆ. 2023ರಲ್ಲಿ 18 ವರ್ಷಕ್ಕಿಂತ ಕೆಳಪಟ್ಟವರ ಆತ್ಮಹತ್ಯೆಯ ಸಂಖ್ಯೆ 1123. ಅದರಲ್ಲಿ 578 ಹುಡುಗಿಯರಿದ್ದರೆ, 575 ಹುಡುಗರಿದ್ದಾರೆ. ಇನ್ನೂ 2024 ಶುರುವಾಗಿ 2ತಿಂಗಳು ಕಳೆದಿಲ್ಲವಾದರೂ 4 ಆತ್ಮಹತ್ಯೆಯ ಕೇಸುಗಳು ದಾಖಲಾಗಿವೆ.

ನಾಗರಿಕ ಸೇವಾ ಪರೀಕ್ಷೆಗೆ ಹಾಜರಾಗುವ ವಿದ್ಯಾರ್ಥಿಗಳು ಒತ್ತಡ ತಾಳಲಾಗದಿದ್ದಾಗ ಮತ್ತು ಯಶಸ್ಸಿನ ಲೆಕ್ಕಚಾರ ತಪ್ಪಿದಾಗ ಆತ್ಮಹತ್ಯೆಗೆ ಶರಣಾಗಿ ಬದುಕಿಗೇ ಅಂತ್ಯ ಹಾಡುವುದು ನಿಜಕ್ಕೂ ದುರಂತ. ರಾಜಾಸ್ಥಾನದ ಕೋಟದಲ್ಲಿ ಬೆಳಕಿಗೆ ಬಂದ ಕೇಸುಗಳು ನಮ್ಮ ಕಣ್ಣ ಮುಂದಿವೆ.

ಪೋಷಕರು, ಸ್ವತಃ ವಿದ್ಯಾರ್ಥಿಗಳು, ಸುತ್ತಲಿನ ಸಮಾಜ, ಬದಲಾಗಿರುವ ಜೀವನದ ಯಶಸ್ಸಿನ ಪರಿಭಾಷೆ, ಜೀವನ ಮೌಲ್ಯಗಳಲ್ಲಿನ ಸಡಿಲಿಕೆ, ಅತಿಯಾದ ಐಷಾರಾಮಿ ಜೀವನದ ಬಯಕೆ, ನಾಗಾಲೋಟದ ಬದುಕು, ಮೇರೆ ಮೀರಿದ ಅತೃಪ್ತಿ ಎಲ್ಲವೂ ಕಾರಣಗಳೆನಿಸುತ್ತವೆ. ಇದಕ್ಕೆ ಪರಿಹಾರ ನಮ್ಮ ಕೈಲಿದ್ದರೂ ಅದನ್ನು ಆಚರಣೆಗೆ ತರುವ ವ್ಯವಧಾನ ನಮ್ಮಲ್ಲಿಲ್ಲದಿರುವುದು ಈ ದುರಂತಗಳ ಹೆಚ್ಚಳಕ್ಕೆ ಕಾರಣವೆನಿಸುತ್ತದೆ.

ಹಾಗೆ ನೋಡಿದರೆ ನಾನು ಮೇಲೆ ಹೇಳಿದ ಸಂದರ್ಭಗಳಲ್ಲಿ ಪರೀಕ್ಷೆಗಳ ಆವಿಷ್ಕಾರ ಹೊಸದಾಗಿ ಕೇವಲ 600–700ವರ್ಷಗಳ ಹಿಂದೆ ಆದದ್ದಲ್ಲ. ಪುರಾಣ ಕಾಲದಿಂದಲೂ ಒಡ್ಡುತ್ತಾ ಬಂದಿರುವ ಪರೀಕ್ಷೆಗಳು ಒಂದಲ್ಲಾ ಒಂದು ರೀತಿಯಲ್ಲಿ ನಮ್ಮಲ್ಲಿ ಭಯಕ್ಕಿಂತ ಹೆಚ್ಚಾಗಿ ಕುತೂಹಲ ಕೆರಳಿಸಿವೆ, ಕಾತುರ ಹುಟ್ಟಿಸಿವೆ, ಬುದ್ಧಿ ಶಕ್ತಿಗೆ ಸವಾಲೆಸೆದಿವೆ.

ಜನಸಾಮಾನ್ಯರನ್ನು ಬಿಡಿ. ನನಗೆ ಅನ್ನಿಸುವುದು, ಪ್ರಪಂಚದ ಮೊದಲ ಪರೀಕ್ಷೆಯನ್ನು ಎದುರಿಸಿದ್ದು ಗಣೇಶ ಮತ್ತು ಸುಬ್ರಮಣ್ಯ! ಮತ್ತು ಪರೀಕ್ಷಕ ಜಗದ್ಪಾಲಕ ಶಿವ! ಹೌದು, ನಿಮಗೆಲ್ಲಾ ಗೊತ್ತಿರುವ ಕತೆಯೇ. ಪ್ರಪಂಚವನ್ನು ಯಾರು ಮೊದಲು ಸುತ್ತಿ ಬರುತ್ತಾರೋ ಅವರಿಗೇ ಬಹುಮಾನ ಎಂದು ಶಿವ ಹೇಳಿದಾಗ, ಅತ್ಯಂತ ಬುದ್ಧಿವಂತಿಕೆಯಿಂದ ಅಪ್ಪ ಅಮ್ಮರನ್ನೇ ಸುತ್ತಿ ಬಂದು ಬಹುಮಾನ ಗಿಟ್ಟಿಸಿದ ಗಣೇಶ ರ್‍ಯಾಂಕ್ ಹೋಲ್ಡರ್! ಯಶಸ್ವಿಯಾಗಿ ಪರೀಕ್ಷೆ ಮುಗಿಸಿದ ಕ್ರೆಡಿಟ್ ಸುಬ್ರಮಣ್ಯನಿಗೂ ಸಲ್ಲಬೇಕು. ಹಾಗೆಯೇ ನಮ್ಮ ಪುರಾಣಗಳ ಲೋಕದಲ್ಲಿ ಒಂದು ಸುತ್ತು ಬಂದರೆ ಅದೆಷ್ಟು ಪರೀಕ್ಷೆಗಳು ಅದೆಷ್ಟು ಫಲಿತಾಂಶಗಳು!

ನಮ್ಮ ವಿದ್ಯಾರ್ಥಿಗಳ ಹಾಗೆಯೇ ಮುಗ್ಧನಾದ ಧ್ರುವ ಎದುರಿಸಿದ ಪರೀಕ್ಷೆ ಸಾಮಾನ್ಯವಾದುದಲ್ಲ, ಅಲೌಕಿಕವಾದುದು. ದೇವರನ್ನೇ ಸಾಕ್ಷಾತ್ಕಾರಗೊಳಿಸಿಕೊಳ್ಳುವಂತಹ ಸವಾಲು ಅವನ ಎದುರಿಗಿದ್ದುದು. ಛಲವೊಂದೇ ಅವನನ್ನು ಗುರಿ ಮುಟ್ಟಿಸಿದ್ದು. ನಳ ದಮಯಂತಿಯರ ಕತೆಯನ್ನೇ ತೆಗೆದುಕೊಂಡರೆ, ಅವರು ಎದುರಿಸಿದ ಪರೀಕ್ಷೆಗಳು ಅವರಿಗೆ ಜೀವನದ ಪಾಠಗಳನ್ನು ಕಲಿಸಿದವು. ಸತ್ಯವಾನ ಸಾವಿತ್ರಿಯ ಕತೆಯಲ್ಲಿ ಅಜೇಯವೆನಿಸಿದ ಸಾವನ್ನು ಗೆಲ್ಲುವ ಪರೀಕ್ಷೆಗೆ ಗುರಿಯಾದ ಸಾವಿತ್ರಿ ಸ್ವರ್ಗ ಸದೃಶ ಜೀವನದ ವರ ಪಡೆದಳು. ತ್ರಿಮೂರ್ತಿಗಳಿಗೆ ಹಾಲುಣಿಸುವ ಪರೀಕ್ಷೆಯನ್ನು ಚಾಣಾಕ್ಷತೆಯಿಂದ ನಿಭಾಯಿಸಿದ ಅನಸೂಯೆಯ ಬುದ್ಧಿಮತ್ತೆಗೆ ಬಹುಪರಾಕ್ ಹೇಳಲೇಬೇಕಲ್ಲವೇ! ವಿಷ್ಣು ಭಕ್ತಿಯ ಪಾರಮ್ಯದ ಪರೀಕ್ಷೆಗೆ ಒಳಗಾದ ಪ್ರಹ್ಲಾದ ನರಸಿಂಹಪ್ರಿಯನೆನಿಸಿದ. ಕೌರವರ ಸಂಚಿಗೆ ಬಲಿಯಾಗಿ ಪಾಂಡವರು ಎದುರಿಸಿದ ಪರೀಕ್ಷೆಗಳು ಅವರನ್ನು 'ಧರ್ಮ' ಎಂಬ ಪದಕ್ಕೆ ಅನ್ವರ್ಥರನ್ನಾಗಿಸಿದವು. ಕೈಕೇಯಿಯ ದುರ್ಬುದ್ಧಿಯಿಂದ ಸೀತೆ ತನ್ನನ್ನು ತಾನು ಅಕ್ಷರಶಃ ಅಗ್ನಿ ಪರೀಕ್ಷೆಗೆ ಒಡ್ಡಿಕೊಳ್ಳಬೇಕಾಗಿ ಬಂತು, ಅವಳು ಜಗನ್ಮಾತೆಯಾದಳು. ದ್ರೌಪದಿಯು ಅಗ್ನಿಯಿಂದ ಹುಟ್ಟಿ ಬಂದರೂ ಕೆಂಡದ ಹಾದಿಯನ್ನೇ ಸವೆಸಿದಳು, ಅವಳ ಜೀವನವೇ ಒಂದು ಸುದೀರ್ಘ ಪ್ರಶ್ನೆ ಪತ್ರಿಕೆಯಂತಿತ್ತು, ಅವಳ ಬಣ್ಣಿಸಲಸದಳವಾದ ಸ್ಥೈರ್ಯವೇ ಅವಳನ್ನು ವಿಜಯಿಯಾಗಿಸಿದ್ದು. ಇವರೆಲ್ಲಾ ಬದುಕು ಒಡ್ಡಿದ ಸಂಕಷ್ಟಗಳೆಂಬ ಪರೀಕ್ಷಾ ಪತ್ರಿಕೆಗಳಿಗೆ ತಮ್ಮದೇ ಆದ ರೀತಿಯಲ್ಲಿ ಒಡ್ಡಿಕೊಂಡು ಅಜರಾಮರರಾದವರು.

ಇವಷ್ಟೇ ಅಲ್ಲ, ನಮಗೆ ಪುರಾಣಗಳಲ್ಲಿ ಸಾಕಷ್ಟು ಪ್ರೇಮ ಪರೀಕ್ಷೆಗಳ ಕತೆಗಳೂ ದೊರಕುತ್ತವೆ! ಶಿವ ಧನುಸ್ಸನ್ನು ಎದೆಗೇರಿಸಿ ಸೀತಾಪತಿಯಾದ ರಾಮ ಎದುರಿಸಿದ್ದು ಅನಿರೀಕ್ಷಿತ ಪರೀಕ್ಷೆ. ಆಕೆಗಾಗಿ ಸ್ವರ್ಣ ಮೃಗವನ್ನು ಹಿಡಿದು ತರಲು ಹೊರಟವ, ತನ್ನ ಅಸೀಮ ಪ್ರೇಮವನ್ನು ನಿರೂಪಿಸಲು ರಾಕ್ಷಸ ಕುಲವನ್ನೇ ಎದುರಿಸುವ ಪರೀಕ್ಷೆಯನ್ನು ಸಮರ್ಥವಾಗಿ ನಿಭಾಯಿಸುತ್ತಾನೆ. ಇನ್ನು ಅರ್ಜುನ ದ್ರೌಪದಿಗೋಸ್ಕರ ತಿರುಗುತ್ತಿರುವ ಮೀನಿನ ಕಣ್ಣಿಗೆ ಬಾಣ ಹೂಡಿ ಜಯಶಾಲಿಯಾದದ್ದೂ ಅನಿರೀಕ್ಷಿತವೇ. ಭೀಮ ದ್ರೌಪದಿಗಾಗಿ ಸೌಗಂಧಿಕಾ ಪುಷ್ಪವನ್ನು ಅರಸಿ ಹೊರಟು ಅವಳ ಹೃದಯ ಗೆಲ್ಲುತ್ತಾನೆ. ಕಲಹಪ್ರಿಯ ನಾರದನ ಸಂಚಿಗೆ ಬಲಿಯಾಗಿ ಇಂದ್ರಲೋಕದಿಂದ ಪಾರಿಜಾತ ಪುಷ್ಪದ ವೃಕ್ಷವನ್ನೇ ಧರೆಗೆ ತಂದ ನಮ್ಮ ಕೃಷ್ಣ, ಸತ್ಯಭಾಮೆಯ ಪ್ರೇಮದ ಪತಿಯಾಗುತ್ತಾನೆ! ಹೇಳುತ್ತಾ ಹೋದರೆ ಎಷ್ಟು ಕತೆಗಳಿವೆ! ಧರ್ಮರಾಯನ ಧರ್ಮಪರತೆಯನ್ನು ನಿಕಷಕ್ಕೆ ಒಡ್ಡಿದ ಯಕ್ಷಪ್ರಶ್ನೆ ಪ್ರಸಂಗಕ್ಕಿಂತ ಕಷ್ಟಕರವಾದ ಪರೀಕ್ಷೆ ಬೇರೊಂದು ಇರಬಹುದೇ? ವಾಲಿಯನ್ನು ಜಯಿಸುವಷ್ಟು ಸಾಮರ್ಥ್ಯ ರಾಮನಿಗಿರಬಹುದೇ ಎಂದು ಸಂಶಯಗೊಂಡು, ಒಂದೇ ಬಾಣದಿಂದ ಸಾಲು ಮರಗಳನ್ನು ಭೇದಿಸು ಎಂದು ರಾಮನಂಥಹ ರಾಮನನ್ನೇ ಪರೀಕ್ಷೆಗೊಡ್ಡಿದ ಸುಗ್ರೀವ!

ಪರೀಕ್ಷೆಗೂ, ಗೆಲುವಿಗೂ, ಸೋಲಿಗೂ, ಆತ್ಮಹತ್ಯೆಗೂ ಮತ್ತು ಈ ಪುರಾಣ ಕತೆಗಳಿಗೂ ಎತ್ತಣಿಂದೆತ್ತ ಸಂಬಂಧವಯ್ಯಾ ಎಂದುಕೊಳ್ಳಬೇಡಿ. ನಾನು ಹೇಳಿದ ಎಲ್ಲ ಪುರಾಣ ಪುಣ್ಯಪುರುಷರು, ಮಹಿಳೆಯರೂ? ಅಸಾಧ್ಯವೆನಿಸಿದುದನ್ನು ಸಾಧಿಸಿ ಲೋಕದಲ್ಲಿ ಅಮರರಾದರು. ಸರಳವಾಗಿ ಹೇಳಬೇಕೆಂದರೆ ಶ್ರಮಕ್ಕೆ ಗೆಲುವು ಮತ್ತು ಯಶಸ್ಸೇ ಬಹುಮಾನ. ಅದು ಯಾವ ಕಾಲವಾದರೂ ಸರಿ. ಯುದ್ಧ ಭೂಮಿಯನ್ನು ನೋಡಿ ಹೆದರಿ ಓಡಿದ ಉತ್ತರ ಕುಮಾರನನ್ನು ಯುಗಯುಗಗಳು ಕಳೆದರೂ ನೆನೆಸಿಕೊಂಡು ನಗುತ್ತೇವೆ.

ಕಾಲ ಬದಲಾದಂತೆ ಬದುಕುವ ಪರಿ ಜೀವನ ಶೈಲಿ ಬದಲಾಗುತ್ತದೆ. ಅದಕ್ಕೆ ತಕ್ಕಂತೆ ಎಲ್ಲವೂ ಬದಲಾಗುತ್ತದೆ. ಹಾಗೆಯೇ, ಅಂದು ಬಿಲ್ಲು ಬಾಣ ಭರ್ಜಿಗಳನ್ನು ಹಿಡಿದು ಮನುಷ್ಯ ಜೀವನಸಾಗರವನ್ನು ಈಸಿದರೆ, ಈಗ ಪೆನ್ನು–ಪೇಪರುಗಳನ್ನು ಹಿಡಿದು ಜೀವನವನ್ನು ಎದುರಿಸಬೇಕಿದೆ. ಆಗುವುದಿಲ್ಲ ಎಂದರೆ ಸೋಲು, ಅಪಯಶಸ್ಸು, ಅಪಜಯ, ಹೀನ ಜೀವನ ಕಟ್ಟಿಟ್ಟ ಬುತ್ತಿ. ಎಲ್ಲರಿಗೂ ಅಪರಿಮಿತ ಯಶಸ್ಸು ಸಿಗುವುದಿಲ್ಲವಾದರೂ, ಜೀವನ ಯಾರಿಗೂ ಖಂಡಿತಾ ಮೋಸ ಮಾಡುವುದಿಲ್ಲ ಎನ್ನುವುದು ಸತ್ಯ.

ಮನುಷ್ಯನನ್ನು ಅಂದರೆ ಪರೀಕ್ಷಾ ಸನ್ನಿವೇಶವನ್ನು ತೆಗೆದುಕೊಂಡರೆ, ಮೌಲ್ಯ ಮಾಪನದ ವಿಧಾನ ಇಂದು ಬದಲಾಗಿದೆ. ನನಗೀಗ ಒಂದು ಕತೆ ನೆನಪಾಗುತ್ತಿದೆ. ಹಿಂದೆ ಗುರುಕುಲದಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದ ವಿದ್ಯಾರ್ಥಿಯೊಬ್ಬನು ರಾತ್ರಿಯ ಭೋಜನಕ್ಕೆ ಕುಳಿತಿರುತ್ತಾನೆ. ಊಟ ಬಡಿಸುತ್ತಿದ್ದ ಗುರುಮಾತೆಗೆ, 'ಇಂದು ಪಲ್ಯಕ್ಕೆ ಉಪ್ಪು ಕಡಿಮೆಯಾಗಿದೆ ಮಾತೆ' ಎನ್ನುತ್ತಾನೆ. ಆಗ ಜೊತೆಯಲ್ಲಿ ಭೋಜನಕ್ಕೆ ಕುಳಿತಿದ್ದ ಗುರುಗಳು, 'ವತ್ಸಾ, ಇಂದಿಗೆ ನಿನ್ನ ಶಿಕ್ಷಣ ಮುಕ್ತಾಯವಾಯಿತು' ಎನ್ನುತ್ತಾರೆ. ಭಯಗೊಂಡ ಶಿಷ್ಯ, 'ನನ್ನಿಂದೇನಾದರೂ ಅಪಚಾರವಾಯಿತೇ ಗುರುಗಳೇ' ಎಂದು ಭಯಗೊಂಡು ಕೇಳುತ್ತಾನೆ. ಆಗ ಗುರುಗಳು, 'ನೀನು ಇಲ್ಲಿಗೆ ಬಂದು 12 ವರ್ಷಗಳಾಯಿತು. ಅಂದಿನಿಂದಲೂ ಅಡುಗೆಗೆ ಉಪ್ಪನ್ನು ಬಳಸುತ್ತಿರಲಿಲ್ಲ. ನಿನಗೆ ಇಂದು ಅದರ ಅರಿವಾಯಿತು ಎಂದರೆ, ನಿನ್ನ ಧ್ಯಾನ ಜ್ಞಾನಾರ್ಜನೆಯಿಂದ ಸರಿದಿದೆ ಎಂದರ್ಥ. ನೀನಿನ್ನು ಲೌಕಿಕದೊಳಗೆ ಮಗ್ನನಾಗು' ಎನ್ನುತ್ತಾರೆ.

ಇಂದು ಈ ರೀತಿಯ ಮೌಲ್ಯಮಾಪನ ಸಾಧ್ಯವೇ? ಕಾಲಕ್ಕೆ ತಕ್ಕಂತೆ ನಾವೂ ಬದಲಾಗಬೇಕು. ಇಂದಿನ ವಿದ್ಯಾರ್ಥಿಗಳಿಗೆ ನಿಜಕ್ಕೂ ಬಹಳ ಸವಾಲುಗಳಿವೆ. ಸಾಮಾಜಿಕ ಜಾಲತಾಣಗಳು ಅವರ ದಿಕ್ಕುಗೆಡಿಸಿವೆ. ಬಲಹೀನ ಮನಸ್ಸಿನ ವಿದ್ಯಾರ್ಥಿಗಂತೂ ಅರ್ಧ ಗಂಟೆಯ ಏಕಾಗ್ರತೆ ಸಾಧಿಸುವುದೂ ಸಹ ಕಠಿಣ ಸವಾಲೆನಿಸಿದೆ. ಜೊತೆಗೆ ಕ್ಷಣಕ್ಷಣಕ್ಕೂ ಬದಲಾಗುತ್ತಿರುವ ಪ್ರಪಂಚ, ದಿನಕ್ಕೊಂದರಂತೆ ಆವಿಷ್ಕಾರಗೊಳ್ಳುತ್ತಿರುವ ತಂತ್ರಜ್ಞಾನ, ಹೊಸ ಹೊಸ ಜ್ಞಾನ ಶಾಖೆಗಳು? ಇವೆಲ್ಲ ಸಂಕಷ್ಟಗಳ ಸಪ್ತ ಸಮುದ್ರಗಳನ್ನು ದಾಟಿ ಗುರಿ ಸೇರುವ ವಿದ್ಯಾರ್ಥಿಯ ಮನೋಬಲವನ್ನು ಹೆಚ್ಚು ಮಾಡುವ ಹೊಸ ಹೊಸ ವಿಧಾನಗಳನ್ನು ನಾವಿಂದು ಕಂಡುಕೊಳ್ಳಬೇಕಿದೆ. ಆಗ ಮಾತ್ರ ದುರಂತಗಳಿಗೆ ಅಂತ್ಯ ಹಾಡಬಹುದು.

ಮಹಿಳೆಯರಿಗೆ ವಾರ್ಷಿಕ 1 ಲಕ್ಷ ರೂ. ನೆರವು, ಸರ್ಕಾರಿ ಹುದ್ದೆಗಳಲ್ಲಿ ಶೇ.50ರಷ್ಟು ಮೀಸಲಾತಿ

ಕಾಂಗ್ರೆಸ್‌ನ 'ನಾರಿ ನ್ಯಾಯ' ಗ್ಯಾರಂಟಿ

ನವದೆಹಲಿ, ಮಾ.13– ಲೋಕಸಭೆ ಚುನಾವಣೆಗೆ ದಿನಾಂಕ ಘೋಷಣೆಗೂ ಮುನ್ನವೇ ಕಾಂಗ್ರೆಸ್ ಪಕ್ಷ ಮತ್ತೊಂದು ಗ್ಯಾರಂಟಿ ಘೋಷಿಸಿದೆ.

ದೇಶದ ಮಹಿಳೆಯರಿಗಾಗಿ ಐದು ಪ್ರಮುಖ ಭರವಸೆಗಳನ್ನು ಒಳಗೊಂಡಿರುವ 'ನಾರಿ ನ್ಯಾಯ' ಗ್ಯಾರಂಟಿಯನ್ನು ಕಾಂಗ್ರೆಸ್ ಪ್ರಕಟಿಸಿದೆ. ಕೇಂದ್ರದಲ್ಲಿ ಪಕ್ಷ ಅಧಿಕಾರಕ್ಕೆ ಬಂದರೆ ಪ್ರತಿಯೊಂದು ಬಡ ಕುಟುಂಬದ ಒಬ್ಬ ಮಹಿಳೆಗೆ ವಾರ್ಷಿಕ 1 ಲಕ್ಷ ರೂ.ಗಳ ಆರ್ಥಿಕ ನೆರವು ಮತ್ತು ಕೇಂದ್ರ ಸರ್ಕಾರಿ ನೌಕರಿಗಳ ಎಲ್ಲ ಹೊಸ ನೇಮಕಾತಿಗಳಲ್ಲಿ ಶೇ.50ರಷ್ಟು ಮಹಿಳಾ ಕೋಟಾ ನೀಡುವುದಾಗಿ ಹೇಳಿದೆ.

ಲೋಕಸಭೆ ಚುನಾವಣಾ ಹೊಸ್ತಿಲಲ್ಲಿ ಕಾಂಗ್ರೆಸ್ ಈಗಾಗಲೇ ಸಹಭಾಗಿತ್ವದ ನ್ಯಾಯ, ರೈತ ನ್ಯಾಯ ಮತ್ತು ಯುವ ನ್ಯಾಯ ಘೋಷಣೆಗಳನ್ನು ಪ್ರಕಟಿಸಿದೆ. ಇಂದು ನಾರಿ ನ್ಯಾಯ ಗ್ಯಾರಂಟಿ ಬಗ್ಗೆ ಪ್ರಕಟಿಸಿರುವ ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ನಮ್ಮ ಗ್ಯಾರಂಟಿಗಳು ಕೇವಲ ಖಾಲಿ ಭರವಸೆಗಳು ಮತ್ತು ಹೇಳಿಕೆಗಳಲ್ಲ ಎಂದು ಹೇಳಬೇಕಾಗಿಲ್ಲ. ನಮ್ಮ ಮಾತುಗಳು ಶಾಸನದಲ್ಲೇ ಇವೆ. ಇದು 1926ರಿಂದ ಇಲ್ಲಿಯವರೆಗೆ ನಮ್ಮ ದಾಖಲೆಯಾಗಿದೆ. ನಮ್ಮ ವಿರೋಧಿಗಳು ಹುಟ್ಟುವ ಸಮಯದಲ್ಲೇ ನಾವು ಪ್ರಣಾಳಿಕೆಗಳನ್ನು ಮಾಡುತ್ತಿದ್ದೇವೆ. ಆ ಘೋಷಣೆಗಳನ್ನು ಈಡೇರಿಸುತ್ತಿದ್ದೇವೆ. ನೀವೆಲ್ಲರೂ ಕಾಂಗ್ರೆಸ್ ಪಕ್ಷಕ್ಕೆ ಆಶೀರ್ವಾದ ನೀಡಿ. ಪ್ರಜಾಪ್ರಭುತ್ವ ಮತ್ತು ಸಂವಿಧಾನವನ್ನು ಉಳಿಸುವ ಈ ಹೋರಾಟದಲ್ಲಿ ನಮ್ಮ ಕೈಗಳನ್ನು ಬಲಪಡಿಸಿ ಎಂದು ಸಾಮಾಜಿಕ ಜಾಲ ತಾಣ 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದಾರೆ.



ಮತ್ತೊಂದೆಡೆ, ಪಕ್ಷದ ನಾಯಕ ರಾಹುಲ್ ಗಾಂಧಿ ತಮ್ಮ ಭಾರತ್ ಜೋಡೋ ನ್ಯಾಯ್ ಯಾತ್ರೆಯ ಭಾಗವಾಗಿ ಮಹಾರಾಷ್ಟ್ರದ ಧುಲೆಯಲ್ಲಿ ನಡೆದ ಮಹಿಳಾ ಮೇಳವಾ ಸಮಾವೇಶದಲ್ಲೂ 'ನಾರಿ ನ್ಯಾಯ' ಗ್ಯಾರಂಟಿ ಬಗ್ಗೆ ಪ್ರಕಟಿಸಿದ್ದಾರೆ. ನರೇಂದ್ರ ಮೋದಿ ಲೋಕಸಭೆಯಲ್ಲಿ ಮಹಿಳಾ ಮೀಸಲಾತಿ (ಕಾಯ್ದೆ)ಯ ಬಗ್ಗೆ ಬಹಳ ಸದ್ದು ಮಾಡುವುದರೊಂದಿಗೆ ಅಂಗೀಕರಿಸಿದರು. ಬಳಿಕ ಮಹಿಳೆಯರಿಗೆ ಜನಗಣತಿ ನಂತರ ಮೀಸಲಾತಿ ಒದಗಿಸಲಾಗುತ್ತದೆ ಎಂದು ತಿಳಿಸಲಾಯಿತು. ಇದು ಕನಿಷ್ಠ 10 ವರ್ಷಗಳ ನಂತರ ಈಡೇರಲಿದೆ. ಆದರೆ, ಕಾಂಗ್ರೆಸ್ ಪಕ್ಷದ ಸರ್ಕಾರ ಅಧಿಕಾರಕ್ಕೆ ಬಂದ ಕೂಡಲೇ ಮಹಿಳೆಯರಿಗೆ ಮೀಸಲಾತಿ ನೀಡಲಾಗುವುದು ಎಂದು ತಿಳಿಸಿದರು.

'ನಾರಿ ನ್ಯಾಯ'ದ ಐದು ಪ್ರಮುಖ ಗ್ಯಾರಂಟಿ

ಮಹಾಲಕ್ಷ್ಮಿ: ಕಾಂಗ್ರೆಸ್ ಪಕ್ಷದ 'ಮಹಾಲಕ್ಷ್ಮಿ' ಗ್ಯಾರಂಟಿ ಅಡಿ ದೇಶದ ಪ್ರತಿ ಬಡ ಕುಟುಂಬದ ಒಬ್ಬ ಮಹಿಳೆಗೆ ನೇರ ನಗದು ವರ್ಗಾವಣೆ ಮೂಲಕ ವಾರ್ಷಿಕ 1 ಲಕ್ಷ ರೂ. ನೆರವು ಒದಗಿಸಲಾಗುತ್ತದೆ.

ಆದಿ ಆಬಾದಿ, ಪೂರ ಹಕ್: ಎರಡನೇ ಗ್ಯಾರಂಟಿಯಾಗಿ 'ಆದಿ ಆಬಾದಿ, ಪೂರ ಹಕ್' (ಅರ್ಧದಷ್ಟು ಜನಸಂಖ್ಯೆ, ಪೂರ್ಣ ಹಕ್ಕು) ಅಡಿ ಕೇಂದ್ರ ಸರ್ಕಾರಿ ಉದ್ಯೋಗಗಳಲ್ಲಿ ಎಲ್ಲ ಹೊಸ ನೇಮಕಾತಿಗಳಲ್ಲಿ ಶೇ.50ರಷ್ಟು ಮಹಿಳೆಯರಿಗೆ ಮೀಸಲಾತಿ ನೀಡಲಾಗುತ್ತದೆ.


ಶಕ್ತಿ ಕಾ ಸಮ್ಮಾನ್: ಮೂರನೇ ಗ್ಯಾರಂಟಿಯಾಗಿ 'ಶಕ್ತಿ ಕಾ ಸಮ್ಮಾನ್' ಅಡಿ ಆಶಾ, ಅಂಗನವಾಡಿ ಮತ್ತು ಮಧ್ಯಾಹ್ನದ ಊಟದ ಕಾರ್ಯಕರ್ತೆಯರ ಮಾಸಿಕ ವೇತನಕ್ಕೆ ಕೇಂದ್ರದ ಕೊಡುಗೆಯನ್ನು ದ್ವಿಗುಣಗೊಳಿಸಲಾಗುತ್ತದೆ.

ಅಧಿಕಾರ ಮೈತ್ರಿ: ಮಹಿಳೆಯರಿಗೆ ತಮ್ಮ ಕಾನೂನು ಹಕ್ಕುಗಳ ಬಗ್ಗೆ ಶಿಕ್ಷಣ ನೀಡಲು ಮತ್ತು ಅವುಗಳನ್ನು ಜಾರಿಗೊಳಿಸಲು ಸಹಾಯ ಮಾಡಲು ಪ್ರತಿ ಪಂಚಾಯತ್‌ನಲ್ಲಿ 'ಅಧಿಕಾರ ಮೈತ್ರಿ' ನಾಲ್ಕನೇ ಗ್ಯಾರಂಟಿಯಾಗಿದೆ.

ಸಾವಿತ್ರಿ ಬಾಯಿ ಫುಲೆ ಹಾಸ್ಟೆಲ್‌ಗಳು: ನಾರಿ ನ್ಯಾಯದ ಐದನೇ ಗ್ಯಾರಂಟಿಯಾಗಿ 'ಸಾವಿತ್ರಿ ಬಾಯಿ ಫುಲೆ ಹಾಸ್ಟೆಲ್‌ಗಳು' ಹೆಸರಲ್ಲಿ ದೇಶದಲ್ಲಿ ಉದ್ಯೋಗಿ ಮಹಿಳೆಯರಿಗಾಗಿ ಪ್ರತಿ ಜಿಲ್ಲೆಯಲ್ಲಿ ಕನಿಷ್ಠ ಒಂದರಂತೆ ಹಾಸ್ಟೆಲ್‌ಗಳ ಸಂಖ್ಯೆಯನ್ನು ದ್ವಿಗುಣಗೊಳಿಸಲಾಗುತ್ತದೆ ಎಂದು ಕಾಂಗ್ರೆಸ್ ಹೇಳಿದೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Vishveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಸಾನ್ವಿ ಶರತ್ ಭಾರತೀಯ ಸಾಧಕರ ದಾಖಲೆಗೆ ಸೇರ್ಪಡೆ



ಮೈಸೂರು,ಮಾ.13– ಮೈಸೂರಿನಲ್ಲಿ ಆಗಸ್ಟ್ 29, 2022ರಲ್ಲಿ ಜನಿಸಿದ ಸಾನ್ವಿ ಶರತ್ ಇದೀಗ ಭಾರತೀಯ ಸಾಧಕರ ದಾಖಲೆಗೆ (ಇಂಡಿಯನ್ ಬುಕ್ ಆಫ್ ರೆಕಾರ್ಡ್ಸ್) ಸೇರ್ಪಡೆಯಾಗಿದ್ದಾಳೆ.

ಟೆಕ್ಕಿ ದಂಪತಿಗಳಾದ ಅನುಷಾ ಅಯ್ಯಂಗಾರ್ ಮತ್ತು ಕೆ.ಜೆ.ಶರತ್ ಅವರ ಮಗು ದೇಹದ 14 ಭಾಗಗಳ ಹೆಸರು, 10 ವಾಹನಗಳ ಹೆಸರು, 14 ಹಣ್ಣುಗಳು, 12 ಪಕ್ಷಿಗಳು, 16 ತರಕಾರಿಗಳು, 9 ಸಾಕು ಪ್ರಾಣಿಗಳು, 10 ವಿವಿಧ ಆಕೃತಿಗಳು, 12 ವೃತ್ತಿಪರರು, 10 ದೇಶದ ಧ್ವಜಗಳು, 9 ಪ್ರಸಿದ್ಧ ಸ್ಥಳಗಳು, ಎಯಿಂದ ಜಡ್ ವರೆಗೆ, ಕನ್ನಡ ಅಂಕಿಗಳು, 14 ಪ್ರಾಣಿಗಳ ಶಬ್ಧಗಳನ್ನು ಹೇಳುವುದು, 10 ವಿವಿಧ ಸ್ವಾತಂತ್ರ್ಯ ಹೋರಾಟಗಾರರ ಹೆಸರು, 9 ಗ್ರಹಗಳ ಹೆಸರುಗಳನ್ನು ಹೇಳುತ್ತದೆ. ಜೊತೆಗೆ ಹಲವಾರು ಇಂಗ್ಲೀಷ್ ಮತ್ತು ಕನ್ನಡ ಪದ್ಯಗಳನ್ನು, ಕನ್ನಡ ಮಾಸಗಳನ್ನು ಸುಲಲಿತವಾಗಿ ಹೇಳುತ್ತಾಳೆ. ಅಲ್ಲದೆ ಕೆಲವು ಸಂಸ್ಕೃತ ಶ್ಲೋಕಗಳನ್ನು ಹೇಳುವ ಮೂಲಕ ಎಲ್ಲರನ್ನು ಚಕಿತಗೊಳಿಸುತ್ತಾಳೆ.

ಪಕ್ಷಿಗಳ ದಾಹ ನೀಗಿಸಲು ಮಡಿಕೆ ಕಟ್ಟಿ ನೀರು ತುಂಬಿಸುವ ಅಭಿಯಾನಕ್ಕೆ ಚಾಲನೆ



ಪಕ್ಷಿಗಳ ದಾಹ ನೀಗಿಸಲು ಮರಗಳಿಗೆ ಮಣ್ಣಿನ ಮಡಿಕೆ ಕಟ್ಟಿ ನೀರು ತುಂಬಿಸುವ ಅಭಿಯಾನಕ್ಕೆ 'ಮೈಸೂರು ಮಿತ್ರ' ಮತ್ತು 'ಸ್ಟಾರ್ ಆಫ್ ಮೈಸೂರ್' ಸಂಸ್ಥಾಪಕ ಸಂಪಾದಕರಾದ ಡಾ.ಕೆ.ಬಿ.ಗಣಪತಿ (ಕೆಬಿಜಿ) ಬುಧವಾರ ಚಾಲನೆ ನೀಡಿದರು.

ಮೈಸೂರು,ಮಾ.13(ಪಿಎಂ)– ಬೇಸಿಗೆ ಹಿನ್ನೆಲೆಯಲ್ಲಿ ಪಕ್ಷಿಗಳ ದಾಹ ನೀಗಿಸಲು ಮರಗಳಿಗೆ ಮಣ್ಣಿನ ಮಡಿಕೆ ಕಟ್ಟಿ ನೀರು ತುಂಬಿಸುವ ಮೈಸೂರು ಕನ್ನಡ ವೇದಿಕೆಯ ಅಭಿಯಾನಕ್ಕೆ 'ಮೈಸೂರು ಮಿತ್ರ' ಮತ್ತು 'ಸ್ಟಾರ್ ಆಫ್ ಮೈಸೂರ್' ಸಂಸ್ಥಾಪಕ ಸಂಪಾದಕರಾದ ಡಾ.ಕೆ.ಬಿ.ಗಣಪತಿ (ಕೆಬಿಜಿ) ಅವರು ಬುಧವಾರ ಚಾಲನೆ ನೀಡಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದ ಆವರಣದಲ್ಲಿ ಮರವೊಂದಕ್ಕೆ ಕಟ್ಟಿದ್ದ ಮಡಿಕೆಗೆ ನೀರು ತುಂಬಿಸುವ ಮೂಲಕ ಅಭಿಯಾನಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಬೇಸಿಗೆ ಕಾರಣ ಪಕ್ಷಿಗಳ ದಾಹ ನೀಗಿಸಲು ಇಂತಹ ಅಭಿಯಾನ ರೂಪಿಸಿರುವುದು ಶ್ಲಾಘನೀಯ. ಇಂತಹ ಕಾರ್ಯಕ್ರಮಗಳಿಂದ ಪ್ರಾಣಿ–ಪಕ್ಷಿ ಸಂಕುಲಗಳ ಸಂರಕ್ಷಣೆ ಸಾಧ್ಯವಾಗಲಿದೆ. ಈ ಕಾರ್ಯಕ್ರಮ ಕೇವಲ ಒಂದು ದಿನಕ್ಕೆ ಸೀಮಿತವಾಗಬಾರದು. ಪ್ರತಿದಿನ ಮರಕ್ಕೆ ಕಟ್ಟಿದ ಮಡಿಕೆಗೆ ನೀರು ತುಂಬಿಸುವ ಕಾರ್ಯ ನಡೆಯಬೇಕು ಎಂದು ಸಲಹೆ ನೀಡಿದರು.

ಜೊತೆಗೆ ಈ ಅಭಿಯಾನಕ್ಕೆ ಪ್ಲಾಸ್ಟಿಕ್ ಬಾಟಲಿ ಮೊರೆ ಹೋಗದೇ ಮಣ್ಣಿನ ಮಡಿಕೆ ಬಳಸಿರುವುದು ವಿಶೇಷ ಮಾತ್ರವಲ್ಲ, ಅಗತ್ಯವೂ ಆಗಿದೆ. ಜೊತೆಗೆ ಇದರಿಂದ ಕುಂಬಾರಿಕೆಗೆ ಉತ್ತೇಜನವೂ ದೊರೆಯಲಿದೆ ಎಂದು ಹೇಳಿದರು. ಮೈಸೂರು ಮಹಾನಗರ ಪಾಲಿಕೆ ಮಾಜಿ ಸದಸ್ಯ ಬಿ.ವಿ.ಮಂಜುನಾಥ್, ವೇದಿಕೆ ಅಧ್ಯಕ್ಷ ಎಸ್.ಬಾಲಕೃಷ್ಣ, ಮುಖಂಡರಾದ ಗುರುಬಸಪ್ಪ, ಪ್ಯಾಲೇಸ್ ಬಾಬು, ಎಲ್ಐಸಿ ಸಿದ್ದಪ್ಪ, ಗೋವಿಂದರಾಜು, ಕಾವೇರಮ್ಮ, ರಮೇಶ್, ಮಾದಪ್ಪ, ಬೋಗಾದಿ ಸಿದ್ದೇಗೌಡ ಮತ್ತಿತರರು ಹಾಜರಿದ್ದರು.



ಮೈಸೂರು ವಿಶ್ವವಿದ್ಯಾಲಯದ ಗೌರವ ಡಾಕ್ಟರೇಟ್‌ಗೆ ಬಾಜನರಾದ ವಿಜಯನಗರದ ಯೋಗಾನರಸಿಂಹಸ್ವಾಮಿ ದೇವಾಲಯದ ಸಂಸ್ಥಾಪಕರಾದ ಪ್ರೊ.ಡಾ.ಭಾಷ್ಯಂ ಸ್ವಾಮೀಜಿ ಅವರನ್ನು ಮೈಸೂರು ನಗರ–ಜಿಲ್ಲಾ ಬ್ರಾಹ್ಮಣ ಸಂಘದ ಅಧ್ಯಕ್ಷ ಡಿ.ಟಿ.ಪ್ರಕಾಶ್ ಅಭಿನಂದಿಸಿದರು. ಈ ವೇಳೆ ಬ್ರಾಹ್ಮಣ ಸಂಘಟನೆ ಮುಖಂಡರಾದ ಎಂ.ಆರ್. ಬಾಲಕೃಷ್ಣ, ಅಪೂರ್ವ ಸುರೇಶ್, ಯೋಗ ನರಸಿಂಹ (ಮುರಳಿ), ಕಡಕೋಳ ಜಗದೀಶ್, ಮೈಸೂರು ಜಿಲ್ಲಾ ಬ್ರಾಹ್ಮಣ ಯುವ ವೇದಿಕೆಯ ಪ್ರಧಾನ ಕಾರ್ಯದರ್ಶಿ ವಿಕ್ರಮ ಅಯ್ಯಂಗಾರ್, ಸಂಘಟನಾ ಕಾರ್ಯದರ್ಶಿ ಅಜಯ್ ಶಾಸ್ತ್ರಿ, ಹೊಯ್ಸಳ ಕರ್ನಾಟಕದ ನಿರ್ದೇಶಕ ರಂಗನಾಥ್, ಜ್ಯೋತಿ, ದಯಾನಂದ್ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ಮಾ.16ರಿಂದ ಮೈಸೂರಲ್ಲಿ ಕ್ರಿಕೆಟ್ ಪಂದ್ಯಾವಳಿ



ಮೈಸೂರು, ಮಾ.13(ಜಿಎ)–ಎಡಿನ್ ಬ್ರಿಡ್ಜ್ ಫೌಂಡೇಶನ್ ಮತ್ತು ಮೈಸೂರು ಹೆಚ್‌ಆರ್ ಫೋರಮ್ ಸಂಸ್ಥೆಗಳು, ಎನ್‌ಐಇ ಕಾಲೇಜು, ಟಾಟಾ ಮೋಟಾರ್ಸ್ ಮತ್ತು ಫೋರ್ ಫ್ರಂಟ್ ಹೆಲ್ತ್ ಕೇರ್ ಸಂಸ್ಥೆಗಳ ಸಹಯೋಗದೊಂದಿಗೆ ಮಾ.16ರಿಂದ ನಗರದ ಹೂಟಗಳ್ಳಿ ಕೈಗಾರಿಕಾ ಪ್ರದೇಶದಲ್ಲಿರುವ ಎನ್‌ಐಇ ಉತ್ತರ ಕಾಲೇಜು ಮೈದಾನದಲ್ಲಿ ಕ್ರಿಕೆಟ್ ಪಂದ್ಯಾವಳಿ ಆಯೋಜಿಸಲಾಗಿದೆ ಎಂದು ಸಂಸ್ಥೆಯ ಮುಖ್ಯಸ್ಥ ಎಂ.ಫಣೀಶ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮಾ.16 ರಂದು ಬೆಳಗ್ಗೆ 7.30ಕ್ಕೆ ಪಂದ್ಯಾವಳಿ ಉದ್ಘಾಟನೆಗೊಂಡ ಬಳಿಕ ಮಾ. 17, 23, 24, 30 ಮತ್ತು 31, ಏಪ್ರಿಲ್ 6, 7ರಂದು ಪಂದ್ಯಗಳು ಮುಂದುವರಿಯಲಿವೆ. ಈ ಬಾರಿ ಮಹಿಳೆಯರಿಗೂ ಸಹಾ ಕ್ರಿಕೆಟ್ ಪಂದ್ಯಗಳನ್ನು ಆಯೋಜಿಸಲಾಗಿದೆ. ಕ್ರೀಡಾಕೂಟವನ್ನು ಸಾಮಾಜಿಕ ಕಾರಣಕ್ಕಾಗಿ ನಡೆಸಲಾಗುತ್ತಿದ್ದು, ಕ್ರೀಡಾಕೂಟದಲ್ಲಿ ಸಂಗ್ರಹವಾದ ಹಣವನ್ನು ಒಂದು ಸಾಮಾಜಿಕ ಕಾರ್ಯಕ್ಕೆ ಬಳಸಲಾಗುವುದು ಎಂದರು.

ಮಾಜಿ ಕ್ರಿಕೆಟಿಗ ಜಾವಗಲ್ ಶ್ರೀನಾಥ್, ಗಾಯಕ ವಿಜಯ್ ಪ್ರಕಾಶ್, ನಟಿ ಹರಿಪ್ರಿಯಾ, ನಟರಾದ ಪ್ರಮೋದ್, ಶ್ರುತಿ ನಾಯ್ಡು ಮುಂತಾದ ಪ್ರಮುಖ ವ್ಯಕ್ತಿಗಳು ವಿವಿಧ ದಿನಗಳಂದು ಆಗಮಿಸಿ ಕ್ರಿಕೆಟ್ ಪಟುಗಳಿಗೆ ಸ್ಫೂರ್ತಿ ತುಂಬಲಿದ್ದಾರೆ ಎಂದರು. ಸುದ್ದಿಗೋಷ್ಠಿಯಲ್ಲಿ ಸೂರಜ್, ಕಿಶನ್, ಸಿ. ಮೇದಪ್ಪ, ಜಯ್ ಚಾವ್ಲಾ ಉಪಸ್ಥಿತರಿದ್ದರು.

ಕನ್ನಡ ಭಾಷೆ ನಾಮಫಲಕ ಅಳವಡಿಕೆ ಮಾ.31ರಂದು ಅಂತಿಮ ಗಡುವು

ಮೈಸೂರು,ಮಾ.13–ಮೈಸೂರು ಮಹಾನಗರಪಾಲಿಕೆ ವ್ಯಾಪ್ತಿಯಲ್ಲಿರುವ ಎಲ್ಲಾ ಉದ್ದಿಮೆದಾರರು ಕಡ್ಡಾಯವಾಗಿ ಶೇ.60ರಷ್ಟು ಕನ್ನಡ ಭಾಷೆಯನ್ನು ನಾಮಫಲಕದ ಮೇಲ್ಭಾಗದಲ್ಲಿ ಪ್ರದರ್ಶಿಸಲು ಮಾರ್ಚ್ 31ರ ತನಕ ಅಂತಿಮ ಗಡುವು ನೀಡಲಾಗಿದೆ. ಮಾರ್ಚ್ 31ರ ನಂತರ ಅಳವಡಿಸಿರುವ ನಾಮಫಲಕಗಳಲ್ಲಿ ಕನ್ನಡ ಭಾಷೆ ಯನ್ನು ಶೇ.60ರಷ್ಟು ಪ್ರದರ್ಶಿಸದೇ ಇದ್ದಲ್ಲಿ ಪ್ರಥಮ ಹಂತದಲ್ಲಿ 5000 ರೂ., ದ್ವಿತೀಯ ಹಂತದಲ್ಲಿ 10,000 ರೂ. ಹಾಗೂ ತೃತೀಯ ಹಂತದಲ್ಲಿ ರೂ 20,000 ದಂಡವನ್ನು ವಿಧಿಸಿ, ಉದ್ದಿಮೆಗೆ ನೀಡಿರುವ ರಹದಾರಿಯನ್ನು ರದ್ದುಗೊಳಿಸುವ ಕುರಿತು ನಿಯಮಾನುಸಾರ ಕ್ರಮ ಕೈಗೊಳ್ಳಲಾಗುತ್ತದೆ ಎಂದು ಮೈಸೂರು ಮಹಾನಗರಪಾಲಿಕೆಯ ಆಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೈಸೂರು, ಕೊಡಗು ಜನತೆ ಋಣ ನನ್ನ ಮೇಲಿದೆ

ಸಂಸದ ಪ್ರತಾಪ್ ಸಿಂಹ ಭಾವುಕ ನುಡಿ



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಕನ್ನಡ ಚಳುವಳಿ ಕೇಂದ್ರ ಸಮಿತಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಮೈಸೂರು–ಕೊಡಗು ಸಂಸದ ಪ್ರತಾಪ್ ಸಿಂಹ ಅವರನ್ನು ಅಭಿನಂದಿಸಲಾಯಿತು. ಈ ವೇಳೆ 'ಸ್ಟಾರ್ ಆಫ್ ಮೈಸೂರ್' ಹಾಗೂ 'ಮೈಸೂರು ಮಿತ್ರ' ಸಂಸ್ಥಾಪಕ ಸಂಪಾದಕರಾದ ಡಾ.ಕೆ.ಬಿ. ಗಣಪತಿ, ಎಪಿಎನ್ ಪ್ರಾಪರ್ಟೀಸ್‌ನ ಎ.ಪಿ. ನಾಗೇಶ್, ಸಾಹಿತಿ ಬನ್ನೂರು ರಾಜು, ಕನ್ನಡ ಚಳುವಳಿ ಕೇಂದ್ರ ಸಮಿತಿ ಅಧ್ಯಕ್ಷ ಮೂಗೂರು ನಂಜುಂಡಸ್ವಾಮಿ, ಮೈಸೂರು ವಿಶ್ವವಿದ್ಯಾನಿಲಯದ ಗಾಂಧಿ ಭವನದ ನಿವೃತ್ತ ನಿರ್ದೇಶಕ ಡಾ.ಎಸ್.ಶಿವರಾಜಪ್ಪ, ಸಮಾಜ ಸೇವಕ ಡಾ.ಕೆ.ರಘುರಾಂ ವಾಜಪೇಯಿ ಅವರುಗಳನ್ನು ಚಿತ್ರದಲ್ಲಿ ಕಾಣಬಹುದು.

ಮೈಸೂರು, ಮಾ. 13– ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಕನ್ನಡ ಚಳವಳಿ ಕೇಂದ್ರ ಸಮಿತಿ ವತಿಯಿಂದ ಸಂಸದ ಪ್ರತಾಪ್ ಸಿಂಹ ಅವರನ್ನು ಅಭಿನಂದಿಸಲಾಯಿತು.

ಸನ್ಮಾನ ಸ್ವೀಕರಿಸಿ ಮಾತ ನಾಡಿದ ಪ್ರತಾಪ್ ಸಿಂಹ, ಯಾರೇ ಆಗಲಿ ಸಾಯುವವರೆಗೆ ರಾಜಕಾರಣ ಮಾಡಲು ಸಾಧ್ಯವಿಲ್ಲ. ಆದರೆ, ಜನರ ಪ್ರೀತಿ–ವಿಶ್ವಾಸಕ್ಕಿಂತ ಯಾವುದೂ ದೊಡ್ಡದಲ್ಲ. ನನಗೆ ಜನರ ಪ್ರೀತಿ–ವಿಶ್ವಾಸ ದೊರೆತಿದೆ ಎಂದರು.

ಮೈಸೂರು ಮತ್ತು ಕೊಡಗು ಜಿಲ್ಲೆ ಜನರ ಋಣ ನನ್ನ ಮೇಲಿದೆ. ಅದನ್ನು ತೀರಿಸಲು ಸಾಧ್ಯವಿಲ್ಲ. ಮೈಸೂರು ನನ್ನ ಜನ್ಮ ಭೂಮಿಯಲ್ಲ. ಇದು ನನ್ನ ಕರ್ಮ ಭೂಮಿ ಹಾಗೂ ರುದ್ರಭೂಮಿಯಾಗಿದೆ. ಇಲ್ಲೇ ಇರುತ್ತೇನೆ, ಇಲ್ಲೇ ಸಾಯುತ್ತೇನೆ ಎಂದು ಭಾವುಕರಾಗಿ ನುಡಿದರು.

2014ರ ಏಪ್ರಿಲ್ 8ರಲ್ಲಿ ಮೋದಿಯವರು ಮೈಸೂರಿನಲ್ಲಿ ನನ್ನ ಪರವಾಗಿ ಪ್ರಚಾರ ಮಾಡಿದ ಪರಿಣಾಮ ನಾನು ಗೆದ್ದೆ. ನಂತರ 2019ರ ಚುನಾವಣೆಯಲ್ಲೂ ಭಾರೀ ಅಂತರದಿಂದ ಗೆದ್ದಿದ್ದೇನೆ ಕೊಡಗು ಮತ್ತು ಮೈಸೂರು ನನ್ನ ಮನೆಯಂತೆ ಅಭಿವೃದ್ಧಿಪಡಿಸಲು ಶ್ರಮಿಸಿದ್ದೇನೆ. ಕಳೆದ 10 ವರ್ಷಗಳಲ್ಲಿ ಹಲವಾರು ಯೋಜನೆಗಳನ್ನು ತಂದಿದ್ದೇನೆ. ಮೋದಿಯವರು ಮತ್ತೊಮ್ಮೆ ಪ್ರಧಾನಿಯಾಗಬೇಕು. ಅದಕ್ಕಾಗಿ ಪಕ್ಷದ ಅಭ್ಯರ್ಥಿ ಪರ ಶ್ರಮಿಸುತ್ತೇನೆ ಎಂದರು. ಇದಕ್ಕೂ ಮುನ್ನ ಮಾತನಾಡಿದ 'ಮೈಸೂರು ಮಿತ್ರ' ಮತ್ತು 'ಸ್ಟಾರ್ ಆಫ್ ಮೈಸೂರ್' ಪತ್ರಿಕೆಗಳ ಸಂಸ್ಥಾಪಕ ಸಂಪಾದಕರಾದ ಡಾ. ಕೆ.ಬಿ. ಗಣಪತಿ ಯವರು, ಸಂಸದರಾಗಿ ಕ್ಷೇತ್ರ ಅಭಿವೃದ್ಧಿಗೆ ಹಿಂದಿನವರಿಗಿಂತ ಭಿನ್ನವಾಗಿ ಪ್ರತಾಪ್ ಸಿಂಹ ಅಪಾರ ಕೊಡುಗೆ ನೀಡಿದ್ದಾರೆ ಮೈಸೂರಿನಲ್ಲಿರುವ ಪಾಸ್‌ಪೋರ್ಟ್ ಸೇವಾ ಕೇಂದ್ರವಾಗಲೀ ಇನ್ನಿತರ ಕೆಲಸವಾಗಲೀ ಪ್ರತಾಪ್ ಸಿಂಹ ಅವರ ಪರಿಶ್ರಮದಿಂದಲೇ ಆಗಿವೆ ಎಂದರು. ಕಾರ್ಯಕ್ರಮದಲ್ಲಿ ಮೈಸೂರು ವಿವಿ ಗಾಂಧಿ ಭವನದ ನಿವೃತ್ತ ನಿರ್ದೇಶಕ ಪ್ರೊ ಎಸ್. ಶಿವರಾಜಪ್ಪ ಸಾಹಿತಿ ಬನ್ನೂರು ಕೆ ರಾಜು, ಎಪಿಎನ್ ಪ್ರಾಪರ್ಟೀಸ್‌ನ ಎ.ಪಿ. ನಾಗೇಶ್, ಸಮಾಜ ಸೇವಕ ರಘುರಾಂ ವಾಜಪೇಯಿ, ಕನ್ನಡ ಚಳವಳಿಗಾರರಾದ ಮೂಗೂರು ನಂಜುಂಡಸ್ವಾಮಿ, ತೇಜಸ್ ಲೋಕೇಶ್‌ಗೌಡ ಮತ್ತಿತರರಿದ್ದರು.

ಸಂಸದ ಪ್ರತಾಪ್‌ಸಿಂಹರಿಗೆ ಬಂದ ಕರೆ...!

ಇಂದು ಬೆಳಿಗ್ಗೆ ಪತ್ರಕರ್ತರ ಭವನದಲ್ಲಿ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ಮಾತನಾಡುತ್ತಿದ್ದಾಗ ಪ್ರತಾಪ್ ಸಿಂಹ ಅವರ ಸೆಲ್‌ಫೋನ್‌ಗೆ ಕರೆಯೊಂದು ಬಂತು. ಸಿಂಹ ಅವರು ತಕ್ಷಣ ತಮ್ಮ ಭಾಷಣವನ್ನು ನಿಲ್ಲಿಸಿ, ಪತ್ರಕರ್ತರ ಭವನದ ಕಂಪ್ಯೂಟರ್ ಕೋಣೆಗೆ ಹೋಗಿ ಅಲ್ಲಿ ಸುಮಾರು 10 ನಿಮಿಷಗಳ ಕಾಲ ಮಾತನಾಡಿದ ನಂತರ, ಅಲ್ಲಿಂದ ಬಂದು ಮಾತು ಮುಂದುವರೆಸಿದರು. ಮಹಾರಾಜರು ಸೇರಿದಂತೆ ಯಾರೇ ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಅಭ್ಯರ್ಥಿಯಾಗಲಿ ಮೋದಿಯನ್ನು ಮತ್ತೊಮ್ಮೆ ಪ್ರಧಾನಿಯನ್ನಾಗಿ ಮಾಡಲು ನಾವು ಕೆಲಸ ಮಾಡುತ್ತೇವೆ ಎಂದು ಹೇಳಿದರು.

ಮಾ.16ರಿಂದ ಗೋರ್ ಮಾಟಿ ವಾರಾಂತ್ಯ ನಾಟಕ ಪ್ರದರ್ಶನ



ರಂಗಾಯಣ ಉಪನಿರ್ದೇಶಕಿ ನಿರ್ಮಲಾ ಮಠಪತಿ ಮಾತನಾಡಿದರು.

ಮೈಸೂರು,ಮಾ.13(ಎಂಟಿವೈ)–ಮೈಸೂರಿನ ರಂಗಾಯಣದ ಭೂಮಿಗೀತದಲ್ಲಿ ಮಾ.16ರಿಂದ 31ರವರೆಗೆ ವಾರಾಂತ್ಯದಲ್ಲಿ ಲಂಬಾಣಿ ಸಮುದಾಯದ ಜೀವನ, ಕಲೆ, ಸಂಸ್ಕೃತಿ ಬಿಂಬಿಸುವ 'ಗೋರ್ ಮಾಟಿ' ಪ್ರದರ್ಶನ ಏರ್ಪಡಿಸಲಾಗಿದೆ ಎಂದು ನಾಟಕದ ನಿರ್ದೇಶಕ, ಹಿರಿಯ ರಂಗಕರ್ಮಿ ಸಿ.ಬಸವಲಿಂಗಯ್ಯ ತಿಳಿಸಿದ್ದಾರೆ.

ರಂಗಾಯಣದಲ್ಲಿ ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಲಂಬಾಣಿ ಸಮುದಾಯದ ಸಂಸ್ಕೃತಿ, ಕಲೆ, ಜೀವನ ಸ್ಥಿತಿ–ಗತಿಯನ್ನು ಬಿಂಬಿಸುವ 'ಗೋರ್ ಮಾಟಿ' ನಾಟಕವು ಮಾ. 16, 17, 22, 23, 24, 29, 30 ಮತ್ತು 31ರಂದು ನಾಟಕ ಪ್ರದರ್ಶನ ಆಯೋಜಿಸಲಾಗಿದೆ. ಬೇರೆ ಬೇರೆ ಸಮುದಾಯಕ್ಕೆ ಸೇರಿದ ಕಲಾವಿದರು ಈ ನಾಟಕದಲ್ಲಿ ಅಭಿನಯಿಸಿದ್ದು, ಲಂಬಾಣಿ ಸಂಸ್ಕೃತಿಯನ್ನು ವಿವಿಧ ಆಕಾರ ಗ್ರಂಥಗಳು ಮತ್ತು ಸಮುದಾಯದ ನಾಯಕರಿಂದ ತಿಳಿದುಕೊಂಡು ಅಭಿನಯಿಸಿದ್ದಾರೆ. ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ್ ತಂಗಡಗಿ ಅವರು, ಇತ್ತೀಚಿನ ಸಭೆಯೊಂದರಲ್ಲಿ ಲಂಬಾಣಿ ಜನಾಂಗದ ಕುರಿತು ನಾಟಕ ಮಾಡುವಂತೆ ಸೂಚಿಸಿದ್ದರು. ಅದರಂತೆ ಈ ನಾಟಕ ರಂಗರೂಪಕ್ಕೆ ಬರುತ್ತಿದೆ ಎಂದರು.

ಸಂಚಾರಿಗಳು, ಅಲೆಮಾರಿಗಳಾದ ವಣಿಕರು ಅಥವಾ ಸರಕು ಸಾಗಣೆದಾರರಾದ ಬಂಜಾರರನ್ನು, ಲಂಬಾಣಿ, ಲಮಾಣಿ, ಮಾಣ್, ಲದಣಿಯಾ, ಲಂಬಾಡಿ, ಲಂಬಾಡ ಮುಂತಾದ ಪರ್ಯಾಯ ಪದಗಳಲ್ಲಿ ಕರೆಯಲಾಗುತ್ತದೆ. ಬಂಜಾರ ಜನಾಂಗ ಅಂತಾರಾಷ್ಟ್ರೀಯ ನೆಲೆಯಲ್ಲಿ ರೋಮ–ಜಿಪ್ಸಿ ಸಮುದಾಯವೇ ಆಗಿದೆ. ಈ ರಂಗ ಪ್ರಯೋಗಕ್ಕೆ ಇತಿಹಾಸ, ಪುರಾಣ, ಐತಿಹ್ಯ, ಜೊತೆಗೆ ವಾಸ್ತವ ಬದುಕಿನ ಕಥನ, ಕಾವ್ಯ, ಸಂಶೋಧನಾ ಆಕರ ಒಳಗೊಂಡಿದೆ. ನಾಟಕದ ರೂಢಿಗತ ಕಲ್ಪನೆಯಾದ ದೇಶ–ಕಾಲದ ಹಂಗನ್ನು ಮೀರಿ ವರ್ತಮಾನಕ್ಕೆ ಸ್ಪಂದಿಸುವ ವಿನ್ಯಾಸವನ್ನು ಪ್ರಜ್ಞಾಪೂರ್ವಕವಾಗಿ ಈ ಪ್ರಯೋಗದಲ್ಲಿ ಬಳಸಲಾಗಿದೆ ಎಂದರು. ಸುದ್ದಿಗೋಷ್ಠಿಯಲ್ಲಿ ರಂಗಕರ್ಮಿ ಹೆಚ್.ಎಸ್. ಉಮೇಶ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್. ಮಲ್ಲಿಕಾರ್ಜುನ ಸ್ವಾಮಿ, ರಂಗಾಯಣ ಉಪ ನಿರ್ದೇಶಕಿ ನಿರ್ಮಲಾ ಮಠಪತಿ ಇದ್ದರು.

ಬಹುರೂಪಿ ಯಶಸ್ವಿಯಾಗಿದೆ

ಮೈಸೂರು, ಮಾ.13(ಎಂಟಿವೈ)– ರಂಗಾಯಣದ ಆವರಣದಲ್ಲಿ ಮಾ.6ರಿಂದ 11ರವರೆಗೆ ನಡೆದ 'ಇವ ನಮ್ಮವ ಇವ ನಮ್ಮವ' ಬಹುರೂಪಿ ರಾಷ್ಟ್ರೀಯ ನಾಟಕೋತ್ಸವ ಯಶಸ್ವಿಯಾಗಿ ನೆರವೇರಿದೆ ಎಂದು ರಂಗಾಯಣ ಉಪ ನಿರ್ದೇಶಕಿ ನಿರ್ಮಲಾ ಮಠಪತಿ ತಿಳಿಸಿದ್ದಾರೆ.

ಈ ಬಾರಿಯ ಬಹುರೂಪಿ ನಾಟಕೋತ್ಸವದಲ್ಲಿ ಪ್ರತಿದಿನ ಸುಮಾರು 800 ಮಂದಿ ನಾಟಕ, ಜಾನಪದ ಕಲಾ ಪ್ರದರ್ಶನ ವೀಕ್ಷಿಸಿದ್ದಾರೆ. 4 ಸಾವಿರ ಮಂದಿ ಬಂದು ಹೋಗಿದ್ದಾರೆ. 2800 ಟಿಕೆಟ್ ಮಾರಾಟವಾಗಿದೆ. ರಂಗಾಯಣದಲ್ಲಿ ಆಯೋಜಿಸಿದ್ದ ವಿಚಾರ ಸಂಕಿರಣಕ್ಕೆ ಬಂದವರಿಗೆ ಕರ್ನಾಟಕ ರಾಜ್ಯ ಮುಕ್ತ ವಿವಿ ಹಾಗೂ ಮೈಸೂರು ವಿವಿ ಅತಿಥಿ ಗೃಹದಲ್ಲಿಯೇ ಉಳಿಸಿಕೊಳ್ಳುವ ವ್ಯವಸ್ಥೆ ಮಾಡಲಾಗಿತ್ತು. ಇದರಲ್ಲಿ ಯಾವುದೇ ತಾರತಮ್ಯ ಮಾಡಿಲ್ಲ ಎಂದರು.

ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ನೇತೃತ್ವದ ಪಂಚ ಸಚಿವರ ವಕ್ತಾರರ ತಂಡ

ಬೆಂಗಳೂರು,ಮಾ.13(ಕೆಎಂಶಿ)–ಲೋಕಸಭಾ ಚುನಾವಣಾ ಉದ್ದೇಶದಿಂದ ಮಾಧ್ಯಮಗಳಲ್ಲಿ ಭಾರೀ ಪ್ರಚಾರಕ್ಕೆ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ನೇತೃತ್ವದಲ್ಲಿ ಪಂಚ ಮಂತ್ರಿಗಳ ವಕ್ತಾರರ ತಂಡವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ರಚಿಸಿದ್ದಾರೆ.

ತಂಡದಲ್ಲಿ ಗುಂಡೂರಾವ್ ಅಲ್ಲದೆ, ಸಚಿವರಾದ ಕೃಷ್ಣಭೈರೇಗೌಡ, ಪ್ರಿಯಾಂಕ್ ಖರ್ಗೆ, ಸಂತೋಷ ಲಾಡ್ ಹಾಗೂ ಈಶ್ವರ ಖಂಡ್ರೆ ಇದ್ದಾರೆ. ಲೋಕಸಭಾ ಚುನಾವಣೆಯನ್ನು ಗಮನದಲ್ಲಿಟ್ಟುಕೊಂಡು ಪ್ರತಿನಿತ್ಯ ಜಾಹೀರಾತು ನೀಡುತ್ತಿರುವುದಲ್ಲದೆ, ಸರ್ಕಾರದ ವೆಚ್ಚದಲ್ಲೇ ಪ್ರತಿ ಜಿಲ್ಲಾ ಕೇಂದ್ರದಲ್ಲೂ ಗ್ಯಾರಂಟಿ ಯೋಜನೆಗಳ ಫಲಾನುಭವಿಗಳ ಸಮಾವೇಶ ಮಾಡುತ್ತಿದೆ. ಇದರ ನಡುವೆ ಪ್ರಚಾರಕ್ಕಾಗಿ ಸಚಿವರ ತಂಡ ರಚಿಸಿರುವ ಸಿಎಂ, ಈ ಸಚಿವರಿಗೆ ಬೇಕಾಗುವ ಪೂರಕ ದಾಖಲೆಗಳನ್ನು ಒದಗಿಸುವಂತೆ ಅಧಿಕಾರಿಗಳಿಗೆ ಆದೇಶ ಮಾಡಿದ್ದಾರೆ.

ಮಾ.16, ಖರ್ಗೆ ತವರು ಕಲಬುರಗಿಯಿಂದಲೇ ಲೋಕಸಭಾ ಚುನಾವಣಾ ಪ್ರಚಾರಕ್ಕೆ ಪ್ರಧಾನಿ ಮೋದಿ ಚಾಲನೆ



ಪ್ರಧಾನಿ ಮೋದಿ

ಬೆಂಗಳೂರು, ಮಾ.13– ಪ್ರಧಾನಿ ನರೇಂದ್ರ ಮೋದಿ ಅವರು ಮಾರ್ಚ್ 16 ರಂದು ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರ ತವರು ಕಲಬುರಗಿಯಲ್ಲಿ ಸಾರ್ವಜನಿಕ ಸಭೆಯನ್ನು ಉದ್ದೇಶಿಸಿ ಮಾತನಾಡುವ ಮೂಲಕ ರಾಜ್ಯದಲ್ಲಿ ಬಿಜೆಪಿಯ ಲೋಕಸಭಾ ಚುನಾವಣಾ ಪ್ರಚಾರಕ್ಕೆ ಚಾಲನೆ ನೀಡಲಿದ್ದಾರೆ ಎಂದು ಪಕ್ಷದ ರಾಜ್ಯ ಪ್ರಧಾನ ಕಾರ್ಯದರ್ಶಿ ವಿ ಸುನೀಲ್ ಕುಮಾರ್ ಬುಧವಾರ ತಿಳಿಸಿದ್ದಾರೆ.

ಕಲಬುರಗಿ ಎಐಸಿಸಿ ಅಧ್ಯಕ್ಷ ಎಂ.ಮಲ್ಲಿಕಾರ್ಜುನ ಖರ್ಗೆ ಅವರ ತವರು ಜಿಲ್ಲೆಯಾಗಿದ್ದು, 2009 ಮತ್ತು 2014ರಲ್ಲಿ ಅಲ್ಲಿಂದಲೇ ಲೋಕಸಭೆಗೆ ಆಯ್ಕೆಯಾಗಿದ್ದರು. ಕಳೆದ ಲೋಕಸಭೆ ಚುನಾವಣೆಯಲ್ಲಿ ಬಿಜೆಪಿಯ ಉಮೇಶ್ ಜಾಧವ್ ವಿರುದ್ಧ ಸೋತಿದ್ದರು.

ಕಾಂಗ್ರೆಸ್ ಈ ಬಾರಿ 81 ವರ್ಷದ ಖರ್ಗೆ ಅವರ ಅಳಿಯ ರಾಧಾಕೃಷ್ಣ ದೊಡ್ಡಮನಿ ಅವರನ್ನು ಕಲಬುರಗಿಯಿಂದ ಕಣಕ್ಕಿಳಿಸುವ ಸಾಧ್ಯತೆ ಇದೆ ಎಂದು ಪಕ್ಷದ ಮೂಲಗಳು ತಿಳಿಸಿವೆ. ಪ್ರಧಾನಿ ಮೋದಿ ಅವರು ಮಾರ್ಚ್ 16 ರಂದು ಕಲಬುರಗಿಯಲ್ಲಿ ಮತ್ತು ಮಾರ್ಚ್ 18 ರಂದು ಶಿವಮೊಗ್ಗದಲ್ಲಿ ಸಾರ್ವಜನಿಕ ಸಭೆಯನ್ನು ಉದ್ದೇಶಿಸಿ ಮಾತನಾಡಲಿದ್ದಾರೆ ಎಂದು ಸುನೀಲ್ ಕುಮಾರ್ ಬಿಜೆಪಿ ರಾಜ್ಯ ಕೇಂದ್ರ ಕಚೇರಿಯಲ್ಲಿ ಸುದ್ದಿಗಾರರಿಗೆ ತಿಳಿಸಿದ್ದಾರೆ.

ಮಾರ್ಚ್ 16 ರಂದು ಕಲಬುರಗಿಯ ಎನ್ ವಿ ಆಟದ ಮೈದಾನದಲ್ಲಿ ಸಾರ್ವಜನಿಕ ಸಭೆ ನಡೆಯಲಿದೆ. ಶಿವಮೊಗ್ಗದ ಕಾರ್ಯಕ್ರಮವು ಮಾರ್ಚ್ 18 ರಂದು ಅಲ್ಲಮಪ್ರಭು ಮೈದಾನದಲ್ಲಿ ನಡೆಯಲಿದೆ. ದಕ್ಷಿಣ ಭಾರತದಲ್ಲಿ ಬಿಜೆಪಿಗೆ ಕರ್ನಾಟಕ ಅತ್ಯಂತ ಪ್ರಮುಖ ರಾಜ್ಯವಾಗಿದೆ. ಹಿಂದಿನ ಲೋಕಸಭೆ ಚುನಾವಣೆಯಲ್ಲಿ ಬಿಜೆಪಿ ರಾಜ್ಯದ ಒಟ್ಟು 28 ಸ್ಥಾನಗಳಲ್ಲಿ 25 ಸ್ಥಾನಗಳನ್ನು ಗೆದ್ದುಕೊಂಡಿದೆ. ಅಲ್ಲದೆ ಬಿಜೆಪಿ ಬೆಂಬಲಿತ ಪಕ್ಷೇತರ ಅಭ್ಯರ್ಥಿಯೂ ಗೆಲುವು ಸಾಧಿಸಿದ್ದರು.

ಆಡಳಿತ ಸುಧಾರಣೆಗಾಗಿ ಸಿಎಂಗೆ ಪತ್ರ ಬರೆಯುವ ಸರಳ ವಿಧಾನ ; ಎಂಜಿಪಿ ಮನವಿ

ಮೈಸೂರು, ಮಾ.13(ಪಿಎಂ)– ಆಡಳಿತದಲ್ಲಿ ಅಗತ್ಯ ಸುಧಾರಣೆಗಾಗಿ ಮುಖ್ಯಮಂತ್ರಿಗಳಿಗೆ ಪತ್ರ ಬರೆಯುವ ಸರಳ ಕಾರ್ಯವನ್ನು ಕೈಗೆತ್ತಿಕೊಳ್ಳುವ ಮೂಲಕ ನಾಗರಿಕರು ಈ ಬಾರಿಯ ಗ್ರಾಹಕರ ಹಕ್ಕುಗಳ ದಿನವನ್ನು ಆಚರಿಸಬೇಕೆಂದು ಎಂಜಿಪಿ (ಮೈಸೂರು ಗ್ರಾಹಕರ ಪರಿಷತ್) ಸಂಘಟನೆಯ ಭಾಮಿ ವಿ.ಶೆಣೈ ಮನವಿ ಮಾಡಿದ್ದಾರೆ.

ಜ.20ರಂದು ಎಂಜಿಪಿ ನೇತೃತ್ವದಲ್ಲಿ ಮೈಸೂರು ನಗರ ಪಾಲಿಕೆ ಎದುರು ಪ್ರತಿಭಟನೆ ನಡೆಸಿ ದಾಗ, ಕೇವಲ 80 ಮಂದಿ ಭಾಗವಹಿಸಿದ್ದರು. ಮೈಸೂರಿನ 13 ಲಕ್ಷ ಜನಸಂಖ್ಯೆ ಪೈಕಿ ಕೇವಲ 80 ಮಂದಿ ಮಾತ್ರ ಹೋರಾಟದಲ್ಲಿ ಭಾಗವಹಿಸಲು ಸಮಯ ಮತ್ತು ಆಸಕ್ತಿ ಹೊಂದಿದ್ದರು ಎಂಬುದು ಬೇಸರದ ಸಂಗತಿ. ಪೀಪಲ್ಸ್ ಪಾರ್ಕ್ ಸಂಬಂಧ ಎಂಜಿಪಿ ನಡೆಸಿದ ಹೋರಾಟದಲ್ಲೂ ನಿರೀಕ್ಷಿತ ಸಂಖ್ಯೆಯಲ್ಲಿ ನಾಗರಿಕರು ಭಾಗವಹಿಸಿರಲಿಲ್ಲ.

ಎಂಜಿಪಿ ಈಗ ಪತ್ರ ಚಳುವಳಿ ಮೂಲಕ ಪ್ರತಿಭಟಿಸುವ ಸರಳ ಮಾರ್ಗವನ್ನು ನಾಗರಿಕರಿಗೆ ತಿಳಿಸಬಯಸಿದೆ. ಬರೆಯುವ ಸಾಮರ್ಥ್ಯವಿರುವ ಪ್ರತಿಯೊಬ್ಬ ವ್ಯಕ್ತಿಯು (ವಿದ್ಯಾರ್ಥಿಗಳೂ ಸೇರಿದಂತೆ) ಕರ್ನಾಟಕದ ಮುಖ್ಯಮಂತ್ರಿಗಳಿಗೆ ಪತ್ರ ಬರೆಯಬೇಕೆಂದು ಎಂಜಿಪಿ ಬಯಸುತ್ತದೆ. ನಮ್ಮ ಆಡಳಿತದಲ್ಲಿ ವ್ಯವಸ್ಥಿತ ಬದಲಾವಣೆಗಾಗಿ ಪ್ರತಿಯೊಬ್ಬ ಅಧಿಕಾರಿಯೂ ಅಪಾಯಿಂಟ್‌ಮೆಂಟ್ ನೀಡಿ, ಅದನ್ನು ತಪ್ಪದೇ ಇಟ್ಟುಕೊಳ್ಳಬೇಕೆಂಬ ಭರವಸೆ ನೀಡಲು ಮುಖ್ಯಮಂತ್ರಿಗಳನ್ನು ಒತ್ತಾಯಿಸಬೇಕಿದೆ. ಪತ್ರಗಳನ್ನು ಮುಖ್ಯಮಂತ್ರಿಗಳು, ಕೊಠಡಿ ಸಂಖ್ಯೆ 323ಎ, 3ನೇ ಮಹಡಿ, ವಿಧಾನ ಸೌಧ, ಬೆಂಗಳೂರು–01 ಅಥವಾ ಇ ಮೇಲ್ (cm.kar@nic.in) ಮೂಲಕ ಕಳುಹಿಸುವಂತೆ ಅವರು ಪ್ರಕಟಣೆಯಲ್ಲಿ ಕೋರಿದ್ದಾರೆ.



ಮೈಸೂರಿನ ಕಾಂಗ್ರೆಸ್ ಕಚೇರಿಯಲ್ಲಿ ನಡೆದ ಸಮಾರಂಭದಲ್ಲಿ ಮುಡಾ ಅಧ್ಯಕ್ಷ ಕೆ.ಮರಿಗೌಡ ಅವರನ್ನು ಜಿಲ್ಲಾ ಕಾಂಗ್ರೆಸ್ ಮಹಿಳಾ ಘಟಕದ ಅಧ್ಯಕ್ಷೆ ಲತಾ ಸಿದ್ದಶೆಟ್ಟಿ, ನಗರ ಕಾಂಗ್ರೆಸ್ ಅಧ್ಯಕ್ಷೆ ಪುಷ್ಪಲತಾ ಚಿಕ್ಕಣ್ಣ ಅಭಿನಂದಿಸಿದರು. ಚಿತ್ರದಲ್ಲಿ ಮಾಜಿ ಮೇಯರ್ ಮೋದಾಮಣಿ, ಲೇಖಾ ವೆಂಕಟೇಶ್, ನಾಗರತ್ನ ಮತ್ತಿರರರು ಇದ್ದಾರೆ.

ರಸ್ತೆ ಸುರಕ್ಷತೆ, ಭದ್ರತೆ ಹಿನ್ನೆಲೆ ಮೈಸೂರಲ್ಲಿ 350 ಹೆಚ್ಚುವರಿ ಸಿಸಿ ಕ್ಯಾಮರಾ ಅಳವಡಿಕೆ





ಮೈಸೂರು,ಮಾ.13(ಆರ್‌ಕೆ)–ಮೈಸೂರು ನಗರ ಬೆಳೆದಂತೆ ಜನ ಸಂಖ್ಯೆಗನುಗುಣವಾಗಿ ವಾಹನಗಳ ಸಂಖ್ಯೆ, ಸಂಚಾರ ದಟ್ಟಣೆಯೂ ಹೆಚ್ಚಾಗುತ್ತಿರುವುದರಿಂದ ಅಪರಾಧ ಮತ್ತು ಅಪಘಾತಗಳನ್ನು ತಡೆಗಟ್ಟುವ ಉದ್ದೇಶದಿಂದ ನಗರ ಪೊಲೀಸ್ ಘಟಕವು ಹೆಚ್ಚುವರಿ ಸಿಸಿ ಟಿವಿ ಕ್ಯಾಮರಾಗಳನ್ನು ಅಳವಡಿಸಲು ಮುಂದಾಗಿದೆ.

ಮೈಸೂರು ನಗರದ ಕೆ.ಆರ್.ಸರ್ಕಲ್, ಅರಮನೆ ಸುತ್ತಲಿನ ಪ್ರದೇಶ, ರಾಜಮಾರ್ಗ, ಬನ್ನಿಮಂಟಪದ ಪಂಜಿನ ಕವಾಯಿತು ಮೈದಾನ, ಹೊರಭಾಗ, ಹುಣಸೂರು ರಸ್ತೆ, ರಿಂಗ್ ರಸ್ತೆ ಸೇರಿದಂತೆ ಪ್ರಸ್ತುತ 52 ಆಟೋಮ್ಯಾಟಿಕ್ ಸಂಚಾರ ನಿಯಮ ಉಲ್ಲಂಘನೆ ಮಾಡಿದ ವಾಹನಗಳ ನಂಬರ್ ಕ್ಲಿಕ್ ಮಾಡುವ ಕ್ಯಾಮರಾಗಳು, 82 ಸಾಧಾರಣ ಕ್ಯಾಮರಾಗಳು ಕಾರ್ಯನಿರ್ವಹಿಸುತ್ತಿವೆ ಎಂದು ಮೈಸೂರು ನಗರ ಪೊಲೀಸ್ ಆಯುಕ್ತ ಬಿ.ರಮೇಶ್ ತಿಳಿಸಿದ್ದಾರೆ.

ಅವುಗಳ ಜೊತೆಗೆ ಪ್ರಮುಖ ರಸ್ತೆ, ಜಂಕ್ಷನ್, ಸರ್ಕಲ್‌ಗಳಲ್ಲಿ ಹೆಚ್ಚುವರಿಯಾಗಿ 250 ಸಿಸಿ ಕ್ಯಾಮರಾ ಅಳವಡಿಸಲು ಸರ್ಕಾರದಿಂದ ಟೆಂಡರ್ ಪ್ರಕ್ರಿಯೆ ಪೂರ್ಣಗೊಂಡಿದ್ದು, ಈಗಾಗಲೇ ಸ್ಥಳ ಗುರುತಿಸಲಾಗಿದೆ. ಇದೀಗ ಕಳಸ್ತವಾಡಿ ಬಳಿ 6 ಮತ್ತು ಕೆಂಪೇಗೌಡ ಸರ್ಕಲ್‌ನಲ್ಲಿ 6 ಸೇರಿದಂತೆ ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ವೇ ಹಾಗೂ ರಿಂಗ್ ರಸ್ತೆಯಲ್ಲಿ 100 ಕ್ಯಾಮರಾಗಳನ್ನು ಅಳವಡಿಸಿ, ಕಟ್ಟೆಚ್ಚರ ವಹಿಸಲು ಕ್ರಮ ಕೈಗೊಳ್ಳಲಾಗಿದೆ ಎಂದು ಆಯುಕ್ತರು ತಿಳಿಸಿದರು.

45 ಕೋಟಿ ರೂ. ವೆಚ್ಚದಲ್ಲಿ ಹೈಟೆಕ್ ಸಿಸಿ ಕ್ಯಾಮರಾ ಅಳವಡಿಸಿ ನಿರ್ವಹಣೆ ಮಾಡಲು ಬೆಂಗಳೂರಿನ ರಾಜ್ಯ ಪೊಲೀಸ್ ಮಹಾನಿರ್ದೇಶಕರ ಕಚೇರಿಯಲ್ಲಿ ಟೆಂಡರ್ ಪ್ರಕ್ರಿಯೆ ಆರಂಭಿಸಲಾಗಿದೆ. ಕಾಮಗಾರಿ ಮುಗಿದರೆ, ಮೈಸೂರಲ್ಲಿ ಒಟ್ಟು 484 ಸಿಸಿ ಟಿವಿ ಕ್ಯಾಮರಾಗಳು ಕಾರ್ಯನಿರ್ವಹಿಸಿದಂತಾಗುತ್ತದೆ. ಇದರಿಂದ ಮೈಸೂರು ನಗರದ ಹೃದಯ ಭಾಗ, ರೈಲು ನಿಲ್ದಾಣ, ಬಸ್ ನಿಲ್ದಾಣ, ವಾಣಿಜ್ಯ ಕೇಂದ್ರ, ಹೆದ್ದಾರಿ, ರಿಂಗ್ ರಸ್ತೆ, ಪ್ರವಾಸಿ ತಾಣಗಳು ಸೇರಿದಂತೆ ಸಾರ್ವಜನಿಕರ ಸ್ಥಳಗಳಲ್ಲಿನ ಚಲನವಲನಗಳನ್ನು ಸೆರೆ ಹಿಡಿದು ನಜರ್‌ಬಾದಿನಲ್ಲಿರುವ ನಗರ ಪೊಲೀಸ್ ಆಯುಕ್ತರ ಕಚೇರಿ ಕಂಟ್ರೋಲ್ ರೂಂನಿಂದ ಅಗತ್ಯ ಮುಂಜಾಗ್ರತಾ ಕ್ರಮ ಕೈಗೊಳ್ಳಲು ಅನುಕೂಲವಾಗಲಿದೆ ಎಂದು ಬಿ.ರಮೇಶ್ ತಿಳಿಸಿದರು.

ಅದರೊಟ್ಟಿಗೆ ಮೈಸೂರಲ್ಲಿ ಒಟ್ಟು 484 ಸಿಸಿಟಿವಿ ಕ್ಯಾಮರಾಗಳು ಕಾರ್ಯನಿರ್ವಹಿಸಿದಂತಾಗಲಿದ್ದು, ದುಷ್ಕರ್ಮಿಗಳ ಅಪರಾಧ ಮತ್ತು ಸಮಾಜಘಾತುಕ ಕೃತ್ಯಕ್ಕೆ ಕಡಿವಾಣ ಹಾಕುವ ಜೊತೆಗೆ ಅಪರಾಧ ಪ್ರಕರಣಗಳಿಗೆ ಲೈವ್ ಸಾಕ್ಷ್ಯ ದೊರೆಯುವಂತಾಗುತ್ತದೆ ಎಂದು ತಿಳಿಸಿದರು.

ಮೈಸೂರು ನಗರ ವ್ಯಾಪ್ತಿಗೆ ಬರುವ ರಿಂಗ್ ರೋಡ್ ಹೊರ ಭಾಗ ಪ್ರದೇಶಗಳಲ್ಲಿ ನಡೆಯುವ ಅಪರಾಧ ಪ್ರಕರಣಗಳಿಗೂ ಕಡಿವಾಣ ಹಾಕುವುದು ಸಿಸಿ ಕ್ಯಾಮರಾ ಅಳವಡಿಸುವ ಪ್ರಮುಖ ಉದ್ದೇಶವಾಗಿದೆ. ಯಾರು ಎಲ್ಲಿ ಅಪರಾಧ ಕೃತ್ಯವೆಸಗಿದರೂ ಆರೋಪಿಗಳು ತಪ್ಪಿಸಿಕೊಳ್ಳಲಾಗದು ಎಂದು ಎಚ್ಚರಿಕೆ ನೀಡಿದ್ದಾರೆ.

ಮಂಡ್ಯ ಲೋಕಸಭಾ ಅಖಾಡಕ್ಕೆ ಜೆಡಿಎಸ್ ರಂಗಪ್ರವೇಶ

ಶುಕ್ರವಾರ ಕರೆದಿರುವ ಪೂರ್ವಭಾವಿ ಸಭೆಯಲ್ಲಿ ಅಭ್ಯರ್ಥಿ ಘೋಷಣೆ ಸಾಧ್ಯತೆ

- ಮಾಜಿ ಸಿಎಂ ಹೆಚ್ಡಿಕೆ ಅಧ್ಯಕ್ಷತೆಯಲ್ಲಿ ಮಂಡ್ಯದಲ್ಲಿ ನಡೆಯಲಿರುವ ಸಭೆ
- ಮಾಜಿ ಸಂಸದ ಪುಟ್ಟರಾಜು ಹೆಸರು ಅಂತಿಮ, ಅಧಿಕೃತ ಘೋಷಣೆ ಬಾಕಿ

ಮಂಡ್ಯ,ಮಾ.13– ಸಾರ್ವತ್ರಿಕ ಲೋಕಸಭಾ ಚುನಾವಣೆಗೆ ಸಂಬಂಧಿಸಿದಂತೆ ಪ್ರಾರಿಯಾ ಕಡೆಗಳಿಗೂ ಅಭ್ಯರ್ಥಿ ಹೆಸರು ಘೋಷಣೆ ಮಾಡುತ್ತಿದ್ದ ಕಾಂಗ್ರೆಸ್ ಈ ಬಾರಿ ಅಭ್ಯರ್ಥಿ ಎಲ್ಲರಂತೆ ಚುನಾವಣೆಗೆ ಮೊದಲೇ ಅಭ್ಯರ್ಥಿಯನ್ನು ಘೋಷಣೆ ಮಾಡಿ ರಂಗ ತಾಲೀಮು ನಡೆಸುತ್ತಿದ್ದರೆ, ಇತ್ತ ಸೈಲೆಂಟಾಗಿದ್ದ ಜೆಡಿಎಸ್ ಇದೀಗ ಮೈಕೊಡವಿ ನಿಂತಿದೆ.

ಈ ಸಂಬಂಧ ಮಾ.15ರ ಶುಕ್ರವಾರ ಮಂಡ್ಯ ನಗರದ ಡಾ.ಬಿ.ಆರ್.ಅಂಬೇಡ್ಕರ್ ಭವನದಲ್ಲಿ ಮಾಜಿ ಮುಖ್ಯಮಂತ್ರಿ ಹೆಚ್.ಡಿ. ಕುಮಾರಸ್ವಾಮಿ ಅಧ್ಯಕ್ಷತೆಯಲ್ಲಿ ಮಂಡ್ಯ ಲೋಕಸಭಾ ಚುನಾವಣೆಯ ಅಭ್ಯರ್ಥಿಯ ಆಯ್ಕೆ ಸಂಬಂಧ ಪೂರ್ವಭಾವಿ ಸಭೆ ಕರೆದಿದ್ದು ಆ ಸಭೆಯಲ್ಲಿ ಅಭ್ಯರ್ಥಿಯ ಅಧಿಕೃತ ಘೋಷಣೆಯಾಗುವ ಸಾಧ್ಯತೆ ಇದೆ.

ಪ್ರತಿ ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್‌ಗಿಂತ ಮುಂದಿರುತ್ತಿದ್ದ ಜೆಡಿಎಸ್ ಈ ಬಾರಿ ಹಾಲಿ ಸಂಸದೆ ಸುಮಲತಾ ಅಂಬರೀಶ್ ನಡೆಯಿಂದ ಕಾದು ನೋಡುವ ತಂತ್ರಕ್ಕೆ ಶರಣಾಗಿತ್ತು. ಆದರೆ ಮೊನ್ನೆ ತಮ್ಮ ನಿವಾಸದಲ್ಲಿ ಮಹತ್ವದ ಸುದ್ದಿಗೋಷ್ಠಿ ನಡೆಸಿದ್ದ ಸುಮಲತಾ ಅಂಬರೀಶ್ ಬಿಜೆಪಿ ಹೈಕಮಾಂಡ್ ನಿರ್ಧಾರಕ್ಕೆ ತಾನು ಬದ್ಧ ಎಂದಿದ್ದರು. ಜೊತೆಗೆ ತಮ್ಮ ವಿರಾಮದ ಮಾತುಗಳನ್ನಾಡಿದ್ದರು. ಸಂಸದರ ಮಹತ್ವದ ಹೇಳಿಕೆ ಬಳಿಕ ಜೆಡಿಎಸ್ ಆಕ್ಟಿವ್ ಆಗಿದೆ.

ಒಂದು ತಿಂಗಳ ಹಿಂದೆಯೇ ಮಂಡ್ಯ ಕ್ಷೇತ್ರ ಜೆಡಿಎಸ್ ಪಾಲಾಗಿದೆ ಎಂಬ ಮಾಹಿತಿ ಜಿಲ್ಲಾ ಮುಖಂಡರಿಗೆ ಮಾಜಿ ಸಿಎಂ ಹೆಚ್ಡಿಕೆ ಮೌಖಿಕವಾಗಿ ಹೇಳಿ ಚುನಾವಣೆಗೆ ತಯಾರಿ ನಡೆಸುವಂತೆ ಸೂಚನೆ ಕೊಟ್ಟು ಕಳುಹಿಸಿದ್ದರು. ಬಿಡದಿಯ ಕೇತಗಾನಹಳ್ಳಿಯ ಹೆಚ್ಡಿಕೆ ನಿವಾಸದಲ್ಲಿ ತಿಂಗಳ ಹಿಂದೆ ನಡೆದಿದ್ದ ಸಭೆಯಲ್ಲಿ ಜಿಲ್ಲೆಯ ಎಲ್ಲಾ ಮುಖಂಡರು ಭಾಗಿಯಾಗಿದ್ದರು. ಅದರಂತೆ ಟಿಕೆಟ್ ಆಕಾಂಕ್ಷಿತರಾಗಿದ್ದ ಮಾಜಿ ಸಂಸದ ಸಿ.ಎಸ್.ಪುಟ್ಟರಾಜು, ಮಾಜಿ ಶಾಸಕರಾದ ಡಿ.ಸಿ.ತಮ್ಮಣ್ಣ ಹಾಗೂ ಕೆ.ಸುರೇಶ್‌ಗೌಡ ನಡುವೆ ಒಮ್ಮತ ಮೂಡಿಸಿ ಮಾಜಿ ಸಿಎಂ ಕುಮಾರಸ್ವಾಮಿ ಸಿ.ಎಸ್. ಪುಟ್ಟರಾಜುಗೆ ಚುನಾವಣೆಗೆ ಸಿದ್ಧತೆ ನಡೆಸಿಕೊಳ್ಳುವಂತೆ ಸಲಹೆ ನೀಡಿದ್ದರು.

ಆರಂಭದಲ್ಲಿ ದೇವೇಗೌಡರು, ಕುಮಾರಸ್ವಾಮಿ ಹಾಗೂ ನಿಖಿಲ್ ಬರಬೇಕೆಂದು ಜಿಲ್ಲಾ ದಳಪತಿಗಳು ಪಟ್ಟು ಹಿಡಿದಿದ್ದರಾದರೂ ಅಂತಿಮವಾಗಿ ಕುಮಾರಸ್ವಾಮಿ ಮಾಜಿ ಸಂಸದ ಪುಟ್ಟರಾಜು ಸ್ಪರ್ಧೆಗೆ ಹಸಿರು ನಿಶಾನೆ ತೋರಿಸಿದರು. ಬಳಿಕ ಎಲ್ಲಾ ಮುಖಂಡರು ಹೆಚ್ಡಿಕೆ ಮಾತಿಗೆ ಸಮ್ಮತಿ ಸೂಚಿಸಿ ಪುಟ್ಟರಾಜು ಸ್ಪರ್ಧೆಗೆ ಒಪ್ಪಿಗೆ ಸೂಚಿಸಿದ್ದಾರೆ.

ಕುಮಾರಸ್ವಾಮಿ ಮಂಗಳವಾರ ಘೋಷಣೆ ಮಾಡಿರುವಂತೆ ಜೆಡಿಎಸ್‌ಗೆ ತ್ರಿ ಫ್ರಾಗ್ ಎನ್ ಅಂದರೆ ಮೂರು ಕ್ಷೇತ್ರದಲ್ಲಿ ಜೆಡಿಎಸ್ ಸ್ಪರ್ಧಿಸಲಿದ್ದು, ಒಂದು ಕ್ಷೇತ್ರದಲ್ಲಿ ಬಿಜೆಪಿ ಚಿಹ್ನೆಯಡಿ ಜೆಡಿಎಸ್ ಪಕ್ಷದ ಒಬ್ಬರು ಸ್ಪರ್ಧಿಸಲಿದ್ದಾರೆ. ಮಂಡ್ಯ, ಹಾಸನ, ಕೋಲಾರ ಕ್ಷೇತ್ರಗಳು ಜೆಡಿಎಸ್ ಪಾಲಾಗಿದ್ದು, ಬೆಂಗಳೂರು ಗ್ರಾಮಾಂತರದಲ್ಲಿ ದೇವೇಗೌಡರ ಅಳಿಯ ಡಾ.ಸಿ.ಎನ್.ಮಂಜುನಾಥ್ ಬಿಜೆಪಿ ಚಿಹ್ನೆಯಡಿ ಕಣಕ್ಕಿಳಿಯಲಿದ್ದಾರೆ.

ಸದ್ಯ ಮಂಡ್ಯದಲ್ಲಿ ಕಾಂಗ್ರೆಸ್ ಅಭ್ಯರ್ಥಿಯಾಗಿ ಉದ್ಯಮಿ, ನಾಗಮಂಗಲ ಮೂಲದ ವೆಂಕಟರಮಣೇಗೌಡ (ಸ್ಟಾರ್ ಚಂದ್ರು) ಅವರು ಕಣಕ್ಕಿಳಿಯುತ್ತಿದ್ದಾರೆ. ಜೆಡಿಎಸ್-ಬಿಜೆಪಿಯ ಮೈತ್ರಿ ಅಭ್ಯರ್ಥಿ ಯಾರೆಂಬುದು ಕುತೂಹಲ ಮೂಡಿಸಿತ್ತು. ಇದೀಗ ಭಾಗಶಃ ಪುಟ್ಟರಾಜು ಹೆಸರು ಅಂತಿಮವಾಗಿದೆ.

ಮಂಡ್ಯ ಜಿಲ್ಲೆಯ ಪಾಂಡವಪುರ ತಾಲೂಕಿನ ಚಿನಕುರಳಿ ಗ್ರಾಮದ ಸಿ.ಎಸ್.ಪುಟ್ಟರಾಜು ಜನತಾದಳದಿಂದ ರಾಜಕೀಯ ಆರಂಭಿಸಿ, ದೇವೇಗೌಡರ ಮಾನಸ ಪುತ್ರ ಎಂದೇ ಖ್ಯಾತಿಗಳಿಸಿದವರು. ಅವಿಭಜಿತ ಪಾಂಡವಪುರ ಹಾಗೂ ಮೇಲುಕೋಟೆ ಕ್ಷೇತ್ರದಿಂದ ಮೂರು ಬಾರಿ ಶಾಸಕರಾಗಿ, ಮಂಡ್ಯ ಲೋಕಸಭಾ ಕ್ಷೇತ್ರದಿಂದ ಒಂದು ಬಾರಿ ಸಂಸದರಾಗಿ, ಒಮ್ಮೆ ಸಚಿವರಾಗಿಯೂ ಕಾರ್ಯನಿರ್ವಹಿಸಿರುವ ಹೆಗ್ಗಳಿಕೆ ಇವರದಿದೆ.



ಎಸ್.ಎಂ.ಕೃಷ್ಣ ಭೇಟಿ ಮಾಡಿದ ಪುಟ್ಟರಾಜು

ಮೈತ್ರಿ ಪಕ್ಷದ ಸಂಭಾವ್ಯ ಅಭ್ಯರ್ಥಿಯಾಗಿರುವ ಸಿ.ಎಸ್.ಪುಟ್ಟರಾಜು ಇತ್ತೀಚೆಗೆ ಜಿಲ್ಲೆಯ ಹಿರಿಯ ಮುತ್ಸದ್ದಿ ರಾಜಕಾರಣಿ, ಮಾಜಿ ಮುಖ್ಯಮಂತ್ರಿ ಎಸ್.ಎಂ.ಕೃಷ್ಣ ಅವರನ್ನು ಬೆಂಗಳೂರಿನಲ್ಲಿ ಭೇಟಿಯಾಗಿ ಆಶೀರ್ವಾದ ಪಡೆದಿದ್ದು, ಜಿಲ್ಲೆಯ ಹಿರಿಯ ಮುಖಂಡರನ್ನು ಭೇಟಿಯಾಗುತ್ತಾ ಚುನಾವಣೆಗೆ ತೆರೆಮರೆಯ ಸಿದ್ಧತೆ ನಡೆಸುತ್ತಿದ್ದಾರೆ.


ಕೆ.ಎಸ್.ವಿಜಯಾನಂದ ಗರ್‌ವಾಪ್ಸಿ..?

ಮಂಡ್ಯ: ಕಳೆದ ವಿಧಾನಸಭಾ ಚುನಾವಣೆ ಸಮಯದಲ್ಲಿ ಮಂಡ್ಯ ಕ್ಷೇತ್ರದ ಜೆಡಿಎಸ್‌ನ ಅಧಿಕೃತ ಅಭ್ಯರ್ಥಿ ಬಿ.ಆರ್.ರಾಮಚಂದ್ರ ವಿರುದ್ಧ ಬಂಡೆದ್ದು ಟಿಕೆಟ್ ಸಿಗದ ಕಾರಣ ಬಂಡಾಯ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದ ಪಿಇಟಿ ಅಧ್ಯಕ್ಷ ಕೆ.ಎಸ್.ವಿಜಯಾನಂದ ಮತ್ತೆ ಜೆಡಿಎಸ್‌ಗೆ ಮರಳುವ ಸಾಧ್ಯತೆ ಇದೆ.

ಇತ್ತೀಚೆಗೆ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಹಾಗೂ ಜೆಡಿಎಸ್ ಯುವ ಘಟಕದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಅವರನ್ನು ಜಿಲ್ಲಾ ಜೆಡಿಎಸ್ ಅಧ್ಯಕ್ಷ ಡಿ.ರಮೇಶ್ ಸಮ್ಮುಖದಲ್ಲಿ ಭೇಟಿಯಾಗಿ ಮಾತುಕತೆ ನಡೆಸಿರುವ ವಿಜಯಾನಂದ ಪಕ್ಷಕ್ಕೆ ವಾಪಸ್ಸಾಗುವ ಸಾಧ್ಯತೆ ಇದೆ.

ಈ ಬಗ್ಗೆ ಮೈಸೂರು ಮಿತ್ರನೊಂದಿಗೆ ಮಾತನಾಡಿದ ವಿಜಯಾನಂದ ಪಕ್ಷಕ್ಕೆ ವಾಪಸ್ಸಾಗುವಂತೆ ಒತ್ತಡ ಹೆಚ್ಚಿತ್ತು. ಈ ನಿಟ್ಟಿನಲ್ಲಿ ಹಿರಿಯರಿಗೆ ಗೌರವ ಕೊಡುವ ನಿಟ್ಟಿನಲ್ಲಿ ಮಾಜಿ ಸಿಎಂ ಕುಮಾರಸ್ವಾಮಿ ಅವರನ್ನು ಭೇಟಿಯಾಗಿ ಬಂದಿದ್ದೇನೆ. ಭೇಟಿ ವೇಳೆ ನಾನ್ಯಾಕೆ ಬಂಡಾಯ ಅಭ್ಯರ್ಥಿಯಾಗಿ ಸ್ಪರ್ಧಿಸಿದೆ ಎಂಬ ಬಗ್ಗೆ ಕುಮಾರಸ್ವಾಮಿ ಅವರಿಗೆ ವಿವರಣೆ ಕೊಟ್ಟಿದ್ದು, ನನ್ನ ಮಾತಿಗೆ ಮನ್ನಣೆಕೊಟ್ಟು ಕೇಳಿದ್ದಾರೆ. ನನ್ನ ಬೆಂಬಲಿಗರ ಸಭೆ ಕರೆದು ಮಾತುಕತೆ ನಡೆಸಿ, ಪಕ್ಷಕ್ಕೆ ವಾಪಸ್ಸಾಗುವ ಬಗ್ಗೆ ನಿರ್ಧಾರ ಕೈಗೊಳ್ಳುವೆ ಎಂದು ಸ್ಪಷ್ಟಪಡಿಸಿದ್ದಾರೆ. ವಿಜಯಾನಂದ ಪಕ್ಷಕ್ಕೆ ವಾಪಸ್ಸಾದರೆ, ಅವರ ಜೊತೆಗೆ ಗುರುತಿಸಿಕೊಂಡಿದ್ದ ಮಾಜಿ ಶಾಸಕ ಎಂ.ಶ್ರೀನಿವಾಸ್, ಜಿ.ಪಂ. ಮಾಜಿ ಸದಸ್ಯ ಎಚ್.ಎನ್.ಯೋಗೇಶ್, ಜೆಡಿಎಸ್‌ನ ಮಾಜಿ ವಕ್ತಾರ ಮುದ್ದನಘಟ್ಟ ಮಹಾಲಿಂಗೇಗೌಡ ಸಹ ಪಕ್ಷಕ್ಕೆ ವಾಪಸ್ಸಾಗುವ ಸಾಧ್ಯತೆ ಇದೆ.

ರಸ್ತೆ ಅಭಿವೃದ್ಧಿ ಕಾಮಗಾರಿಗೆ ಸಚಿವ ಚೆಲುವರಾಯಸ್ವಾಮಿ ಚಾಲನೆ



ರಸ್ತೆ ಅಭಿವೃದ್ಧಿ ಕಾಮಗಾರಿಗೆ ಚೆಲುವರಾಯಸ್ವಾಮಿ ಚಾಲನೆ ನೀಡಿದರು.

ನಾಗಮಂಗಲ, ಮಾ.13– ತಾಲೂಕಿನ ದೇವಲಾಪುರ ಹೋಬಳಿ ಬಿಂಡೇನಹಳ್ಳಿ ಗ್ರಾಮದಿಂದ ಮಾಟನ ಕೊಪ್ಪಲು ಗ್ರಾಮದವರೆಗೆ ಒಂದು ಕೋಟಿ ರೂ. ವೆಚ್ಚದಲ್ಲಿ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಕೃಷಿ ಸಚಿವ ಹಾಗೂ ಮಂಡ್ಯ ಜಿಲ್ಲಾ ಉಸ್ತುವಾರಿ ಸಚಿವ ಎನ್. ಚೆಲುವರಾಯಸ್ವಾಮಿ ಚಾಲನೆ ನೀಡಿದರು.

ನಂತರ ಮಾತನಾಡಿದ ಅವರು, ಬಿಂಡೇನಹಳ್ಳಿ ಗ್ರಾಮದಿಂದ ಮಾಟನ ಕೊಪ್ಪಲು ರಸ್ತೆ ಕಿರಿದಾಗಿದ್ದು, ವಾಹನ ಸಂಚಾರಕ್ಕೆ ತೊಂದರೆ ಇದ್ದು ಅದಕ್ಕಾಗಿ ರಸ್ತೆ ಅಭಿವೃದ್ಧಿ ಅಗತ್ಯವಾಗಿದೆ ಎಂದರು. ರಸ್ತೆ ಕಾಮಗಾರಿ ಉತ್ತಮ ಗುಣಮಟ್ಟದಿಂದ ಕೂಡಿರಬೇಕೆಂದು ಎಂದು ಕಾಂಟ್ರಾಕ್ಟರ್ ಬಾನಗೆರೆ ಸುರೇಶ್ ಅವರಿಗೆ ತಿಳಿಸಿದರು. ಗ್ರಾಮಸ್ಥರು ಒಟ್ಟುಗೂಡಿ ಒಮ್ಮತದಿಂದ ಉತ್ತಮವಾದ ಹಾಗೂ ಶಾಶ್ವತವಾದ ಕೆಲಸ ವಾಗುವಂತೆ ನೋಡಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಮುಂದಿನ ದಿನಗಳಲ್ಲಿ ಗ್ರಾಮದ ಸಮಗ್ರ ಅಭಿವೃದ್ಧಿಯನ್ನು ಹಂತ-ಹಂತವಾಗಿ ಮಾಡಲಾಗುವುದು. ಕಳೆದ ವಿಧಾನಸಭಾ ಚುನಾವಣೆಯಲ್ಲಿ ನಮಗೆ ಸಂಪೂರ್ಣ ಸಹಕಾರ ನೀಡಿದ ಗ್ರಾಮದ ಜನತೆಗೆ ಕೃತಜ್ಞತೆ ಸಲ್ಲಿಸುತ್ತೇನೆ ಎಂದರು. ಈ ಸಂದರ್ಭದಲ್ಲಿ ಲೋಕಸಭಾ ಅಭ್ಯರ್ಥಿ ವೆಂಕಟರಮಣೆಗೌಡ (ಸ್ಟಾರ್ ಚಂದ್ರು) ಪಿಡಬ್ಲ್ಯೂಡಿ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ನಂದಕುಮಾರ್, ಇಂಜಿನಿಯರ್ ಇಮ್ರಾನ್ ಖಾನ್, ಭೀಮನಹಳ್ಳಿ ಮರಿಸ್ವಾಮಿ ತಾಲೂಕ್ ಕಾಂಗ್ರೆಸ್ ಅಧ್ಯಕ್ಷ ಎನ್.ಜೆ. ರಾಜೇಶ್, ಮುಖಂಡರು ಉಪಸ್ಥಿತರಿದ್ದರು.

2.25 ಕೋಟಿ ರೂ. ಅಭಿವೃದ್ಧಿ ಕಾಮಗಾರಿಗೆ ಚಾಲನೆ



ಕೊಠಡಿಗಳ ಕಾಮಗಾರಿಗೆ ಶಾಸಕ ನರೇಂದ್ರ ಸ್ವಾಮಿ ಗುದ್ದಲಿ ಪೂಜೆ ನೆರವೇರಿಸಿದರು.

ಹಲಗೂರು, ಮಾ.13– ಇಲ್ಲಿನ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಆವರಣದಲ್ಲಿ 2.25 ಕೋಟಿ ರೂ. ವೆಚ್ಚದಲ್ಲಿ ಕರ್ನಾಟಕ ಗೃಹ ಮಂಡಳಿಯ ನೂತನ ಕೊಠಡಿಗಳ ಕಾಮಗಾರಿಗೆ ಶಾಸಕ ಪಿ.ಎಂ.ನರೇಂದ್ರ ಸ್ವಾಮಿ ಗುದ್ದಲಿ ಪೂಜೆ ನೆರವೇರಿಸಿದರು.

ಬಳಿಕ ಮಾತನಾಡಿದ ಅವರು ಕರ್ನಾಟಕ ಗೃಹ ಮಂಡಳಿ ವತಿಯಿಂದ ಹೆಚ್ಚುವರಿ 8 ಕೊಠಡಿಗಳ ಕಟ್ಟಡ ನಿರ್ಮಾಣದ ಜೊತೆಗೆ ಮುಂದಿನ ದಿನಗಳಲ್ಲಿ ಇನ್ನೂ ಹೆಚ್ಚುವರಿ ಕೊಠಡಿಗಳನ್ನು ನೀಡುವ ಮೂಲಕ ಹಲಗೂರಿನ ಪ್ರಥಮ ದರ್ಜೆ ಕಾಲೇಜನ್ನು ಅಭಿವೃದ್ಧಿ ಪಡಿಸಲಾಗುವುದು ಇದಲ್ಲದೆ ಹಲಗೂರು ಸರ್ಕಾರಿ ಜೂನಿಯರ್ ಕಾಲೇಜ್‌ಗೂ ಕೂಡಾ 1.25 ಕೋಟಿ ರೂ. ಅನುದಾನ ಬಿಡುಗಡೆಯಾಗಿದ್ದು, ಹೆಚ್ಚುವರಿ ಕೊಠಡಿಗಳನ್ನು ನಿರ್ಮಾಣ ಮಾಡಲಾಗುವುದು ಎಂದರು.

ಇದೇ ವೇಳೆ ದಲಿತ ಮುಖಂಡರ ಮನವಿಗೆ ಸ್ಪಂದಿಸಿದ ಶಾಸಕ ನರೇಂದ್ರ ಸ್ವಾಮಿಯವರು ಅಪೂರ್ಣಗೊಂಡಿರುವ ಸಮುದಾಯ ಭವನದ ಕಾಮಗಾರಿಯನ್ನು ವಿಶೇಷ ಅನುದಾನ ತಂದು ಪೂರ್ಣ ಮಾಡಲಾಗುವುದು ಎಂದು ಭರವಸೆ ನೀಡಿದರು.

ಗ್ರಾಪಂ ಅಧ್ಯಕ್ಷೆ ಟಿ.ರಕ್ಷಿತ ಜೀವನ ಕುಮಾರ್, ಉಪಾಧ್ಯಕ್ಷೆ ಲತಾ ಮಹಾದೇವ್, ಪಿಡಿಓ ರುದ್ರಯ್ಯ, ಹೌಸಿಂಗ್ ಬೋರ್ಡ್ ಎಇಇ ಲಾರೆನ್ಸ್, ರಕ್ಷಾ ವೆಂಚರ್ ತೇಜಸ್, ಗ್ರಾಪಂ ಸದಸ್ಯರಾದ ಶಶಿಕಲಾ, ಜಮೀಲ್, ಲಿಯಾಕತ್ ಅಲಿ ಹಾಗೂ ಕಾಂಗ್ರೆಸ್ ಮುಖಂಡರಾದ ಸಾಗ್ಯ ಕೆಂಪಯ್ಯ, ಮರಿಸ್ವಾಮಿ ಇತರರಿದ್ದರು.

ಜಿಲ್ಲಾ ಕಾಂಗ್ರೆಸ್‌ಗೆ ಎಂ.ಎಸ್.ಚಿದಂಬರ್ ನೂತನ ಅಧ್ಯಕ್ಷರಾಗಿ ನೇಮಕ ಸಾಧ್ಯತೆ



ಮಂಡ್ಯ,ಮಾ.13– ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷರಾಗಿದ್ದ ಸಿ.ಡಿ. ಗಂಗಾಧರ್, ಮೈಷುಗರ್ ಅಧ್ಯಕ್ಷರಾಗಿ ನೇಮಕವಾಗಿರುವುದರಿಂದ ಅವರಿಂದ ತೆರವಾಗುವ ಸ್ಥಾನಕ್ಕೆ ಜಿಲ್ಲಾ ಕಾರ್ಯಾಧ್ಯಕ್ಷ ಎಂ.ಎಸ್.ಚಿದಂಬರ್ ನೇಮಕವಾಗುವ ಸಾಧ್ಯತೆ ಇದೆ.

ಈ ಬಗ್ಗೆ ಭಾನುವಾರ ಮಂಡ್ಯದಲ್ಲಿ ನಡೆದ ಗ್ಯಾರಂಟಿ ಸಮಾವೇಶದಲ್ಲಿ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಮಾಹಿತಿ ನೀಡಿದ್ದು, ಮುಂದಿನ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಚಿದಂಬರ್ ಎಂದು ಸಂಭೋದಿಸುವ ಮೂಲಕ ಚಿದಂಬರ್ ಅಧ್ಯಕ್ಷರಾಗುವುದು ಬಹುತೇಕ ನಿಚ್ಚಳವಾಗಿದೆ. ಕಳೆದ ಎಂಟು ವರ್ಷಗಳಿಂದ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದ್ದ ಗಂಗಾಧರ್, ಮೈಷುಗರ್ ಅಧ್ಯಕ್ಷರಾಗಿ ಬಡ್ತಿ ಪಡೆದಿದ್ದು, ಈ ಹಿಂದೆಯೇ ಅವರ ಸ್ಥಾನಕ್ಕೆ ಚಿದಂಬರ್ ಹೆಸರು ಕೇಳಿ ಬಂದಿತ್ತಾದರೂ ಹಿರಿತನದ ಲೆಕ್ಕಾಚಾರದಲ್ಲಿ ಗಂಗಾಧರ್ ಮುಂದುವರೆದಿದ್ದರು. ಇದೀಗ ಅವರಿಗೆ ಬಡ್ತಿ ಸಿಕ್ಕಿರುವ ಕಾರಣ ಕಾರ್ಯಾಧ್ಯಕ್ಷ ಚಿದಂಬರ್ ಆಯ್ಕೆ ಬಹುತೇಕ ಖಚಿತವಾಗಿದೆ.

ಆಲಂಬಾಡಿಕಾವಲು ಗ್ರಾಪಂ ಅಧ್ಯಕ್ಷರಾಗಿ ಕರಿಶೆಟ್ಟಿ ಅವಿರೋಧ ಆಯ್ಕೆ



ಕೆ.ಆರ್.ಪೇಟೆ ತಾಲೂಕಿನ ಆಲಂಬಾಡಿಕಾವಲು ಗ್ರಾಪಂ ಅಧ್ಯಕ್ಷರಾಗಿ ಎ.ಟಿ.ಕರಿಶೆಟ್ಟಿ ಅವಿರೋಧವಾಗಿ ಆಯ್ಕೆಯಾದರು. ಶಾಸಕ ಹೆಚ್.ಟಿ.ಮಂಜು, ಜಿ.ಪಂ. ಮಾಜಿ ಸದಸ್ಯ ಬಿ.ಎಲ್.ದೇವರಾಜು, ಮುಖಂಡರಾದ ಎ.ಆರ್.ರಘು, ಗ್ರಾಪಂ ಉಪಾಧ್ಯಕ್ಷೆ ಇಶ್ರತ್ ಉನ್ನಿಸಾ, ಸದಸ್ಯರಾದ ಎ.ರಾಜು, ನಾಗೇಶ್, ಅತೀಕ್ ಅಹಮದ್, ಚಂದ್ರಕಲಾ, ಜೆ.ಸುಮಾ, ಮುಜಾಹಿದ್ಖಾನ್, ರೂಪ, ಸಾಕಮ್ಮ, ಬಿ.ಜೆ.ವೆಂಕಟೇಶ್, ವೇದಾಂಬ, ಭಾಗ್ಯಮ್ಮ, ಜಿ.ಪಿ.ಶ್ರೀನಿವಾಸ್, ಮಾಜಿ ಗ್ರಾಪಂ ಅಧ್ಯಕ್ಷ ಜಿ.ಪಿ.ಶ್ರೀನಿವಾಸ್, ಮುಖಂಡರಾದ ಜಿ.ಎಲ್. ಬೋರಲಿಂಗೇಗೌಡ, ಡಾ.ಬಸವರಾಜು, ಎಂ.ಮೋಹನ್, ಬಾಳೆಕಾಯಿ ಚಂದ್ರೇಗೌಡ, ಶ್ರೀನಿವಾಸಶೆಟ್ಟಿ, ವಿಶ್ವನಾಥ್, ಚಿತ್ರ, ಬಿ.ಕೆ. ರಮೇಶ್, ಯೋಗಾನಂದ, ಬಸವನಹಳ್ಳಿ ಕೀರ್ತಿ, ಬಿ.ಕೆ. ಚನ್ನೇಗೌಡ, ತನ್ವೀರ್ಪಾಷಾ ಸೇರಿದಂತೆ ಹಲವರು ನೂತನ ಅಧ್ಯಹಕ್ಷರನ್ನು ಅಭಿನಂದಿಸಿದರು.

ಒಂದನೇ ಪುಟದಿಂದ

ಗ್ರಾಮಾಂತರದಿಂದ ಡಾ.ಸಿ.ಎನ್.ಮಂಜುನಾಥ್

ಹಾಲಿ ಸಂಸದ ಸಿದ್ದೇಶ್ವರ ಬದಲಿಗೆ ಅವರ ಪತ್ನಿ ಗಾಯತ್ರಿ ಸಿದ್ದೇಶ್ವರ ಅವರನ್ನು ಕಣಕ್ಕಿಳಿಸಲಾಗಿದೆ. ಚಿಕ್ಕೋಡಿಯಲ್ಲಿ ಅಣ್ಣಾಸಾಹೇಬ್ ಶಂಕರ್ ಜೊಲ್ಲೆ, ಬಾಗಲಕೋಟೆಯಲ್ಲಿ ಪಿ.ಸಿ.ಗದ್ದಿಗೌಡರ್, ವಿಜಯಪುರದಲ್ಲಿ ರಮೇಶ್ ಜಿಗಜಿಣಗಿ,

ಕಲಬುರಗಿಯಲ್ಲಿ ಡಾ.ಉಮೇಶ್ ಜಾದವ್, ಕೊಪ್ಪಳದಲ್ಲಿ ಡಾ. ಬಸವರಾಜ್ ಕ್ಯಾವತರ್, ಧಾರವಾಡದಲ್ಲಿ ಪ್ರಹ್ಲಾದ್ ಜೋಷಿ, ಶಿವಮೊಗ್ಗದಲ್ಲಿ ಬಿ.ವೈ.ರಾಘವೇಂದ್ರ, ದಕ್ಷಿಣ ಕನ್ನಡದಲ್ಲಿ ಕ್ಯಾಪ್ಟನ್ ಬ್ರಿಜೇಶ್ ಚೌಟಾ, ಬೆಂಗಳೂರು ಸೆಂಟ್ರಲ್‌ನಲ್ಲಿ ಪಿ.ಸಿ.ಮೋಹನ್ ಮತ್ತು ಬೆಂಗಳೂರು ದಕ್ಷಿಣದಲ್ಲಿ ತೇಜಸ್ವಿ ಸೂರ್ಯ ಅವರ ಹೆಸರನ್ನು ಘೋಷಿಸಲಾಗಿದೆ. ಬಿಜೆಪಿ ಘೋಷಿಸಿರುವ 20 ಕ್ಷೇತ್ರಗಳ ಪೈಕಿ 9 ಹಾಲಿ ಸಂಸದರಿಗೆ ಟಿಕೆಟ್ ನಿರಾಕರಿಸಲಾಗಿದೆ. ಮೈಸೂರು–ಕೊಡಗು ಕ್ಷೇತ್ರದ ಪ್ರತಾಪ್ ಸಿಂಹ, ದಕ್ಷಿಣ ಕನ್ನಡದ ನಳಿನ್ ಕುಮಾರ್ ಕಟೀಲ್, ಬಳ್ಳಾರಿಯ ದೇವೇಂದ್ರಪ್ಪ, ಹಾವೇರಿಯ ಶಿವಕುಮಾರ್ ಉದಾಸಿ, ತುಮಕೂರಿನ ಜಿ.ಎಸ್.ಬಸವರಾಜು, ಕೊಪ್ಪಳದ ಸಂಗಣ್ಣ ಕರಡಿ, ಬೆಂಗಳೂರು ಉತ್ತರದ ಡಿ.ವಿ.ಸದಾನಂದಗೌಡ ಅವರಿಗೆ ಟಿಕೆಟ್ ನಿರಾಕರಿಸಲಾಗಿದ್ದು, ಚಾಮರಾಜನಗರ ಕ್ಷೇತ್ರದ ವಿ.ಶ್ರೀನಿವಾಸಪ್ರಸಾದ್ ಸ್ವತಃ ರಾಜಕೀಯ ನಿವೃತ್ತಿ ಘೋಷಿಸಿರುವುದರಿಂದ ಅಲ್ಲಿ ಅಭ್ಯರ್ಥಿ ಬದಲಾಯಿಸಲಾಗಿದೆ.

ಹೊಸ ಮುಖ: ಬೆಂಗಳೂರು ಗ್ರಾಮಾಂತರ ಕ್ಷೇತ್ರದ ಡಾ. ಸಿ.ಎನ್.ಮಂಜುನಾಥ್, ಮೈಸೂರು–ಕೊಡಗು ಕ್ಷೇತ್ರದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್, ದಕ್ಷಿಣ ಕನ್ನಡದ ಕ್ಯಾಪ್ಟನ್ ಬ್ರಿಜೇಶ್ ಚೌಟಾ, ಚಾಮರಾಜನಗರದ ಎಸ್.ಬಾಲರಾಜು, ಉಡುಪಿ–ಚಿಕ್ಕಮಗಳೂರು ಕ್ಷೇತ್ರದ ಕೋಟಾ ಶ್ರೀನಿವಾಸ ಪೂಜಾರಿ, ದಾವಣಗೆರೆಯ ಗಾಯಿತ್ರಿ ಸಿದ್ದೇಶ್ವರ ಮತ್ತು ಕೊಪ್ಪಳದ ಡಾ. ಬಸವರಾಜ ಕ್ಯಾವತೂರ್ ಅವರು ಇದೇ ಮೊದಲ ಬಾರಿಗೆ ಲೋಕಸಭಾ ಚುನಾವಣೆಯಲ್ಲಿ ಸ್ಪರ್ಧಿಸುತ್ತಿದ್ದಾರೆ.

ಕೆಲಸ ಮಾಡಲು ಅವಕಾಶ ಕಲ್ಪಿಸಿ

ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ, ಕೇಂದ್ರ ಗೃಹ ಸಚಿವ ಅಮಿತ್ ಶಾ, ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ, ಬಿ.ಎಲ್. ಸಂತೋಷ್ ಹಾಗೂ ಪಕ್ಷದ ಕಾರ್ಯಕರ್ತರಿಗೆ ಹೃದಯಪೂರ್ವಕ ಧನ್ಯವಾದ ಅರ್ಪಿಸುತ್ತಿರುವುದಾಗಿ ಹೇಳಿರುವ ಅವರು, ಕಳೆದ ಎರಡೂ ಅವಧಿಯನ್ನು ಯಶಸ್ವಿಯಾಗಿ ಪೂರೈಸಿದ್ದಕ್ಕಾಗಿ ಹಾಲಿ ಸಂಸದ ಪ್ರತಾಪ ಸಿಂಹ ಅವರನ್ನು ಅಭಿನಂದಿಸಿರುವ ಯದುವೀರ್, ಈ ಕ್ಷೇತ್ರದ ಅಭಿವೃದ್ಧಿಗೆ ಪ್ರತಾಪ ಸಿಂಹ ಅವರ ಬದ್ಧತೆ ನಮ್ಮೆಲ್ಲರ ಭವಿಷ್ಯದ ಆಕಾಂಕ್ಷೆಗಳಿಗೆ ಭದ್ರ ಅಡಿಪಾಯ ಹಾಕಿಕೊಟ್ಟಿದೆ ಎಂದು ತಿಳಿಸಿದ್ದಾರೆ.

ಶಂಕಿತನನ್ನು ವಶಕ್ಕೆ ಪಡೆದ ಎನ್‌ಐಎ

ತನಿಖೆ ನಡೆಸುತ್ತಿದ್ದರು. ಸಿಸಿಟಿವಿ ದೃಶ್ಯಾವಳಿಗಳಲ್ಲಿ ಆರೋಪಿ ಬ್ಯಾಗ್ ಸಮೇತ ಕೆಫೆಗೆ ಆಗಮಿಸಿ, ಬಳಿಕ ಒಬ್ಬನೇ ತೆರಳುತ್ತಿರುವುದು ಪತ್ತೆಯಾಗಿದೆ. ಈತನ ಚಹರೆ ಯನ್ನು ಪತ್ತೆ ಹಚ್ಚಲಾಗಿದೆ ಎಂದು ಪೊಲೀಸರು ತಿಳಿಸಿದ್ದರು. ರಾಮೇಶ್ವರಂ ಕೆಫೆಯಲ್ಲಿ ಇತ್ತೀಚೆಗೆ ನಡೆದ ಸ್ಫೋಟ ಪ್ರಕರಣದಲ್ಲಿ ಪ್ರಮುಖ ಸುಳಿವು ದೊರೆತಿದ್ದು, ತನಿಖೆಯನ್ನು ರಾಜ್ಯ ಸಿಸಿಬಿ ಹಾಗೂ ಎನ್‌ಐಎ ತಂಡಗಳು ಜಂಟಿಯಾಗಿ ನಡೆಸುತ್ತಿವೆ ಎಂದು ಗೃಹ ಸಚಿವ ಡಾ. ಜಿ.ಪರಮೇಶ್ವರ್ ಹೇಳಿದರು. ಬಾಂಬ್ ಸ್ಫೋಟ ಪ್ರಕರಣದ ತನಿಖೆ ಕೈಗೆತ್ತಿಕೊಂಡಿರುವ ರಾಷ್ಟ್ರೀಯ ತನಿಖಾ ದಳ (ಎನ್‌ಐಎ) ಅಧಿಕಾರಿಗಳ ತಂಡ ಮಾರ್ಚ್ 5ರಂದು ರಾಮೇಶ್ವರಂ ಕೆಫೆಗೆ ಭೇಟಿ ನೀಡಿ ತನಿಖೆ ಆರಂಭಿಸಿತ್ತು. ಎನ್‌ಐಎ ಎಸ್.ಪಿ ನೇತೃತ್ವದ ಮೂವರು ಅಧಿಕಾರಿಗಳು ಸ್ಥಳ ಮಹಜರು ನಡೆಸಿದ್ದು, ಕೆಫೆ ಸಿಬ್ಬಂದಿಯಿಂದ ಘಟನಾ ದಿನದ ವಿವರ ಪಡೆದುಕೊಂಡಿದ್ದರು. ಈ ತನಿಖೆ ಮುಂದುವರಿದಿದ್ದು, ಆರೋಪಿ ಸುಳಿವು ನೀಡಿದವರಿಗೆ ಎನ್‌ಐಎ 10 ಲಕ್ಷ ನಗದು ಬಹುಮಾನ ಘೋಷಿಸಿತ್ತು.

ಶಂಕಿತನ ವಶಕ್ಕೆ ಪಡೆದ ಎನ್‌ಐಎ: ಮಾರ್ಚ್ 8ರಂದು ಎನ್‌ಐಎ ತಂಡ ರಾಮೇಶ್ವರಂ ಕೆಫೆ ಸ್ಫೋಟ ಪ್ರಕರಣಕ್ಕೆ ಸಂಬಂಧಿಸಿದಂತೆ ಶಂಕಿತನೊಬ್ಬನನ್ನು ವಶಕ್ಕೆ ಪಡೆದಿತ್ತು. ಬಳ್ಳಾರಿ ಕೇಂದ್ರ ಕಾರಾಗೃಹದಲ್ಲಿದ್ದ ಮಿನಾಜ್ ಅಲಿಯಾಸ್ ಸುಲೇಮಾನ್ ಎಂಬಾತನನ್ನು ಎನ್‌ಐಎ ಅಧಿಕಾರಿಗಳು ವಶಕ್ಕೆ ಪಡೆದು ತೀವ್ರ ವಿಚಾರಣೆಗೆ ಒಳಪಡಿಸಿದ್ದರು. ರಾಜ್ಯದಲ್ಲಿ ವಿಧ್ವಂಸಕ ಕೃತ್ಯಗಳಿಗೆ ಸಂಚು ರೂಪಿಸಿದ್ದ ಆರೋಪದಡಿ ಬಳ್ಳಾರಿಯ ಕೌಲ್ ಬಜಾರ್ ಪೊಲೀಸ್ ಠಾಣೆ ವ್ಯಾಪ್ತಿಯ ನಿವಾಸಿಯಾಗಿದ್ದ, ನಿಷೇಧಿತ ಪಿಎಫ್‌ಐ ಸಂಘಟನೆಯ ಸದಸ್ಯ ಮಿನಾಜ್ ಹಾಗೂ ಆತನ ಗುಂಪಿನ ಮತ್ತೋರ್ವ ಸದಸ್ಯ ಸಯ್ಯದ್ ಸಮೀರ್ ಎಂಬಾತನನ್ನು ಈ ಹಿಂದೆ ಎನ್‌ಐಎ ಬಂಧಿಸಿತ್ತು. ಬಳಿಕ ಆತನನ್ನು ಬಳ್ಳಾರಿಯ ಕೇಂದ್ರ ಕಾರಾಗೃಹದಲ್ಲಿ ಇರಿಸಲಾಗಿತ್ತು.

ಇಂದು ಸಂಪುಟ ಸಭೆಯಲ್ಲಿ ನಿರ್ಧಾರ

ಇಂತಹ ಗಿಮಿಕ್‌ಗಳನ್ನು ಮಾಡುತ್ತಿದೆ. ಪೌರತ್ವ ಕಾಯ್ದೆ ಜಾರಿ ಬಗ್ಗೆ ಇಷ್ಟು ವರ್ಷ ಮೌನ ವಹಿಸಿ ಚುನಾವಣೆ ಹೊಸ್ತಿಲಲ್ಲಿ ಜಾರಿಗೊಳಿಸಿದ್ದಾರೆ ಎಂದರು. ಜಯಪ್ರಕಾಶ್ ಹೆಗಡೆ ಮತ್ತೊಮ್ಮೆ ಕಾಂಗ್ರೆಸ್ ಪಕ್ಷಕ್ಕೆ ಸೇರ್ಪಡೆಯಾಗಿರುವುದು ಕರಾವಳಿ ಪ್ರದೇಶದಲ್ಲಿ ಪಕ್ಷಕ್ಕೆ ಬಲ ತುಂಬಿದಂತಾಗಿದೆ. ಮೈಸೂರು ಸಂಸದ ಪ್ರತಾಪ್ ಸಿಂಹ ಅವರನ್ನು ಕೈಬಿಟ್ಟು, ಈ ಬಾರಿ ಲೋಕಸಭಾ ಚುನಾವಣೆಗೆ ರಾಜವಂಶಸ್ಥ ಯದುವೀರ್ ಅವರಿಗೆ ಟಿಕೆಟ್ ನೀಡುವ ಬಿಜೆಪಿ ನಿರ್ಧಾರದ ಬಗ್ಗೆ ತಮಗೆ ಯಾವುದೇ ಮಾಹಿತಿ ಇಲ್ಲ ಎಂದರು.

ಶ್ರೀ ರೇಣುಕಾದೇವಿ ಮಹಾ ಕುಂಬಾಭಿಷೇಕ ಮಹೋತ್ಸವ



ಮೈಸೂರು, ಮಾ.13(ಎಂಕೆ)– ನಗರದ ಇಟ್ಟಿಗೆಗೂಡಿನ ಶ್ರೀ ರೇಣುಕಾದೇವಿ ಕರಗ ದೇವಸ್ಥಾನದಲ್ಲಿ ಶ್ರೀ ರೇಣುಕಾದೇವಿ ಅಮ್ಮನವರ 38ನೇ ವಾರ್ಷಿಕೋತ್ಸವ ಹಾಗೂ ದೇವ ಸ್ಥಾನ ಜೀರ್ಣೋದ್ಧಾರ ಮಹಾ ಕುಂಬಾಭಿಷೇಕ ಮಹೋತ್ಸವ ಭಕ್ತಿ-ಭಾವದಿಂದ ನೆರವೇರಿತು.

ಕಳೆದ ಮೂರು ದಿನಗಳಿಂದ ವಿವಿಧ ಪೂಜಾ ಕೈಂಕರ್ಯದೊಂದಿಗೆ ಅದ್ದೂರಿಯಾಗಿ ನಡೆದ ಮಹೋತ್ಸವ ಬುಧವಾರ ದೇವಿಯ ಉತ್ಸವ ಮೂರ್ತಿಯ ಮೆರವಣಿಗೆಯೊಂದಿಗೆ ಸಂಪನ್ನಗೊಂಡಿತು. ಬೆಳಗ್ಗೆಯಿಂದ ಅಮ್ಮನವರ ವರ್ಧಂತಿ ಪ್ರಯುಕ್ತ ಪುಣ್ಯಾಹ ಮೂಲ ಮಂತ್ರ ಹೋಮ ಸೇರಿದಂತೆ ವಿವಿಧ ಪೂಜಾ ವಿಧಿ–ವಿಧಾನಗಳು ಶ್ರದ್ಧಾಭಕ್ತಿಯಿಂದ ನೆರವೇರಿದವು. ಸಂಜೆ 7 ಗಂಟೆಗೆ ಆರಂಭವಾದ ಶ್ರೀ ರೇಣುಕಾದೇವಿ ಅಮ್ಮನವರ ಉತ್ಸವ ಮೂರ್ತಿಯ ಮೆರವಣಿಗೆಯು ಇಟ್ಟಿಗೆಗೂಡಿನ ಪ್ರಮುಖ ಬೀದಿಗಳಲ್ಲಿ ಸಂಚರಿಸಿತು. ಈ ವೇಳೆ ಅಪಾರ ಸಂಖ್ಯೆ ಭಕ್ತಾದಿಗಳು ದೇವಿಗೆ ಪೂಜೆ ಸಲ್ಲಿಸಿ, ಇಷ್ಟಾರ್ಥ ಸಿದ್ಧಿಗಾಗಿ ಪಾರ್ಥಿಸಿದರು. ಮೆರವಣಿಗೆಯಲ್ಲಿ ಇಟ್ಟಿಗೆಗೂಡು ಮುಖಂಡರು, ಗ್ರಾಮಸ್ಥರು ಭಾಗವಹಿಸಿದ್ದರು.

ಶ್ರೀ ಗಂಗಾ ಚಾರಿಟಬಲ್ ಟ್ರಸ್ಟ್‌ನಿಂದ ಯಂತ್ರೋಪಕರಣ ವಿತರಣೆ

ಮೈಸೂರು, ಮಾ.13(ಎಂಕೆ)– ಭಾರತ ಸರ್ಕಾರದ ಖಾದಿ ಮತ್ತು ಗ್ರಾಮೋದ್ಯೋಗ ಆಯೋಗ ಹಾಗೂ ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಉದ್ಯಮಗಳ ಸಚಿವಾಲಯದ ಸಹಕಾರದೊಂದಿಗೆ ಶ್ರೀ ಗಂಗಾ ಚಾರಿಟಬಲ್ ಟ್ರಸ್ಟ್ ವತಿಯಿಂದ 200 ಮಂದಿ ಫಲಾನುಭವಿಗಳಿಗೆ ವಿವಿಧ ಯಂತ್ರೋಪಕರಣಗಳನ್ನು ವಿತರಣೆ ಮಾಡಲಾಯಿತು.



ಮೈಸೂರಿನ ದಿವಾನ್ಸ್ ರಸ್ತೆಯಲ್ಲಿ ಶ್ರೀ ಗಂಗಾ ಚಾರಿಟಬಲ್ ಟ್ರಸ್ಟ್ ವತಿಯಿಂದ ಕೇಂದ್ರ ಸರ್ಕಾರದ ವಿವಿಧ ಯೋಜನೆಗಳ 200 ಮಂದಿ ಫಲಾನುಭವಿಗಳಿಗೆ ವಿವಿಧ ಯಂತ್ರೋಪಕರಣಗಳನ್ನು ವಿತರಣೆ ಮಾಡಲಾಯಿತು.

ನಗರದ ದಿವಾನ್ಸ್ ರಸ್ತೆಯಲ್ಲಿರುವ ಟ್ರಸ್ಟ್‌ನ ಕಚೇರಿ ಎದುರು ಬುಧವಾರ ಬ್ಯೂಟಿ ಪಾರ್ಲರ್ ತರಬೇತಿ ಪಡೆದವರಿಗೆ ಪ್ರಮಾಣ ಪತ್ರ ಸೇರಿದಂತೆ ಜ್ಯೂಸ್ ತಯಾರಿಕೆ, ಚಪ್ಪಲಿ ತಯಾರಿಕೆ, ಪೇಪರ್ ಕಪ್ಸ್ ತಯಾರಿಕೆ ಹಾಗೂ ಟೈಲರಿಂಗ್ ಯಂತ್ರಗಳನ್ನು ವಿತರಣೆ ಮಾಡಲಾಯಿತು. ಇದೇ ವೇಳೆ ಶಿಕ್ಷಣ, ಆರೋಗ್ಯ ಸೇವೆ, ಸಮಾಜಸೇವೆ ಮುಂತಾದ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಮಹಿಳೆಯರನ್ನು ಟ್ರಸ್ಟ್ ವತಿಯಿಂದ ಸನ್ಮಾನಿಸಲಾಯಿತು. ಬಳಿಕ ಶ್ರೀ ಗಂಗಾ ಚಾರಿಟಬಲ್ ಟ್ರಸ್ಟ್ ಅಧ್ಯಕ್ಷ ರಾಜ್‌ಕಾಮಯ್ಯ ಮಾತನಾಡಿ, ಸಮಾಜದಲ್ಲಿ ಮಹಿಳೆಯರನ್ನು ಶಿಕ್ಷಣ ಮತ್ತು ತರಬೇತಿಯ ಮೂಲಕ ಸಬಲೀಕರಣಗೊಳಿಸುವ ಅಗತ್ಯವಿದೆ. ಈ ನಿಟ್ಟಿನಲ್ಲಿ ಟ್ರಸ್ಟ್ ಕಾರ್ಯನಿರ್ವಹಿಸುತ್ತಿದ್ದು, ಮಹಿಳೆಯರಲ್ಲಿ ಆರ್ಥಿಕ ಸ್ವಾವಲಂಬನೆ, ವ್ಯವಹಾರ ಕೌಶಲ್ಯ ಮತ್ತು ಆತ್ಮರಕ್ಷಣೆ ಕುರಿತು ಕಾರ್ಯಾಗಾರಗಳನ್ನು ಹಮ್ಮಿಕೊಳ್ಳಲಾಗುತ್ತಿದೆ ಎಂದರು.

ಅಖಿಲ ಭಾರತ ಮಹಿಳಾ ಉದ್ಯಮಿ ಹಾಗೂ ತರಬೇತುದಾರರ ಸಂಘದ ಅಧ್ಯಕ್ಷೆ ಎಂ.ದಿವ್ಯಶ್ರೀ, ಬೆಮೆಲ್ ಮಾಜಿ ಕಾರ್ಯನಿರ್ವಾಹಕ ನಿರ್ದೇಶಕ ಬಿ.ಶಂಕರ್, ಶ್ರೀ ಗಂಗಾ ಚಾರಿಟಬಲ್ ಟ್ರಸ್ಟ್ ನಿರ್ದೇಶಕ ಚಿಕ್ಕಲಿಂಗೇಗೌಡ, ಟ್ರಸ್ಟ್‌ನ ಅಸಿಸ್ಟೆಂಟ್ ಜನರಲ್ ಮ್ಯಾನೇಜರ್ ರಾಜಣ್ಣ, ಅಶ್ರಯ ಪಗತಿ ಸಂಘಗಳ ಒಕ್ಕೂಟದ ಅಧ್ಯಕ್ಷೆ ಚಂದ್ರಮ್ಮ ಮತ್ತಿತರರು ಉಪಸ್ಥಿತರಿದ್ದರು.

ಸರ್ಕಾರಿ ನೌಕರರ ಮೈಸೂರು ಜಿಲ್ಲಾ ಮಟ್ಟದ ಕ್ರೀಡಾಕೂಟ

ವಿಜೇತರಿಗೆ ಎಂಎಲ್‌ಸಿ ಡಾ.ತಿಮ್ಮಯ್ಯ ಬಹುಮಾನ ವಿತರಣೆ



ರಾಜ್ಯ ಸರ್ಕಾರಿ ನೌಕರರ ಮೈಸೂರು ಜಿಲ್ಲಾ ಮಟ್ಟದ ಕ್ರೀಡಾಕೂಟ ಮತ್ತು ಸಾಂಸ್ಕೃತಿಕ ಸ್ಪರ್ಧೆ ವಿಜೇತರಿಗೆ ವಿಧಾನ ಪರಿಷತ್ ಸದಸ್ಯ ಡಾ.ತಿಮ್ಮಯ್ಯ ಹಾಗೂ ಶಾಸಕ ಟಿ.ಎಸ್.ಶ್ರೀವತ್ಸ ಬಹುಮಾನ ವಿತರಿಸಿದರು. ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಜಿಲ್ಲಾಧ್ಯಕ್ಷ ಜೆ.ಗೋವಿಂದರಾಜು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಸಹಾಯಕ ನಿರ್ದೇಶಕ ಭಾಸ್ಕರ್ ನಾಯಕ್ ಮತ್ತಿತರರಿದ್ದರು.

ಮೈಸೂರು, ಮಾ.13(ಎಂಕೆ)– ಜಿಲ್ಲಾಡಳಿತ, ಜಿಪಂ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ವತಿಯಿಂದ ಆಯೋಜಿಸಿದ್ದ ರಾಜ್ಯ ಸರ್ಕಾರಿ ನೌಕರರ ಮೈಸೂರು ಜಿಲ್ಲಾ ಮಟ್ಟದ ಕ್ರೀಡಾಕೂಟ ಮತ್ತು ಸಾಂಸ್ಕೃತಿಕ ಸ್ಪರ್ಧೆ ಯಶಸ್ವಿಯಾಯಿತು.

ನಗರದ ಚಾಮುಂಡಿ ವಿಹಾರ ಕ್ರೀಡಾಂಗಣದಲ್ಲಿ ನಡೆದ ಎರಡು ದಿನಗಳ ಕ್ರೀಡಾಕೂಟದಲ್ಲಿ ನೂರಾರು ಮಂದಿ ಸರ್ಕಾರಿ ನೌಕರರು ವಿವಿಧ ಕ್ರೀಡೆಗಳಲ್ಲಿ ಭಾಗವಹಿಸಿ ಬಹುಮಾನಗಳನ್ನು ಗೆದ್ದು ಬೀಗಿದರು. ಗುಂಪು ವಿಭಾಗದ ಕಬಡ್ಡಿಯಲ್ಲಿ ವಿವಿಧ ಇಲಾಖೆಗಳ ತಂಡ ಪ್ರಥಮ ಸ್ಥಾನ ಜಯಿಸಿದರೆ, ಆರೋಗ್ಯ ಇಲಾಖೆ ತಂಡ ದ್ವಿತೀಯ ಸ್ಥಾನ ಪಡೆಯಿತು. ಥ್ರೋಬಾಲ್‌ನಲ್ಲಿ ಆರೋಗ್ಯ ಇಲಾಖೆ(ಕೆ.ಆರ್.ವೃತ್ತ) ತಂಡ ಪ್ರಥಮ ಸ್ಥಾನ ಪಡೆದರೆ, ಶಿಕ್ಷಣ ಇಲಾಖೆ ತಂಡ ದ್ವಿತೀಯ ಸ್ಥಾನ ಪಡೆಯಿತು.

ಕೆ.ಆರ್.ಆಸ್ಪತ್ರೆಯ ನರ್ಸಿಂಗ್ ಅಧಿಕಾರಿ ಬಿ.ವಸಂತಿ, ಲಾಂಗ್‌ಜಂಪ್‌ನಲ್ಲಿ ಚಿನ್ನ, 200 ಮೀ. ಮತ್ತು 100 ಮೀ. ಓಟದಲ್ಲಿ ಬೆಳ್ಳಿ, 400X4 ರಿಲೇ, 100X4 ರಿಲೇಯಲ್ಲಿ ಕಂಚು, ಯೋಗಾಸನದಲ್ಲಿ 3 ಪದಕ ಸೇರಿದಂತೆ 8 ಪದಕ ಗೆದ್ದು ಮಿಂಚಿದರೆ, ಸರ್ಕಾರಿ ಶುಶ್ರೂಷ ವಿದ್ಯಾಲಯದ ಪ್ರಾಂಶುಪಾಲರಾದ ಪುಷ್ಪಲತಾ ಯೋಗದಲ್ಲಿ 3, 100, 200 ಮೀ. ಓಟದಲ್ಲಿ ಕಂಚು, ಕಬಡ್ಡಿ, ಕಲಾತ್ಮಕ ಯೋಗದಲ್ಲಿ ಬೆಳ್ಳಿ ಪದಕ ಸೇರಿ 7 ಪದಕ ಪಡೆದರು. ಬನ್ನಿಮಂಟಪದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಶಿಕ್ಷಕಿ ಗುಣವತಿ 100 ಮೀಟರ್ ಓಟ, 400X4 ರಿಲೇ, 100X4 ರಿಲೇಯಲ್ಲಿ ಚಿನ್ನ, ಕಬಡ್ಡಿ, ಲಾಂಗ್‌ಜಂಪ್, ಕಲಾತ್ಮಕ ಯೋಗದಲ್ಲಿ ಬೆಳ್ಳಿ ಪದಕ ಸೇರಿ 6 ಪದಕ ಗೆದ್ದರು. ಹಾಗೆಯೇ ಪುರುಷರ ವಿಭಾಗದಲ್ಲಿ ತಿ. ನರಸೀಪುರ ತಾಲೂಕಿನ ಅಗಸ್ತ್ಯಪುರದ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯ ಶಿಕ್ಷಕ ಆರ್.ಜವರನಾಯಕ, 50 ಮೀಟರ್ ಬ್ರೆಸ್ಟ್ ಸ್ಟ್ರೋಕ್, ಬಟರ್‌ಫ್ಲೈ, 100X4 ರಿಲೇಯಲ್ಲಿ ಚಿನ್ನ ಗೆದ್ದು ಗಮನ ಸೆಳೆದರು.

ಪುರುಷರ ವಿಭಾಗದ 100 ಮೀ. ಓಟ: ಮಿಥುನ್‌ಗೌಡ, ಎಚ್.ಎಲ್.ಚಂದ್ರಶೇಖರ, ಪಂಪಾಪತಿ. 200 ಮೀಟರ್ ಓಟದಲ್ಲಿ ಹೆಚ್.ಎಲ್.ಚಂದ್ರಶೇಖರ, ಜಗದೀಶ್, ಪಂಪಾಪತಿ, 400 ಮೀಟರ್ ಓಟದಲ್ಲಿ ಪಂಪಾಪತಿ, ಸಂತೋಷ, ದಿನೇಶ್. 800 ಮೀಟರ್ ಓಟದಲ್ಲಿ ಮಹೇಂದ್ರ, ನರೇಂದ್ರ, ಮರಿಸ್ವಾಮಿ. ಲಾಂಗ್ ಜಂಪ್‌ನಲ್ಲಿ ಮಂಜು, ನಯನ್, ಶ್ರೀಧರ, ಹೈಜಂಪ್‌ನಲ್ಲಿ ರೇವಣಸಿದ್ಧ, ಶ್ರೀಧರ, ಅಸ್ಲಾಮ್ ಹಾಗೂ ಶಾಟ್‌ಪಟ್‌ನಲ್ಲಿ ದೇವರಾಜು, ಭರತ್, ವೇಣುಗೋಪಾಲ್ ಕ್ರಮವಾಗಿ ಪ್ರಥಮ, ದ್ವಿತೀಯ ಮತ್ತು ತೃತೀಯ ಪದಕಗಳನ್ನು ಗೆದ್ದರು.

ಮಹಿಳೆಯರ ವಿಭಾಗ: 100 ಮೀ. ಓಟದಲ್ಲಿ ಮಂಗಳ, ಸುಷ್ಮಾ, ನಿರ್ಮಲಾ. 200 ಮೀ. ಓಟದಲ್ಲಿ ರಾಧಾ. 400 ಮೀಟರ್ ಓಟದಲ್ಲಿ ಉಮಾ, ರಾಧಾ, ಸುಷ್ಮಾ. 800 ಮೀ. ಓಟದಲ್ಲಿ ಉಮಾ, ಮಂಗಳಾ, ಕವಿತಾ. ಲಾಂಗ್ ಜಂಪ್‌ನಲ್ಲಿ ಶಶಿಕಲಾ, ಪುನೀತಾ, ಯಶಸ್ವಿ ರೈ ಹೈಜಂಪ್‌ನಲ್ಲಿ ಜಲಜಾಕ್ಷಿ, ಪುನೀತಾ ಹಾಗೂ ಶಾಟ್‌ಪುಟ್‌ನಲ್ಲಿ ಪೂಜಾ, ಜಲಜಾಕ್ಷಿ, ಗಿರಿಜಾ ಕ್ರಮವಾಗಿ ಪ್ರಥಮ, ದ್ವಿತೀಯ ಮತ್ತು ತೃತೀಯ ಬಹುಮಾನ ಜಯಿಸಿದರು.

ಬಹುಮಾನ ವಿತರಣೆ: ವಿಜೇತರಿಗೆ ವಿಧಾನಪರಿಷತ್ ಸದಸ್ಯ ಡಾ.ತಿಮ್ಮಯ್ಯ, ಶಾಸಕ ಟಿ.ಎಸ್.ಶ್ರೀವತ್ಸ ಬಹುಮಾನ ವಿತರಿಸಿದರು. ಬಳಿಕ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಜಿಲ್ಲಾಧ್ಯಕ್ಷ ಜೆ.ಗೋವಿಂದರಾಜು ಮಾತನಾಡಿ, ಎರಡು ದಿನಗಳ ಕ್ರೀಡಾಕೂಟದಲ್ಲಿ 2 ಸಾವಿರಕ್ಕೂ ಹೆಚ್ಚು ಸರ್ಕಾರಿ ನೌಕರರು ಭಾಗವಹಿಸಿ ಕ್ರೀಡಾಕೂಟವನ್ನು ಯಶಸ್ವಿಗೊಳಿಸಿದ್ದಾರೆ. ಪ್ರಥಮ ಮತ್ತು ದ್ವಿತೀಯ ಸ್ಥಾನ ಪಡೆದಿರುವ ನೌಕರರು ರಾಜ್ಯಮಟ್ಟದಲ್ಲೂ ಭಾಗವಹಿಸಿ, ಮೈಸೂರು ಜಿಲ್ಲೆಗೆ ಕೀರ್ತಿ ತರುವಂತೆ ಕರೆ ನೀಡಿದರು. ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಸಹಾಯಕ ನಿರ್ದೇಶಕ ಭಾಸ್ಕರ್ ನಾಯಕ್, ನೌಕರರ ಸಂಘದ ಜಿಲ್ಲಾ ಪದಾಧಿಕಾರಿಗಳು ಉಪಸ್ಥಿತರಿದ್ದರು.

ಲೋಕಸಭಾ ಚುನಾವಣೆ ಹಿನ್ನೆಲೆ

ಮೈಸೂರಲ್ಲಿ ಚೆಕ್‌ಪೋಸ್ಟ್‌ಗಳ ಸ್ಥಾಪನೆ

ಡಿಸಿ, ಎಆರ್‌ಓಗಳಿಂದ ಪರಿಶೀಲನೆ, ಮೂರು ಪಾಳಿಯಲ್ಲಿ ಕರ್ತವ್ಯ ನಿರ್ವಹಿಸಲು ಪ್ರತೀ ಚೆಕ್‌ಪೋಸ್ಟ್‌ಗೆ 9 ಮಂದಿ ಪೊಲೀಸರ ನಿಯೋಜನೆ, ಚುನಾವಣೆ ಘೋಷಣೆಯಾದ ದಿನದಿಂದಲೇ ವಾಹನಗಳ ತಪಾಸಣೆ ಆರಂಭ.



ಮೈಸೂರು,ಮಾ.13(ಆರ್‌ಕೆ)–ಲೋಕಸಭಾ ಸಾರ್ವತ್ರಿಕ ಚುನಾವಣೆಗೆ ದಿನಗಣನೆ ಆರಂಭವಾಗಿದ್ದು, ಜಿಲ್ಲಾಡಳಿತ, ನಗರ ಮತ್ತು ಜಿಲ್ಲಾ ಪೊಲೀಸ್ ಘಟಕಗಳು ಚೆಕ್‌ಪೋಸ್ಟ್‌ಗಳನ್ನು ಸ್ಥಾಪಿಸಿವೆ.

ಈ ಸಂಬಂಧ 'ಮೈಸೂರು ಮಿತ್ರ'ನಿಗೆ ಮಾಹಿತಿ ನೀಡಿದ ಮೈಸೂರು ನಗರ ಕಾನೂನು ಮತ್ತು ಸುವ್ಯವಸ್ಥೆ ವಿಭಾಗದ ಡಿಸಿಪಿ ಎಂ.ಮುತ್ತುರಾಜ್, 2024ರ ಚುನಾವಣೆ ಹಿನ್ನೆಲೆಯಲ್ಲಿ ಜಾರಿಗೆ ಬರುವ ನೀತಿಸಂಹಿತೆಯನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಮೈಸೂರು ನಗರ ಪೊಲೀಸ್ ಕಮಿಷ್ನರೇಟ್ ವ್ಯಾಪ್ತಿಯ ರಾಷ್ಟ್ರೀಯ, ರಾಜ್ಯ ಮತ್ತು ಜಿಲ್ಲಾ ಹೆದ್ದಾರಿಗಳು ಮತ್ತು ಜಿಲ್ಲಾ ಮುಖ್ಯ ರಸ್ತೆಗಳಲ್ಲಿ ಚೆಕ್‌ಪೋಸ್ಟ್‌ಗಳನ್ನು ಸ್ಥಾಪಿಸಲಾಗಿದೆ ಎಂದರು.

ಪ್ರತೀ ಚೆಕ್‌ಪೋಸ್ಟ್‌ಗಳಲ್ಲಿ ಸಿಸಿ ಕ್ಯಾಮರಾಗಳು, ಟೆಂಟ್‌ಗಳು, ದಿನಕ್ಕೆ 3 ಪಾಳಿಯಲ್ಲಿ ಪ್ರತೀ ಪಾಳಿಗೆ ಮೂವರಂತೆ 9 ಮಂದಿ ಸಿವಿಲ್ ಮತ್ತು ಸಿಎಆರ್ ಸಿಬ್ಬಂದಿ, ಕುಡಿಯುವ ನೀರು, ಪೀಠೋಪಕರಣ, ವಿದ್ಯುತ್ ಸೌಲಭ್ಯವನ್ನು ಕಲ್ಪಿಸಿ ಮೂಲ ಸೌಕರ್ಯದೊಂದಿಗೆ ಸಿದ್ಧತೆ ಮಾಡಲಾಗಿದೆ ಎಂದು ತಿಳಿಸಿದರು.

ಜಿಲ್ಲಾ ಚುನಾವಣಾಧಿಕಾರಿಗಳೂ ಆದ ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಸಹಾಯಕ ಚುನಾವಣಾಧಿಕಾರಿಗಳೊಂದಿಗೆ ಪ್ರತೀ ಚೆಕ್‌ಪೋಸ್ಟ್‌ಗೆ ಭೇಟಿ ನೀಡಿ ಸಿದ್ಧತೆ ಪರಿಶೀಲಿಸಿ ಸಲಹೆ–ಸೂಚನೆಗಳನ್ನು ನೀಡಿದ್ದೇವೆ. ದಿನದ 24 ಗಂಟೆಯೂ ಹೊರ ಜಿಲ್ಲೆಗಳಿಂದ ಬರುವ ವಾಹನಗಳನ್ನು ನಿಲ್ಲಿಸಿ ತಪಾಸಣೆ ಮಾಡಲು ನಿಯೋಜಿತ ಸಿಬ್ಬಂದಿಗೆ ತರಬೇತಿ ನೀಡಲಾಗಿದೆ ಎಂದು ತಿಳಿಸಿದ್ದಾರೆ.

ಕೆಆರ್‌ಎಸ್ ರಸ್ತೆಯ ಸುನಂದ ಫ್ಯಾಕ್ಟರಿ ಬಳಿ, ಹುಣಸೂರು ರಸ್ತೆಯ ಬೆಳವಾಡಿ ಬಳಿ, ಗದ್ದಿಗೆ ರಸ್ತೆಯ ಬೋಗಾದಿ ಸಿಗ್ನಲ್ ಲೈಟ್ ಜಂಕ್ಷನ್, ಹೆಚ್.ಡಿ.ಕೋಟೆ ರಸ್ತೆಯ ಶ್ರೀರಾಂಪುರ ರಿಂಗ್ ರಸ್ತೆ ಜಂಕ್ಷನ್, ನಂಜನಗೂಡು ರಸ್ತೆ ಎಪಿಎಂಸಿ ಸಮೀಪದ ಸಿಗ್ನಲ್ ಲೈಟ್ ಜಂಕ್ಷನ್, ತಿ.ನರಸೀಪುರ ರಸ್ತೆಯ ಚಿಕ್ಕಹಳ್ಳಿ ಬಳಿ, ಬನ್ನೂರು ರಸ್ತೆಯ ಭುಗತಗಳ್ಳಿ ಗೇಟ್ ಬಳಿ, ಮಹದೇವಪುರ ರಸ್ತೆಯ ಭಾರತ್‌ನಗರ ಬಳಿ, ಹಳೇ ಕೆಸರೆಗೆ ಹೋಗುವ ರಿಂಗ್ ರಸ್ತೆಯ ಪುಷ್ಪಾಶ್ರಮ ಬಳಿ, ಬೆಲವತ್ತ ಸಮೀಪದ ಉನ್ನತಿನಗರ ಬಳಿ ಪೊಲೀಸ್ ಚೆಕ್‌ಪೋಸ್ಟ್‌ಗಳನ್ನು ಸಜ್ಜುಗೊಳಿಸಿ ವಾಹನಗಳ ತಪಾಸಣಾ ಕಾರ್ಯಾಚರಣೆಗೆ ನಾವು ತಯಾರಾಗಿದ್ದೇವೆ ಎಂದರು.

ಅದೇ ರೀತಿ ಜಿಲ್ಲೆಯಾದ್ಯಂತ ತಾಲೂಕು ಸಂಪರ್ಕಿಸುವ ಎಲ್ಲಾ ರಸ್ತೆ, ಜಿಲ್ಲಾ ಗಡಿಗಳ ಚೆಕ್‌ಪೋಸ್ಟ್‌ಗಳಲ್ಲಿ ಮೂಲ ಸೌಲಭ್ಯ ಕಲ್ಪಿಸಿ ವಾಹನ ತಪಾಸಣೆಗೆ ಜಿಲ್ಲಾ ಪೊಲೀಸ್ ಘಟಕವು ಸರ್ವ ಸನ್ನದ್ಧವಾಗಿದೆ. ಹೊರ ರಾಜ್ಯಗಳಿಂದ ಬರುವ ವಾಹನಗಳನ್ನು ತಪಾಸಣೆ ಮಾಡಿ ನಗದು, ಚಿನ್ನಾಭರಣ, ಮದ್ಯ, ಬೆಲೆ ಬಾಳುವ ಗೃಹೋಪಯೋಗಿ ವಸ್ತುಗಳನ್ನು ಸಾಗಣೆ ಮಾಡದಂತೆ ಪರಿಶೀಲಿಸಲು ಸಿಬ್ಬಂದಿಗೆ ಸೂಚನೆ ನೀಡಲಾಗಿದೆ.

ಲೋಕಸಭಾ ಸಾರ್ವತ್ರಿಕ ಚುನಾವಣಾ ವೇಳಾಪಟ್ಟಿ ಪ್ರಕಟವಾಗುತ್ತಿದ್ದಂತೆಯೇ ಭಾರತ ಚುನಾವಣಾ ಆಯೋಗ ನೀಡುವ ಮಾರ್ಗಸೂಚಿಯಂತೆ ನೀತಿಸಂಹಿತೆಯನ್ನು ಸಮರ್ಪಕವಾಗಿ ಜಾರಿಗೆ ತಂದು ನ್ಯಾಯಸಮ್ಮತ, ಪಾರದರ್ಶಕ, ನಿರ್ಭೀತಿಯಿಂದ ಚುನಾವಣೆ ನಡೆಯಲು ಜಿಲ್ಲಾಡಳಿತ ಹಾಗೂ ಪೊಲೀಸ್ ಘಟಕಗಳು ಪೂರ್ಣ ಪ್ರಮಾಣದಲ್ಲಿ ತಯಾರಿ ನಡೆಸಿವೆ.

ನಾನು ಪ್ರಧಾನಿ ನರೇಂದ್ರ ಮೋದಿ ಭಕ್ತ, ಸಾಯೋವರೆಗೂ ಬಿಜೆಪಿ ಕಾರ್ಯಕರ್ತ...!

ಮೈಸೂರು–ಕೊಡಗು ಸಂಸದ ಪ್ರತಾಪ್ ಸಿಂಹ ಘೋಷಣೆ

ಮೈಸೂರು, ಮಾ.13(ಎಂಟಿವೈ)– ನಾನು ಪ್ರಧಾನಿ ನರೇಂದ್ರ ಮೋದಿ ಅವರ ಪರಮ ಭಕ್ತ. ಸಾಯೋವರೆಗೂ ಮೋದಿ ಭಕ್ತನಾಗಿ, ಬಿಜೆಪಿ ಕಾರ್ಯಕರ್ತನಾಗಿ ಇರುತ್ತೇನೆ ಹೊರತು ಪಕ್ಷೇತರನಾಗಿ ಸ್ಪರ್ಧೆ ಮಾಡುವ ಪ್ರಶ್ನೆಯೇ ಇಲ್ಲ ಎಂದು ಸಂಸದ ಪ್ರತಾಪ ಸಿಂಹ ಸ್ಪಷ್ಟಪಡಿಸಿದ್ದಾರೆ.



ಸುದ್ದಿಗಾರರೊಂದಿಗೆ ಸಂಸದ ಪ್ರತಾಪ ಸಿಂಹ ಮಾತನಾಡುತ್ತಿರುವುದು.

ಮೈಸೂರಲ್ಲಿ ಬುಧವಾರ ಪತ್ರಕರ್ತರೊಂದಿಗೆ ಮಾತನಾಡಿದ ಅವರು, 2014ರಿಂದ 10 ವರ್ಷ ಸಂಸದನಾಗಿ ಕೆಲಸ ಮಾಡಿದ್ದೇನೆ. ಹೆಮ್ಮೆಯ ಪ್ರಧಾನಿ, ಅವರು ಕಾಲಿಟ್ಟ ದಿನವೇ ಸಂಸತ್‌ಗೆ ನಾನು ಕಾಲಿಟ್ಟೆ ಇದಕ್ಕಾಗಿ ಪಿಎಂಗೆ ಧನ್ಯವಾದ ಅರ್ಪಿಸುತ್ತೇನೆ. ರಾಜಕೀಯ ಅಸ್ತಿತ್ವ ಕೊಟ್ಟಿದ್ದಕ್ಕೆ ಅಭಾರಿಯಾಗಿದ್ದೇನೆ. ಲೋಕಸಭಾ ಚುನಾವಣೆಯಲ್ಲಿ ಪ್ರಧಾನಿ ಕೈಗೊಳ್ಳುವ ನಿರ್ಧಾರಕ್ಕೆ ನಾನು ಬದ್ಧ. ಕಚೇರಿಯೊಳಗೆ ಇದ್ದ ನನ್ನನ್ನು ಎಂಪಿಯಾಗಿ ಪರಿಚಯಿಸಿದರು. ಈ ಹಿನ್ನೆಲೆಯಲ್ಲಿ ನನಗೆ ತೃಪ್ತಿಯಿದೆ. ಸಾಯುವವರೆಗೂ ರಾಜಕೀಯದಲ್ಲಿರಬೇಕೆಂಬ ಹಂಬಲವಿಲ್ಲ. ಈ ಬಾರಿ ಟಿಕೆಟ್ ಕೊಟ್ಟರೂ, ಕೊಡದಿದ್ದರೂ ಬಿಜೆಪಿ ಪರ ಕೆಲಸ ಮಾಡುತ್ತೇನೆ ಎಂದರು.

ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಪ್ರಶ್ನಾತೀತ ನಾಯಕ. ಅವರು ಇಲ್ಲದಿದ್ದರೆ ರಾಜ್ಯದಲ್ಲಿ ಬಿಜೆಪಿಯೇ ಇರುತ್ತಿರಲಿಲ್ಲ. ಕೇವಲ 2 ಸ್ಥಾನ ಗಳಿಸಿದ್ದ ಬಿಜೆಪಿಯನ್ನು ಏಕಾಂಗಿಯಾಗಿ ಕಟ್ಟಿ ಬೆಳೆಸಿದ್ದಾರೆ. ದೇಶದಲ್ಲಿ ಮೋದಿಯಂತೆ ರಾಜ್ಯದಲ್ಲಿ ಯಡಿಯೂರಪ್ಪ ಇದ್ದಾರೆ. ಯಡಿಯೂರಪ್ಪ ಕಟ್ಟಿ ಬೆಳೆಸಿದ ಪಕ್ಷದಿಂದಲೇ ನಾನು ಸಂಸದನಾಗಿ ಸೇವೆ ಸಲ್ಲಿಸಲು ಅವಕಾಶ ದೊರೆತಿದೆ ಎಂದು ತಿಳಿಸಿದರು.

ಪ್ರತಿಭಟಿಸದಂತೆ ಮನವಿ

ಅಭಿಮಾನಿಗಳು, ಕಾರ್ಯಕರ್ತರು ಪ್ರತಿಭಟನೆ ಮಾಡದಂತೆ ಸಾಮಾಜಿಕ ಜಾಲತಾಣದಲ್ಲಿ ಸಂಸದ ಪ್ರತಾಪ್ ಸಿಂಹ ಮನವಿ ಮಾಡಿದ್ದಾರೆ. ಮೋದಿ ಇಲ್ಲದೆ ನಾನೇನೂ ಇಲ್ಲ. ನನ್ನ ರಾಜಕೀಯ ಅಸ್ತಿತ್ವ ಮೋದಿಯವರಿಂದಲೇ. ಈ ಹಿನ್ನೆಲೆಯಲ್ಲಿ ಯಾರೂ ಪ್ರತಿಭಟನೆ ಮಾಡಬೇಡಿ. ನಾವೆಲ್ಲ ಒಂದೇ ಕುಟುಂಬದವರು ಮೋದಿಗಾಗಿ ಕೆಲಸ ಮಾಡೋಣ ಎಂದು ತಿಳಿಸಿದರು.

ಈಗ ಬಿಜೆಪಿಯಲ್ಲಿರುವವರು ಯಾರೂ ಮೂಲ ಬಿಜೆಪಿಗರಲ್ಲ, ನಮ್ಮ ತಂದೆ 1967ರಲ್ಲಿ ನಾಗಪುರದಲ್ಲಿ ಸಂಘದ ಸಭೆ ಮಾಡಿದ್ದವರು. ಹತ್ತು ವರ್ಷಗಳ ಕಾಲ ಪಂಚಾಯಿತಿ ಚೇರ್ಮನ್ ಆಗಿದ್ದವರು. ಅಂತಹ ಸಂಘದ ಶಿಸ್ತಿನ ಸಿಪಾಯಿ ಮಗನಾಗಿ ನಾನು ಬಿಜೆಪಿ ಪಕ್ಷದಲ್ಲಿದ್ದೇನೆ. ಈ ಹಿನ್ನೆಲೆಯಲ್ಲಿ ಟಿಕೆಟ್ ಸಿಗದಿದ್ದರೆ ಬೇಸರ ಪಟ್ಟುಕೊಳ್ಳಲ್ಲ. ಪಕ್ಷದ ತೀರ್ಮಾನಕ್ಕೆ ಬದ್ಧನಾಗಿರುತ್ತೇನೆ. ಟಿಕೆಟ್ ಸಿಗಲೀ, ಸಿಗದೇ ಇರಲೀ ನಾನು ಬಿಜೆಪಿಯಲ್ಲೇ ಇರುತ್ತೇನೆ. ಯಾವುದೇ ಕಾರಣಕ್ಕೂ ಪಕ್ಷೇತರ ಅಭ್ಯರ್ಥಿಯಾಗಿ ಕಣಕ್ಕಿಳಿಯುವುದಿಲ್ಲ. ಪಕ್ಷದ ಶಿಸ್ತಿನ ಸಿಪಾಯಿಯಂತೆ ಕೆಲಸ ಮಾಡುತ್ತೇನೆ ಎಂದರು.

ರಾಜ್ಯದ 28 ಸಂಸದರಲ್ಲಿ ಇಂತಹ ವ್ಯಕ್ತಿಗೆ ಟಿಕೆಟ್ ನೀಡಿ ಎಂದು ಎಲ್ಲೂ ಪ್ರತಿಭಟನೆ ಮಾಡುತ್ತಿಲ್ಲ. ಆದರೆ, ಮೈಸೂರು–ಕೊಡಗು ಜಿಲ್ಲೆಯಲ್ಲಿ ಪ್ರತಾಪ ಸಿಂಹಗೆ ಟಿಕೆಟ್ ನೀಡಿ ಎಂದು ಜನ ಒತ್ತಾಯಿಸುತ್ತಿದ್ದಾರೆ. ಎರಡೂ ಜಿಲ್ಲೆಗಳ ಜನ ನನಗೆ ಪ್ರೀತಿ ತೋರಿಸಿದ್ದಾರೆ. ಇದು ನನ್ನ ಮನಸ್ಸು ತುಂಬಿದೆ. ಇದರ ಮುಂದೆ ಇನ್ನೇನು ಬೇಕು ಎಂದು ಪ್ರಶ್ನಿಸಿದರು.

ಸೈದ್ಧಾಂತಿಕ ಭಿನ್ನಾಭಿಪ್ರಾಯ ಬಿಟ್ಟರೆ, ವೈಯಕ್ತಿಕವಾಗಿ ಗೌರವವಿದೆ

ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ಸೈದ್ಧಾಂತಿಕವಾಗಿ ಭಿನ್ನಾಭಿಪ್ರಾಯ ಹೊರತು ಪಡಿಸಿದರೆ, ವೈಯಕ್ತಿಕವಾಗಿ ಅವರ ಮೇಲೆ ಗೌರವ ಇದೆ. ಹೆಸರು ಕೆಡಿಸಿಕೊಂಡಿದ್ದಕ್ಕೆ ಪ್ರತಾಪ್ ಸಿಂಹಗೆ ಟಿಕೆಟ್ ಸಿಕ್ಕಿಲ್ಲ ಎಂದು ಹೇಳಿಕೆ ನೀಡಿರುವುದು ಸರಿಯಲ್ಲ. ಹಾಗಿದ್ದರೆ ಸಿದ್ಧರಾಮಯ್ಯ ಅವರು ಹೆಸರು ಕೆಡಿಸಿಕೊಂಡು 2018ರ ಚುನಾವಣೆಯಲ್ಲಿ ಸೋತರೇ?, ಹೆಸರು ಕೆಡಿಸಿಕೊಂಡು ಬಾದಾಮಿಯಿಂದ ಬಂದರೇ? ಎಷ್ಟು ವಿಧಾನಸಭೆ, ಲೋಕಸಭಾ ಚುನಾವಣೆಯಲ್ಲಿ ಅವರು ಸೋತಿಲ್ಲ ಒಬ್ಬ ಹಿರಿಯ ರಾಜಕಾರಣಿಯಾಗಿ ಹೀಗೆಲ್ಲ ಮಾತನಾಡಬಾರದು. ನಾನು ಮೈಸೂರಿಗನಾಗಿ ಸಿದ್ಧರಾಮಯ್ಯ ಅವರ ಬಗ್ಗೆ ನನಗೆ ಅಪಾರ ಗೌರವ, ಪ್ರೀತಿ ಇದೆ.

–ಪ್ರತಾಪ್ ಸಿಂಹ, ಸಂಸದ

5, 8, 9ನೇ ತರಗತಿ ಪಬ್ಲಿಕ್ ಪರೀಕ್ಷೆ ರದ್ದುಪಡಿಸಲು ಆಗ್ರಹಿಸಿ ಪ್ರತಿಭಟನೆ



ಪಬ್ಲಿಕ್ ಪರೀಕ್ಷೆ ರದ್ದಿಗೆ ಆಗ್ರಹಿಸಿ ಹಳೆ ಜಿಲ್ಲಾಧಿಕಾರಿ ಕಚೇರಿ ಮುಂಭಾಗ ಎಐಡಿಎಸ್‌ಓ ಸಂಘಟನೆಯಿಂದ ಬುಧವಾರ ಪ್ರತಿಭಟನೆ ನಡೆಸಲಾಯಿತು.

ಮೈಸೂರು, ಮಾ.13(ಜಿಎ)–ಎಐಡಿಎಸ್‌ಓ ವಿದ್ಯಾರ್ಥಿ ಸಂಘಟನೆ ನೇತೃತ್ವದಲ್ಲಿ 5,8,9ನೇ ತರಗತಿಯ ಪಬ್ಲಿಕ್ ಪರೀಕ್ಷೆಯನ್ನು ಪ್ರಸ್ತುತ ಶೈಕ್ಷಣಿಕ ವರ್ಷ ರದ್ದುಗೊಳಿಸಲು ಆಗ್ರಹಿಸಿ ಮೈಸೂರಿನ ಹಳೆ ಜಿಲ್ಲಾಧಿಕಾರಿ ಕಚೇರಿ ಬಳಿ ಬುಧವಾರ ಪ್ರತಿಭಟನೆ ನಡೆಸಲಾಯಿತು.

ಈ ವೇಳೆ ಜಿಲ್ಲಾ ಕಾರ್ಯದರ್ಶಿ ಚಂದ್ರಕಲಾ ಮಾತನಾಡಿ 5,8 ಹಾಗೂ 9ನೇ ತರಗತಿ ವಿದ್ಯಾರ್ಥಿಗಳ ಪಬ್ಲಿಕ್ ಪರೀಕ್ಷೆಗಳನ್ನು ರದ್ದುಗೊಳಿಸಬೇಕೆಂದು ಸುಪ್ರೀಂಕೋರ್ಟ್ ತೀರ್ಪು ಹೊರಡಿಸಿದೆ. ಆದರೆ, ಸರ್ವೋಚ್ಚ ನ್ಯಾಯಾಲಯ ತೀರ್ಪು ನೀಡಿದ ನಂತರವೂ ಪರೀಕ್ಷೆ ರದ್ದುಗೊಳಿಸುವ ಬದಲು ರಾಜ್ಯ ಸರ್ಕಾರ ಪರೀಕ್ಷೆಯನ್ನು ಮುಂದೂಡಿದೆ. ಇದರಿಂದ ರಾಜ್ಯದ ವಿದ್ಯಾರ್ಥಿಗಳು, ಶಿಕ್ಷಕರು ಹಾಗೂ ಪೋಷಕರು ತೀವ್ರ ಆತಂಕಕ್ಕೊಳಗಾಗಿದ್ದಾರೆ. ಈ ಹಿನ್ನೆಲೆ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಈ ಶೈಕ್ಷಣಿಕ ವರ್ಷದ ಪರೀಕ್ಷೆಗಳನ್ನು ರದ್ದುಪಡಿಸಿ ಮುಂದಿನ ವರ್ಷ ಪ್ರಜಾತಾಂತ್ರಿಕ ಪ್ರಕ್ರಿಯೆ ಮೂಲಕ ಪಬ್ಲಿಕ್ ಪರೀಕ್ಷೆಗಳನ್ನು ನಡೆಸುವ ಕುರಿತು ನಿರ್ಧಾರ ಕೈಗೊಳ್ಳಬೇಕೆಂದು ಆಗ್ರಹಿಸಿದರು. ಪ್ರತಿಭಟನೆಯಲ್ಲಿ ನಿತಿನ್, ಚಂದ್ರಿಕಾ, ಚಂದನಾ, ಹೇಮಲತಾ, ಅಂಜಲಿ, ದಿಶಾ, ಬೀರಪ್ಪ, ಮುತ್ತು ಮತ್ತಿತರರು ಪಾಲ್ಗೊಂಡಿದರು.


ನಾಳೆ ರೋಟರಿ ಕದಂಬ ರಂಗ ಪ್ರಶಸ್ತಿ ಪ್ರದಾನ

ಮೈಸೂರು,ಮಾ.13(ಜಿಎ)–ಕದಂಬ ರಂಗ ವೇದಿಕೆ ವತಿಯಿಂದ ಮಾ.15ರ ಸಂಜೆ 6.30ಕ್ಕೆ ಕಲಾಮಂದಿರದ ಕಿರು ರಂಗಮಂದಿರದಲ್ಲಿ ರೋಟರಿ ಕದಂಬ ರಂಗಪ್ರಶಸ್ತಿ ಪ್ರದಾನ ಸಮಾರಂಭ ಆಯೋಜಿಸಲಾಗಿದೆ. ಈ ವೇಳೆ ಬೆಂಗಳೂರಿನ ಪಯಣ ರಂಗ ತಂಡದ ವತಿಯಿಂದ 'ನಮ್ಗೇನ್ ಬೆಲೆನೇ ಇಲ್ವಾ' ಹಾಸ್ಯಮಯ ನಾಟಕ ಪ್ರದರ್ಶನ ಆಯೋಜಿಸಲಾಗಿದೆ ಎಂದು ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಕದಂಬ ರಂಗ ವೇದಿಕೆ ಅಧ್ಯಕ್ಷ ರಾಜಶೇಖರ ಕದಂಬ ತಿಳಿಸಿದರು. ಕಾರ್ಯಕ್ರಮದಲ್ಲಿ ಶೈಲಜಾ, ಗೆಜ್ಜೆಹೆಜ್ಜೆ ಉದಯಕುಮಾರ್ ಅವರಿಗೆ ಈ ಬಾರಿ ಪ್ರಶಸ್ತಿಗಳನ್ನು ಪ್ರದಾನ ಮಾಡಲಾಗುವುದು ಎಂದರು. ಸುದ್ದಿಗೋಷ್ಠಿಯಲ್ಲಿ ಎಂ.ಕೆ.ಶ್ರೀಧರ್, ಅರುಣ್ ಸೂರ್ಯ, ಪಿ.ಮನೋಜ್, ಹರಿಪ್ರಸಾದ್, ತಿಪ್ಪಣ್ಣ ಉಪಸ್ಥಿತರಿದ್ದರು.

ಗ್ಯಾರಂಟಿ ಸಮಾವೇಶವನ್ನು ಯಶಸ್ವಿಗೊಳಿಸಿ

ಮುಡಾ ಅಧ್ಯಕ್ಷ ಕೆ.ಮರಿಗೌಡ ಕಾರ್ಯಕರ್ತರಲ್ಲಿ ಮನವಿ

ಮೈಸೂರು, ಮಾ.13– ಮೈಸೂರಿನಲ್ಲಿ ಇದೇ ತಿಂಗಳು 15ರಂದು ನಡೆಯಲಿರುವ ಕಾಂಗ್ರೆಸ್ ಪಕ್ಷದ ಗ್ಯಾರಂಟಿ ಸಮಾವೇಶದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಕಾಂಗ್ರೆಸ್ ಕಾರ್ಯಕರ್ತರು, ಮಹಿಳೆಯರು ಭಾಗವಹಿಸಿ ಯಶಸ್ವಿಗೊಳಿಸಬೇಕೆಂದು ಮುಡಾ ಅಧ್ಯಕ್ಷ ಕೆ.ಮರೀಗೌಡ ಮನವಿ ಮಾಡಿದರು.



ಮೈಸೂರಿನ ಕಾಂಗ್ರೆಸ್ ಕಚೇರಿಯಲ್ಲಿ ನಡೆದ ಚಾಮುಂಡೇಶ್ವರಿ ಕ್ಷೇತ್ರದ ಕಾರ್ಯಕರ್ತರ ಗ್ಯಾರಂಟಿ ಪೂರ್ವಭಾವಿ ಸಭೆ ಹಾಗೂ ಇಲವಾಲ ಬ್ಲಾಕ್ ಮಹಿಳಾ ಕಾಂಗ್ರೆಸ್ ಸಮಿತಿ ನೂತನ ಅಧ್ಯಕ್ಷೆ ಭಾಗ್ಯ ಲೋಕೇಶ್ ಅವರ ಅಧಿಕಾರ ಸ್ವೀಕಾರ ಸಮಾರಂಭದಲ್ಲಿ ಮಾತನಾಡಿದ ಅವರು, ಚಾಮುಂಡೇಶ್ವರಿ ಕ್ಷೇತ್ರದ ಜನತೆಯ ಆಶೀರ್ವಾದದಿಂದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ನನ್ನ ಮೇಲೆ ವಿಶ್ವಾಸವಿಟ್ಟು ಮುಡಾ ಅಧ್ಯಕ್ಷ ಸ್ಥಾನ ನೀಡಿದ್ದಾರೆ. ಮುಖ್ಯಮಂತ್ರಿಗಳಿಗೆ ಹಾಗೂ ಕ್ಷೇತ್ರದ ಜನತೆಯ ಹೆಸರಿಗೆ ಚ್ಯುತಿ ಬಾರದಂತೆ ಕೆಲಸ ಮಾಡುವೆ ಎಂದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಅಂಬೇಡ್ಕರ್ ಅವರ ಸಂವಿಧಾನದ ಆಶಯದಂತೆ ಮಹಿಳಾ ಸಬಲೀಕರಣಕ್ಕೆ ಹೆಚ್ಚು ಒತ್ತು ಕೊಟ್ಟು ಗ್ಯಾರಂಟಿ ಯೋಜನೆಗಳಾದ ಗೃಹಲಕ್ಷ್ಮಿ, ಗೃಹಜ್ಯೋತಿ, ಶಕ್ತಿ, ಯುವನಿಧಿ, ಅನ್ನಭಾಗ್ಯ ಯೋಜನೆಗಳನ್ನು ಜಾತಿ, ಭೇದವಿಲ್ಲದೆ ಜಾರಿಗೆ ತಂದಿದ್ದರಿಂದ ಇಂದು ರಾಜ್ಯದ ಮಹಿಳೆಯರು, ಬಡವರು ನೆಮ್ಮದಿಯಾಗಿದ್ದಾರೆ. ಕಾಂಗ್ರೆಸ್ ಸರ್ಕಾರದ ಈ ಗ್ಯಾರಂಟಿ ಯೋಜನೆಗಳನ್ನು ಜನರಿಗೆ ತಿಳಿಸಬೇಕು. ಕೇಂದ್ರ ಸರ್ಕಾರ ಸುಳ್ಳು ಭರವಸೆಗಳನ್ನು ನೀಡುತ್ತಾ ದಿನನಿತ್ಯ ವಸ್ತುಗಳ ಬೆಲೆಗಳನ್ನು ಏರಿಸುತ್ತಾ ದೇಶವನ್ನು ದಿವಾಳಿಯತ್ತ ಕೊಂಡೊಯ್ಯುತ್ತಿದೆ. ಕೇಂದ್ರದ ಗ್ಯಾರಂಟಿ ಯೋಜನೆಗಳು ಜನರಿಗೆ ತಲುಪಿದೆಯೇ? ಎಂದು ಪ್ರಶ್ನಿಸಿದ ಅವರು, ಮುಂಬರುವ ಲೋಕಸಭಾ ಚುನಾವಣೆಯಲ್ಲಿ 20ಕ್ಕೂ ಹೆಚ್ಚು ಸ್ಥಾನಗಳನ್ನು ಕಾಂಗ್ರೆಸ್ ಗೆಲ್ಲಲ್ಲಿದ್ದು ಗೆಲುವು ಮೈಸೂರಿಂದಲೇ ಪ್ರಾರಂಭವಾಗಬೇಕು ಎಂದರು.

ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಕಾಂಗ್ರೆಸ್ ಪಕ್ಷ ಸೋತಿರಬಹುದು, 1983ರಿಂದಲೂ ಸಿದ್ದರಾಮಯ್ಯರವರ ಬೆಂಬಲಕ್ಕೆ ನಿಂತ 341 ಬೂತ್‌ಗಳ ಕಾರ್ಯಕರ್ತರು, ಮುಖಂಡರು ಹೆಚ್ಚಿನ ಸಂಖ್ಯೆಯಲ್ಲಿ ಬಂದು ಗ್ಯಾರಂಟಿ ಸಮಾವೇಶವನ್ನು ಯಶಸ್ವಿಗೊಳಿಸಬೇಕು ಎಂದರು.

ಸಭೆಯಲ್ಲಿ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಡಾ.ಬಿ.ಜೆ.ವಿಜಯ್‌ಕುಮಾರ್, ಜಿಲ್ಲಾ ಕಾಂಗ್ರೆಸ್ ಮಹಿಳಾ ಘಟಕದ ಜಿಲ್ಲಾ ಅಧ್ಯಕ್ಷೆ ಲತಾ ಸಿದ್ದಶೆಟ್ಟಿ ಟಿ.ಕೆ, ನಗರ ಅಧ್ಯಕ್ಷೆ ಪುಷ್ಪಲತಾ ಚಿಕ್ಕಣ್ಣ, ಕೆಪಿಸಿಸಿ ಸದಸ್ಯರಾದ ನರಸೇಗೌಡ, ನಾಗವಾಲ, ನರೇಂದ್ರ, ಮಾಜಿ ಮೇಯರ್‌ಗಳಾದ ಟಿ.ಬಿ.ಚಿಕ್ಕಣ್ಣ, ಮೋದಾಮಣಿ, ಜಿ.ಪಂ. ಮಾಜಿ ಸದಸ್ಯರಾದ ಲೇಖಾ ವೆಂಕಟೇಶ್, ಕೂರ್ಗಳ್ಳಿ ಮಹಾದೇವ, ಉದ್ಯಮಿ, ಗಂಧನಹಳ್ಳಿ ವೆಂಕಟೇಶ್, ಎಪಿಎಂಸಿ ಮಾಜಿ ಅಧ್ಯಕ್ಷ ಹೊಸಹುಂಡಿ ರಘು, ಶಿವಣ್ಣ, ಹಿನಕಲ್ ಹೊನ್ನಪ್ಪ, ಮಾರ್ಬಳ್ಳಿ ಕುಮಾರ್, ನಾಗರತ್ನ, ಹರೀಶ್ ಮೊಗಣ್ಣ, ಕೃಷ್ಣ ಕುಮಾರ ಸಾಗರ್, ಪ್ರೊ.ಶಿವಕುಮಾರ್, ಶಿವಪ್ರಸಾದ್, ಬ್ಲಾಕ್ ಕಾಂಗ್ರೆಸ್ ಬಿ.ಗುರುಸ್ವಾಮಿ, ಜೆ.ಸತೀಶ್‌ಕುಮಾರ್, ಜವರೇಗೌಡ, ಕೆಂಚಪ್ಪ, ರವಿ ಚಂದ್ರು, ಬಸವರಾಜು, ಆನಂದೂರು ರಾಮೇಗೌಡ, ಪ್ರಕಾಶ್, ರಾಜಶೇಖರ ಮೂರ್ತಿ, ಹಂಚ್ಯಾ ಸಣ್ಣಸ್ವಾಮಿ, ಮಹದೇವ ಹಾಜರಿದ್ದರು.

ನೀರಿನ ಸಮಸ್ಯೆಗೆ ತತ್ತರಿಸಿದ ಸಿಲಿಕಾನ್ ಸಿಟಿ: ಆದರೂ ನೀರು ನಿರ್ವಹಣೆಯಲ್ಲಿ ದೇಶದಲ್ಲೇ ಬೆಂಗಳೂರು ನಂ.2!

ಬೆಂಗಳೂರು: ಸಿಲಿಕಾನ್ ಸಿಟಿಯಲ್ಲಿ ನೀರಿನ ಸಮಸ್ಯೆ ತಲೆದೋರಿದ್ದು, ಆದರೂ, ಬಳಸಿದ ನೀರು ನಿರ್ವಹಣೆಯಲ್ಲಿ ಬೆಂಗಳೂರು ದೇಶದಲ್ಲೇ 2ನೇ ಸ್ಥಾನ ಪಡೆದು, ಗಮನ ಸೆಳೆದಿದೆ.

ಸಮೀಕ್ಷಾ ವರದಿಯು ಬಳಸಿದ ನೀರು ನಿರ್ವಹಣೆಯಲ್ಲಿ ಸೂರತ್ ದೇಶದಲ್ಲೇ ಮೊದಲ ಸ್ಥಾನ ಪಡೆದಿರುವುದು ಹಾಗೂ ಬೆಂಗಳೂರು 2ನೇ ಸ್ಥಾನದಲ್ಲಿರುವುದು ಕಂಡು ಬಂದಿದೆ. ಅಧ್ಯಯನದಲ್ಲಿ, 10 ರಾಜ್ಯಗಳ 503 ನಗರಗಳಲ್ಲಿ ಅರ್ಧಕ್ಕಿಂತ ಹೆಚ್ಚು 5ರಲ್ಲಿ 0.75 ಮತ್ತು 1.5ರ ನಡುವಿನ ಸ್ಕೋರ್ ಗಳಿಸಿವೆ. ಈ ನಗರಗಳು ನೀರಿನ ನಿರ್ವಹಣೆಯಲ್ಲಿ ವಿಫಲಗೊಂಡಿವೆ. ಇಲ್ಲಿ ಹೆಚ್ಚು ಸಮಗ್ರ ವಿಧಾನದ ಅಗತ್ಯವಿದೆ ಎಂದು ಅಧ್ಯಯನವು ಗಮನಿಸಿದೆ.

ಮೊದಲ ಎರಡು ರಾಜ್ಯಗಳಾದ ಹರಿಯಾಣ ಮತ್ತು ಕರ್ನಾಟಕ ಕ್ರಮವಾಗಿ 1.94 ಮತ್ತು 1.74 ಅಂಕ ಗಳಿಸಿವೆ. ಕೇವಲ ಎರಡು ನಗರಗಳು–ಸೂರತ್ ಮತ್ತು ಬೆಂಗಳೂರು–ಅತ್ಯುತ್ತಮ (3ರ ಮೇಲಿನ) ವಿಭಾಗದಲ್ಲಿವೆ. 20 ಹೆಚ್ಚು ರ್ಯಾಂಕ್‌ನ ನಗರಗಳಲ್ಲಿ ಒಂಬತ್ತು ಹರಿಯಾಣದಿಂದ ಬಂದವು. ಗುಜರಾತ್ ಮತ್ತು ಕರ್ನಾಟಕ ಇತರ ಉನ್ನತ–ಕಾರ್ಯನಿರ್ವಹಣೆಯ ರಾಜ್ಯಗಳಾಗಿವೆ. ಕ್ರಮವಾಗಿ 4 ಮತ್ತು 3 ನಗರಗಳು 20 ನಗರಗಳಲ್ಲಿ ಕಾಣಿಸಿಕೊಂಡಿವೆ.



2023–24ನೇ ಸಾಲಿನ ಅಖಿಲ ಭಾರತ ಅಂತರ ವಿಶ್ವವಿದ್ಯಾನಿಲಯ ಪುರುಷರ ನೆಟ್‌ಬಾಲ್ ಪಂದ್ಯಾವಳಿ ಮಾ.12ರಿಂದ 15ರವರೆಗೆ ತುಮಕೂರಿನ ಸಿದ್ಧಾರ್ಥ ಅಕಾಡೆಮಿ ಆಫ್ ಹೈಯರ್ ಎಜುಕೇಷನ್ ಸಂಸ್ಥೆಯಲ್ಲಿ ನಡೆಯಲಿದೆ. ಪಂದ್ಯಾವಳಿಗೆ ಮೈಸೂರು ವಿವಿ ಪುರುಷರ ನೆಟ್‌ಬಾಲ್ ತಂಡ ಭಾಗವಹಿಸಿದೆ. ಚಿತ್ರದಲ್ಲಿ (ನಿಂತಿರುವವರು): ಮನೋಜ್, ಅಭಿನಾಯಕ, ಸುಜನ್, ಅಶ್ವತ್‌ನಾಯಕ, ಮಹದೇವನಾಯಕ, ಅಪ್ಪು, ದಿಲೀಪ್, ದರ್ಶನ್, ಅಭಿ, ಚೇತನ್, ಚಂದು (ಕುಳಿತಿರುವವರು): ಮಹದೇವಪ್ರಸಾದ್ (ತರಬೇತುದಾರರು), ಡಾ.ಸಿ.ವೆಂಕಟೇಶ್, ನಿರ್ದೇಶಕರು, ಲೋಹಿತ್ (ವ್ಯವಸ್ಥಾಪಕರು), ದಿನೇಶ್ (ನಾಯಕ) ಅವರನ್ನು ಕಾಣಬಹುದು.

2.10 ಕೋಟಿ ರೂ. ವೆಚ್ಚದಲ್ಲಿ ಓವರ್‌ಹೆಡ್ ಟ್ಯಾಂಕ್ ನಿರ್ಮಾಣಕ್ಕೆ ಗುದ್ದಲಿ ಪೂಜೆ

ಸಾರ್ವಜನಿಕರು ನೀರು ಮಿತವಾಗಿ ಬಳಸಬೇಕು: ಶಾಸಕ ಹರೀಶ್‌ಗೌಡ ಮನವಿ



ಮೈಸೂರು, ಮಾ. 13– ಮೈಸೂರು ನಗರದ ವಾರ್ಡ್ ನಂ.23, 42 ಮತ್ತು 50ರ ಕಾಕರವಾಡಿ, ಬೆಸ್ತರಗೇರಿ, ಕುಂಬಾರ ಗೇರಿ, ಕುರುಬಗೇರಿ, ಗೊಲ್ಲಗೇರಿ, ಗೀತಾ ರಸ್ತೆ, ಕೆ.ಜಿ.ಕೊಪ್ಪಲ್, ಹಳೆ ಬಂಡಿಕೇರಿ, ಗಾಣಿಗರ ಬೀದಿ, ಬೆಳ್ಳಿಕಟ್ಟೆ ಹಾಗೂ ದೇವರಾಜ ಮೊಹಲ್ಲಾ ಭಾಗದ ಪ್ರದೇಶಕ್ಕೆ ಮೂಡಾ ಕಚೇರಿ ಪಕ್ಕದಲ್ಲಿ 10 ಲಕ್ಷ ಲೀ. ಸಾಮರ್ಥ್ಯದ ಮೇಲ್ಮಟ್ಟದ ಜಲ ಸಂಗ್ರಹಗಾರವನ್ನು ನಿರ್ಮಿಸಿ, ರಾಮಸ್ವಾಮಿ ವೃತ್ತದ ಸಮೀಪ ಲಿಂಕಿಂಗ್ ಮಾಡುವ ಅಂದಾಜು 2.10 ಕೋಟಿ ರೂ. ಮೊತ್ತದ ಕಾಮಗಾರಿಗೆ ಶಾಸಕ ಕೆ.ಹರೀಶ್ ಗೌಡ ಗುದ್ದಲಿ ಪೂಜೆ ನೆರವೇರಿಸಿದರು.

ನಂತರ ಮಾತನಾಡಿದ ಅವರು, ಚಾಮರಾಜ ವಿಧಾನಸಭಾ ಕ್ಷೇತ್ರದಲ್ಲಿ ಮನೆ ಮನೆಗೆ ಕುಡಿಯುವ ನೀರಿನ ಪೂರೈಕೆ ದೃಷ್ಟಿಯಿಂದ 2.10 ಕೋಟಿ ವೆಚ್ಚದಲ್ಲಿ ಓವರ್ ಹೆಡ್ ಟ್ಯಾಂಕ್ ನಿರ್ಮಿಸಲಾಗುತ್ತಿದೆ. ಕುರುಬರ ಬೀದಿ, ಗೊಲ್ಲಗೇರಿ, ಸೋನಾರ್ ಬೀದಿ, ಅಗಸಗೇರಿ, ಗೀತಾ ರಸ್ತೆ ಹಾಗೂ ಕೆ.ಜಿ.ಕೊಪ್ಪಲು ಬಡಾವಣೆಗಳಿಗೆ ಕುಡಿಯುವ ನೀರು ಪೂರೈಕೆಗೆ ಇದು ಸಹಕಾರಿಯಾಗಲಿದೆ. ಮೈಸೂರು ನಗರಕ್ಕೆ ಇಲ್ಲಿವರೆಗೂ ನೀರಿನ ತೊಂದರೆ ಆಗಿಲ್ಲ. ಮುಂಜಾಗ್ರತಾ ಕ್ರಮವಾಗಿ ಜಿಲ್ಲಾಧಿಕಾರಿ, ಪಾಲಿಕೆ ಆಯುಕ್ತರು, ವಾಣಿ ವಿಲಾಸ ನೀರು ಸರಬರಾಜು ಮಂಡಳಿ ತಂಡ ರಚಿಸಿ, ಸಹಾಯವಾಣಿ ಸಹ ತೆರೆಯಲಾಗಿದೆ. ಸಾರ್ವಜನಿಕರು ಮಿತವಾಗಿ ನೀರು ಬಳಸಬೇಕು. ಮುಂದಿನ 2 ತಿಂಗಳ ಬಳಿಕ ಉತ್ತಮ ಮಳೆಯಾಗುವ ನಿರೀಕ್ಷೆಯಿದೆ ಎಂದರು. ಕಂಟ್ರಾಕ್ಟರ್ ರಮೇಶ್, ಪಾಲಿಕೆ ಇಇ ನಾಗರಾಜ್, ಎಇಇ ಧನುಷ್, ಪ್ರಶಾಂತ್ ಇದ್ದರು.

ಪ್ರತಾಪ್ ಸಿಂಹ ಪರ ಅವರ ಅಭಿಮಾನಿಗಳು ಬೀದಿಗಿಳಿದು ಹೋರಾಟ

ಮೈಸೂರು, ಮಾ.13(ಜಿಎ)– ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಸಂಸದ ಪ್ರತಾಪಸಿಂಹ ಅವರಿಗೆ ಈ ಬಾರಿಯೂ ಟಿಕೆಟ್ ನೀಡಬೇಕೆಂದು ಬಿಜೆಪಿ ವರಿಷ್ಠರನ್ನು ಒತ್ತಾಯಿಸಿ ಅವರ ಅಭಿಮಾನಿಗಳು ಮೈಸೂರಿನ ಹಿನಕಲ್ ಫ್ಲೈ ಓವರ್ ಬಳಿ ಪ್ರತಿಭಟನೆ ನಡೆಸಿದರು.

ಈ ಬಾರಿಯ ಚುನಾವಣೆಯಲ್ಲಿ ಪ್ರತಾಪ್‌ಸಿಂಹ ಅವರಿಗೆ ಟಿಕೆಟ್ ಕೈತಪ್ಪಲಿದೆ ಎಂಬ ಬೆಳವಣಿಗೆ ಹಿನ್ನೆಲೆಯಲ್ಲಿ 'ದೇಶಕ್ಕಾಗಿ ಮೋದಿ, ಮೈಸೂರಿಗೆ ಪ್ರತಾಪ್‌ಸಿಂಹ' ಘೋಷವಾಕ್ಯದೊಂದಿಗೆ ಇಂದು ಬೆಳಗ್ಗೆ ಫ್ಲೈ ಓವರ್ ಬಳಿ ಜಮಾಯಿಸಿದ ನೂರಾರು ಅಭಿಮಾನಿಗಳು ಘೋಷಣೆಗಳನ್ನು ಕೂಗಿದರು.

ಬಡವರ ಮಕ್ಕಳು ಬೆಳೆಯಬಾರದಾ? ಮೈಸೂರು–ಬೆಂಗಳೂರು ಹೈವೇ ಮಾಡಿದ್ದಕ್ಕಾಗಿ ಟಿಕೆಟ್ ಇಲ್ವಾ? ಕಾಂಗ್ರೆಸ್ಸಿಗೆ ಟಕ್ಕರ್ ಕೊಟ್ಟಿದ್ದಕ್ಕೆ ಟಿಕೆಟ್ ಇಲ್ವಾ? ಟಿಪ್ಪು ರೈಲಿಗೆ ಒಡೆಯರ್ ಹೆಸರು ಇಟ್ಟಿದ್ದಕ್ಕೆ ಟಿಕೆಟ್ ಇಲ್ವಾ? ಅಭಿವೃದ್ಧಿ ಕೆಲಸ ಮಾಡಿದ್ದಕ್ಕೆ ಟಿಕೆಟ್ ಇಲ್ವಾ? ಒಕ್ಕಲಿಗ ಎನ್ನುವ ಕಾರಣಕ್ಕೆ ಟಿಕೆಟ್ ಕೊಡಲ್ವಾ? ಹಿಂದುತ್ವದ ಪರವಾಗಿ ಧ್ವನಿ ಎತ್ತುವ ಸಂಸದರಿಗೆ ಟಿಕೆಟ್ ಕೊಡಬೇಕು. ಯದುವೀರ್ ಬೇಡ, ಪ್ರತಾಪ್ ಸಿಂಹ ಬೇಕು ಎಂಬ ಫಲಕಗಳನ್ನು ಹಿಡಿದು ಪ್ರತಿಭಟನೆ ನಡೆಸಿದ ಅಭಿಮಾನಿಗಳು, ದೇಶಕ್ಕೆ ಮೋದಿ, ಮೈಸೂರಿಗೆ ಪ್ರತಾಪ್ ಸಿಂಹ ಎಂದು ಘೋಷಣೆಗಳನ್ನು ಕೂಗಿದರು.

ಪ್ರತಿಭಟನೆಯಲ್ಲಿ ವಿದ್ಯಾರ್ಥಿಗಳು ಬೈಕ್‌ಗಳಲ್ಲಿ 'ವಿ ಸ್ಟ್ಯಾಂಡ್ ವಿತ್ ಪ್ರತಾಪ್ ಸಿಂಹ' ಭಿತ್ತಿಫಲಕಗಳನ್ನು ಹಿಡಿದು ನಗರದ ವಿವಿಧ ಭಾಗಗಳಿಂದ ಆಗಮಿಸಿದರು. ಹಾಗೇ ಬಿಜೆಪಿ ಮತ್ತು ಜೆಡಿಎಸ್ ಕಾರ್ಯಕರ್ತರು ಪ್ರತಿಭಟನೆಯಲ್ಲಿ ಭಾಗಿಯಾಗಿ ಪ್ರತಾಪ್ ಸಿಂಹರಿಗೆ ಲೋಕಸಭಾ ಚುನಾವಣೆಯಲ್ಲಿ ಸ್ಪರ್ಧಿಸಲು ಬಿಜೆಪಿ ಟಿಕೆಟ್ ನೀಡಬೇಕೆಂದು ಆಗ್ರಹಿಸಿದರು.



ಲೋಕಸಭಾ ಚುನಾವಣೆಯಲ್ಲಿ ಸ್ಪರ್ಧಿಸಲು ಸಂಸದ ಪ್ರತಾಪ್ ಸಿಂಹ ಅವರಿಗೆ ಟಿಕೆಟ್ ನೀಡುವಂತೆ ಆಗ್ರಹಿಸಿ ಬುಧವಾರ ಬೆಳಗ್ಗೆ ಮೈಸೂರಿನ ಹಿನಕಲ್ ಫ್ಲೈ ಓವರ್ ಬಳಿ ಅವರ ನೂರಾರು ಮಂದಿ ಅಭಿಮಾನಿಗಳು ಪ್ರತಿಭಟನೆ ನಡೆಸಿದರು.

ಮೈಸೂರು–ಬೆಂಗಳೂರು ರಸ್ತೆಯ ಕೆಂಪೇಗೌಡ ವೃತ್ತದ(ಮಣಿಪಾಲ್ ಆಸ್ಪತ್ರೆ ಜಂಕ್ಷನ್) ಬಳಿ ಪ್ರತಿಭಟನೆ ಮಾಡಲು ಅಭಿಮಾನಿಗಳು ಸಿದ್ಧತೆ ನಡೆಸಿದರು. ಆದರೆ, ಈ ರಸ್ತೆಯಲ್ಲಿ ವಾಹನದಟ್ಟಣೆ ಹೆಚ್ಚಿರುವುದರಿಂದ ಮುನ್ನೆಚ್ಚರಿಕೆ ಕ್ರಮವಾಗಿ ಮೈಸೂರು ನಗರ ಪೊಲೀಸ್ ಆಯುಕ್ತ ಬಿ.ರಮೇಶ್ ಅವರು ಪ್ರತಿಭಟನೆ ನಡೆಸಲು ಅನುಮತಿ ನೀಡಲಿಲ್ಲ. ನಂತರ ಹಿನಕಲ್ ಫ್ಲೈ ಓವರ್ ಬಳಿ ಪ್ರತಿಭಟನೆಗೆ ಅನುಮತಿ ನೀಡಲಾಯಿತು.

ಪ್ರತಾಪ್‌ಸಿಂಹ ಸಂಸದರಾಗಿ ಕಳೆದ 10 ವರ್ಷಗಳಿಂದ ಉತ್ತಮ ಕಾರ್ಯ ಮಾಡಿದ್ದಾರೆ. ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ಹೈವೇ, ಮೈಸೂರು ವಿಮಾನ ನಿಲ್ದಾಣ, ರೈಲ್ವೆ ನಿಲ್ದಾಣ ಅಭಿವೃದ್ಧಿ, ರಿಂಗ್ ರಸ್ತೆ ಸೇರಿದಂತೆ ಹಲವಾರು ಅಭಿವೃದ್ಧಿ ಕಾರ್ಯ ಮಾಡಿದ್ದಾರೆ. ಇಂತಹ ವ್ಯಕ್ತಿಗೆ ಈ ಬಾರಿ ಟಿಕೆಟ್ ಸಿಗುವುದಿಲ್ಲ ಎಂಬ ವಿಚಾರ ಸರಿಯಲ್ಲ. ಅವರಂತೆ ಬೇರೆ ಯಾವ ಸಂಸದರೂ ಕೆಲಸ ಮಾಡಿಲ್ಲ. ಕೇಂದ್ರದಿಂದ ಹೆಚ್ಚಿನ ಅನುದಾನ ತಂದು ಕ್ಷೇತ್ರದ ಅಭಿವೃದ್ಧಿ ಮಾಡಿದ್ದಾರೆ. ಕೂಡಲೇ ಬಿಜೆಪಿ ಹೈಕಮಾಂಡ್ ಈ ಬಾರಿಯೂ ಪ್ರತಾಪ್ ಸಿಂಹ ಅವರಿಗೆ ಟಿಕೆಟ್ ನೀಡ ಬೇಕು. ಯಾವುದೇ ಕಾರಣಕ್ಕೂ ಬೇರೆ ಯವರಿಗೆ ಟಿಕೆಟ್ ನೀಡಬಾರದು. ಒಂದು ವೇಳೆ ಪ್ರತಾಪ್‌ಸಿಂಹ ಅವರಿಗೆ ಟಿಕೆಟ್ ನೀಡದಿದ್ದರೆ ಪ್ರಬಲ ಸಮುದಾಯ ತನ್ನದೇ ನಿರ್ಣಯ ಕೈಗೊಳ್ಳಲಿದೆ ಎಂದು ಎಚ್ಚರಿಕೆ ನೀಡಿದರು.

ಪ್ರತಿಭಟನೆ ಹಿನ್ನೆಲೆಯಲ್ಲಿ ಕೆಲಕಾಲ ರಿಂಗ್ ರಸ್ತೆಯಲ್ಲಿ ವಾಹನ ಸಂಚಾರ ಅಸ್ತವ್ಯಸ್ತವಾಗಿ ವಾಹನ ಸವಾರರು ಪರದಾಡುವ ಸ್ಥಿತಿ ನಿರ್ಮಾಣ ಉಂಟಾಯಿತು. ಮುನ್ನೆಚ್ಚರಿಕಾ ಕ್ರಮವಾಗಿ ಬಿಗಿ ಪೊಲೀಸ್ ಬಂದೋಬಸ್ತ್ ಕೈಗೊಳ್ಳಲಾಗಿತ್ತು.

ಪ್ರತಿಭಟನೆಯಲ್ಲಿ ಒಕ್ಕಲಿಗರ ಸಂಘದ ಅಧ್ಯಕ್ಷ ಮರಿಸ್ವಾಮಿ, ಸಂಘದ ನಿರ್ದೇಶಕ ಗಿರೀಶ್ ಗೌಡ, ರಾಜ್ಯ ನಿರ್ದೇಶಕ ಮಂಜೇಗೌಡ, ವಿವೇಕಾನಂದ ಪ್ರತಿಷ್ಠಾನದ ವಿವೇಕ್ ವಂಶಿ, ವಕೀಲ ಹೇಮಂತ್‌ಕುಮಾರ್, ಮಲ್ಟಿ ಲಿಂಕ್‌ನ ಮುಖ್ಯಸ್ಥ ಕುಲಕರ್ಣಿ, ನಿವೃತ್ತ ಪೊಲೀಸ್ ಅಧಿಕಾರಿ ಬಿ.ವಿ.ರಮೇಶ್, ನಗರಪಾಲಿಕೆ ಮಾಜಿ ಸದಸ್ಯ ಕಿರಣ್ ಮಾದೇಗೌಡ, ಹುಣಸೂರು ತಾಲೂಕು ಒಕ್ಕಲಿಗರ ಸಂಘದ ಅಧ್ಯಕ್ಷ ನಾಗಣ್ಣ, ಚಾಮರಾಜ ಕ್ಷೇತ್ರದ ಒಕ್ಕಲಿಗ ಸಂಘದ ಪ್ರಧಾನ ಕಾರ್ಯದರ್ಶಿ ರಮೇಶ್‌ಗೌಡ, ಜಿಲ್ಲಾ ಕಾರ್ಯದರ್ಶಿ ಸುನಿಲ್‌ಕುಮಾರ್, ಹನುಮ ಜಯಂತಿ ಸಮಿತಿ ಅಧ್ಯಕ್ಷ ಪಿರಿಯಾಪಟ್ಟಣ ಪ್ರಸಾದ್, ಯುವ ಮೋರ್ಚಾ ಅಧ್ಯಕ್ಷ ಪ್ರವೀಣ್ ಪಿರಿಯಾಪಟ್ಟಣ, ಮಹಾಲಕ್ಷ್ಮಿ ಸ್ವೀಟ್ ಮಹೇಶ್, ಉದ್ಯಮಿ ಪ್ರಶಾಂತ್ ಗೋಕುಲಂ, ಹಿರಿಯ ನಾಯಕ ಎಚ್.ಸಿ.ಮೃತ್ಯುಂಜಯ, ಅಶೋಕ್, ಲೀಲಾ ಶಣೈ, ವಿಜಯನಗರ ಶಾಲಿನಿ, ನೇಹಾ, ವಸಂತ್ ಸೇರಿದಂತೆ ನೂರಾರು ಕಾರ್ಯಕರ್ತರು ಜಮಾವಣೆಗೊಂಡಿದ್ದರು.

ಕಾಡಾನೆ ದಾಳಿಗೆ ಕಾರ್ಮಿಕ ಮಹಿಳೆ ಬಲಿ

ಅರಣ್ಯ ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡ ಕಾರ್ಮಿಕರು

ಸಿದ್ದಾಪುರ, ಮಾ.13–ಕಾಫಿ ತೋಟದಲ್ಲಿ ಕೆಲಸ ಮಾಡುತ್ತಿದ್ದ ಕಾರ್ಮಿಕ ಮಹಿಳೆ ಕಾಡಾನೆ ದಾಳಿಯಿಂದ ಮೃತಪಟ್ಟ ಘಟನೆ ವಿರಾಜಪೇಟೆ ತಾಲೂಕಿನ ಪಾಲಿಬೆಟ್ಟ ಸಮೀಪದ ಚೆನ್ನಂಗಿ ಅಬ್ಬೂರು ಬಳಿಯ ಬೀಚ್ ಲ್ಯಾಂಡ್ ಕಾಫಿ ತೋಟದಲ್ಲಿ ಬುಧವಾರ ನಡೆದಿದೆ.

ಅಸ್ಸಾಂ ಮೂಲದ ಅಜಬಾನು (39) ಕಾಡಾನೆ ದಾಳಿಗೆ ಬಲಿಯಾದ ಕಾರ್ಮಿಕ ಮಹಿಳೆ. ಮಧ್ಯಾಹ್ನ 2 ಗಂಟೆಯಲ್ಲಿ ತೋಟದಲ್ಲಿ ಅಜಬಾನು ಕಾರ್ಮಿಕರೊಂದಿಗೆ ಕೆಲಸ ಮಾಡುತ್ತಿದ್ದರು. ಈ ವೇಳೆ ಕಾಡಾನೆ ಏಕಾಏಕಿ ದಾಳಿ ನಡೆಸಿದೆ. ಈ ವೇಳೆ ಕಿರುಚಾಟದಿಂದ ಅಲ್ಲೇ ಇದ್ದ ಕಾರ್ಮಿಕರು ತಕ್ಷಣ ಓಡಿ ಬಂದು ಆನೆಯನ್ನು ಓಡಿಸಿದ್ದಾರೆ. ಗಂಭೀರವಾಗಿ ಗಾಯಗೊಂಡಿದ್ದ ಅಜಬಾನುನನ್ನು ತಕ್ಷಣ ಪಾಲಿಬೆಟ್ಟದ ಸರ್ಕಾರಿ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಆದರೆ, ಕ್ಷಣಾರ್ಧದಲ್ಲಿ ಮೃತಪಟ್ಟಿದ್ದಾರೆ.

ವಿಷಯ ತಿಳಿಯುತ್ತಿದ್ದಂತೆ ಸುತ್ತಮುತ್ತಲಿನ ತೋಟದ ಕಾರ್ಮಿಕರು ಪಾಲಿಬೆಟ್ಟ ಆಸ್ಪತ್ರೆ ಮುಂದೆ ಜಮಾಯಿಸಿ, ಅರಣ್ಯ ಇಲಾಖೆ ಅಧಿಕಾರಿ ಗಳನ್ನು ತರಾಟೆಗೆ ತೆಗೆದುಕೊಂಡ ಪ್ರತಿಭಟನೆ ನಡೆಸಿದರು. ಶಾಶ್ವತವಾಗಿ ಕಾಡಾನೆ ಹಾವಳಿ ಯನ್ನು ತಡೆಗಟ್ಟಬೇಕೆಂದು ಒತ್ತಾಯಿಸಿದರು.

ಮೃತ ಕುಟುಂಬಕ್ಕೆ ತೋಟದ ಮಾಲೀಕರು 3 ಲಕ್ಷ ರೂ. ಹಾಗೂ ಅರಣ್ಯ ಇಲಾಖೆಯಿಂದ 15 ಲಕ್ಷ ರೂ. ಪರಿಹಾರ ನೀಡುವ ಭರವಸೆ ನೀಡಿದ ಹಿನ್ನೆಲೆಯಲ್ಲಿ ಪ್ರತಿಭಟನೆ ಯನ್ನು ಹಿಂಪಡೆಯಲಾಯಿತು. ನಂತರ ಸಿದ್ದಾಪುರ ಆಸ್ಪತ್ರೆಯ ಶವಾಗಾರದಲ್ಲಿ ಮರಣೋತ್ತರ ಪರೀಕ್ಷೆ ನಡೆಸಿ ಶವವನ್ನು ಕುಟುಂಬಸ್ಥರಿಗೆ ನೀಡಲಾಯಿತು.

ಸಿದ್ದಾಪುರ ಆಸ್ಪತ್ರೆಗೆ ಭೇಟಿ ನೀಡಿದ ಶಾಸಕ ಎ.ಎಸ್.ಪೊನ್ನಣ್ಣ, ಮೃತ ಕಾರ್ಮಿಕ ಮಹಿಳೆಯ ಕುಟುಂಬಕ್ಕೆ ಸಾಂತ್ವನ ಹೇಳಿ ಅರಣ್ಯ ಇಲಾಖೆಯ ಪರಿಹಾರದ ಚೆಕ್ ವಿತರಿಸಿದರು. ವಿರಾಜಪೇಟೆ ಡಿಎಫ್‌ಓ ಶರಣ ಬಸಪ್ಪ, ಎಸಿಎಫ್ ಗೋಪಾಲ್, ಆರ್‌ಎಫ್‌ಓ ದೇವಯ್ಯ, ಗಂಗಾಧರ, ಉಮಶಂಕರ್, ಡಿಆರ್‌ಎಫ್‌ಓ ಶ್ರೀನಿವಾಸ್, ಚೆನ್ನವೀರೇಶ್, ಸಿದ್ದಾಪುರ ಪೊಲೀಸ್ ಠಾಣಾಧಿಕಾರಿ ರಾಘವೇಂದ್ರ, ಜಿಪಂ ಮಾಜಿ ಸದಸ್ಯ ಗಣೇಶ್, ಗ್ರಾಪಂ ಸದಸ್ಯ ನಾಸಿರ್, ಸ್ಥಳೀಯ ರಾದ ಕಾಳಪ್ಪ ಅಬ್ದುಲ್ ರೆಹಮಾನ್ ಅಬೂಬಕ್ಕರ್, ಮುನೀರ್, ಪ್ರವೀಣ್, ಮಂಜು, ಮಣಿಕಂಠ, ಸಜಿ, ಪವನ್, ಪ್ರಸಾದ್, ಮೈಕಲ್, ಅಬ್ದುಲ್ ರಶೀದ್ ಮತ್ತಿತರರು ಹಾಜರಿದ್ದರು.



ಪಾಲಿಬೆಟ್ಟ ಸಮೀಪದ ಚೆನ್ನಂಗಿ ಅಬ್ಬೂರು ಬಳಿಯ ಬೀಚ್ ಲ್ಯಾಂಡ್ ಕಾಫಿ ತೋಟದಲ್ಲಿ ಕಾಡಾನೆ ದಾಳಿಯಿಂದ ಮೃತಪಟ್ಟ ಕಾರ್ಮಿಕ ಮಹಿಳೆಯ ಶವ.

ಶಿಕ್ಷಕರ ಕೆಲಸ ಪುಣ್ಯ ಕಾರ್ಯ: ಶಾಸಕ ಪೊನ್ನಣ್ಣ

ವಿರಾಜಪೇಟೆ, ಮಾ.13–ಶಿಕ್ಷಕರ ಕೆಲಸ ಪುಣ್ಯದ ಕಾರ್ಯವಾಗಿದ್ದು, ಸಮಾಜದಲ್ಲಿ ತಪ್ಪುಗಳನ್ನು ತಿದ್ದಿ ದಾರಿ ತೋರಿಸುವಂತ ಕೆಲಸವನ್ನು ಶಿಕ್ಷಕರು ಮಾಡಬೇಕು ಎಂದು ಶಾಸಕ ಎ.ಎಸ್.ಪೊನ್ನಣ್ಣ ಹೇಳಿದರು.

ನಗರದ ಕೊಡವ ಸಮಾಜ ಸಭಾಂಗಣ ದಲ್ಲಿ ಆಯೋಜಿಸಿದ್ದ ಕೊಡಗು ಉಪಾಧ್ಯಾಯರ ಸಹಕಾರ ಸ್ಟೋರ್ಸ್ ಮತ್ತು ಮುದ್ರಣಾಲಯ ಸಂಘದ ಶತಮಾನೋತ್ಸವ ಉದ್ಘಾಟಿಸಿ ಮಾತನಾಡಿದ ಅವರು, ಶಿಕ್ಷಕರಿಂದ ಉತ್ತಮ ಸಮಾಜ ನಿರ್ಮಾಣವಾಗಬೇಕು. ರಾಜ್ಯದಲ್ಲಿ ಸಹಕಾರಿ ಸಂಸ್ಥೆಗಳು ಅತಿ ಹೆಚ್ಚು ಇರುವ ಜಿಲ್ಲೆ ಕೊಡಗು. ಸಹಕಾರಿ ಸಂಸ್ಥೆಗಳಿಗೆ ತನ್ನದೇ ಜವಾಬ್ದಾರಿ ಇದ್ದು, ಸರ್ಕಾರ ನ್ಯೂನ್ಯತೆಗಳನ್ನು ಸರಿಪಡಿಸುವ ಮೂಲಕ ಜನಸಾಮಾನ್ಯರಿಗೆ ಸ್ಪಂದಿಸುತ್ತಿದೆ. ಜಿಲ್ಲೆಯಲ್ಲಿ ಉಪಾಧ್ಯಾಯರ ಸಂಘ ಉತ್ತಮವಾಗಿ ಕಾರ್ಯ ನಿರ್ವಹಿಸುತ್ತಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಸ್ಮರಣ ಸಂಚಿಕೆ ಬಿಡುಗಡೆಗೊಳಿಸಿ ಮಾತನಾಡಿದ ಅರಮೇರಿ ಕಳಂಚೇರಿ ಮಠದ ಶ್ರೀ ಶಾಂತಮಲ್ಲಿಕಾರ್ಜುನಸ್ವಾಮೀಜಿ, ಹಿಂದೆ ಅಪೇಕ್ಷೆಪಟ್ಟು ಶಿಕ್ಷಕ ವೃತ್ತಿಗೆ ಸೇರುತ್ತಿದ್ದರು. ಗ್ರಾಮೀಣ ಪ್ರದೇಶದಲ್ಲಿ ಶಿಕ್ಷಕರನ್ನು ಕಂಡರೆ ಗೌರವವಿತ್ತು. ಶಿಕ್ಷಣ ಕ್ಷೇತ್ರದಲ್ಲಿ ನಮ್ಮನ್ನು ನಾವು ತೊಡಗಿಸಿಕೊಳ್ಳಬೇಕು. ಶಿಕ್ಷಕರು ಮಕ್ಕಳ ಮನಸನ್ನು ಅರಿತುಕೊಂಡು ಮಕ್ಕಳಿಗೆ ಪ್ರಾಥಮಿಕವಾಗಿ ಆತ್ಮಸ್ಥೈರ್ಯ ತುಂಬುವಂತ ಶಿಕ್ಷಣ ನೀಡಬೇಕು. ಮನುಷ್ಯ 70–80 ವರ್ಷಗಳಲ್ಲಿ ದುರ್ಬಲನಾಗುತ್ತಾನೆ. ಆದರೆ, ಸಂಘ ಸಂಸ್ಥೆಗಳು 100 ವರ್ಷ ಪೂರೈಸಿದರೆ ಮತ್ತಷ್ಟು ಬೆಳೆಯುತ್ತವೆ ಎಂದರು.

ಕೊಡಗು ಉಪಾಧ್ಯಾಯರ ಸಹಕಾರ ಸ್ಟೋರ್ಸ್ ಮತ್ತು ಮುದ್ರಣಾಲಯದ ಅಧ್ಯಕ್ಷ ಎಂ.ಕೆ.ರೋಹಿತ್, ವಿಧಾನಪರಿಷತ್ ಸದಸ್ಯ ಮಂಡೇಪಂಡ ಸುಜಾ ಕುಶಾಲಪ್ಪ, ಕೊಡಗು ಜಿಲ್ಲಾ ಕೇಂದ್ರ ಬ್ಯಾಂಕ್ ಅಧ್ಯಕ್ಷ ಕೊಡಂದೇರ ಪಿ.ಬಾಂಡ್ ಗಣಪತಿ ಮಾತನಾಡಿದರು.

ಕಾರ್ಯಕ್ರಮದಲ್ಲಿ ಶತಮಾನೋತ್ಸವ ಅಂಗವಾಗಿ ಸಂಘದ ಮಾಜಿ ಅಧ್ಯಕ್ಷರು–ಉಪಾಧ್ಯಕ್ಷರು ಹಾಗೂ ಸದಸ್ಯರನ್ನು ಸನ್ಮಾನಿಸಲಾಯಿತು. ಸಂಘದ ಉಪಾಧ್ಯಕ್ಷ ಎ.ವಿ.ಮಂಜುನಾಥ್, ಮುತ್ತಮ್ಮ, ಶಿಕ್ಷಕ ಸತೀಶ್, ಲಾಲ್ ಕುಮಾರ್, ಸಾವಿತ್ರಿ, ದೇವರಾಜ್ ಮತ್ತಿತರರಿದ್ದರು.



ವಿರಾಜಪೇಟೆ ಕೊಡವ ಸಮಾಜ ಸಭಾಂಗಣದಲ್ಲಿ ಆಯೋಜಿಸಿದ್ದ ಕೊಡಗು ಉಪಾಧ್ಯಾಯರ ಸಹಕಾರ ಸ್ಟೋರ್ಸ್ ಮತ್ತು ಮುದ್ರಣಾಲಯ ಸಂಘದ ಶತಮಾನೋತ್ಸವದಲ್ಲಿ ಶಾಸಕ ಪೊನ್ನಣ್ಣ, ಶ್ರೀ ಶಾಂತಮಲ್ಲಿಕಾರ್ಜುನಸ್ವಾಮೀಜಿ ಸ್ಮರಣ ಸಂಚಿಕೆ ಬಿಡುಗಡೆಗೊಳಿಸಿದರು.

ಇಂದು ಡಿಸಿ ಕಚೇರಿ ತಡೆಗೋಡೆ ಪರಿಶೀಲನೆ

ಮಡಿಕೇರಿ: ಕಳಪೆ ಮತ್ತು ಅವೈಜ್ಞಾನಿಕ ಕಾಮಗಾರಿ ಮೂಲಕ ಭಾರಿ ವಿವಾದ ಸೃಷ್ಟಿಸಿದ್ದ ಜಿಲ್ಲಾಧಿಕಾರಿ ಕಚೇರಿಯ ತಡೆಗೋಡೆಯನ್ನು ಕೆಡವಲು ಕ್ರಮ ಕೈಗೊಳ್ಳಲಾಗಿದ್ದು, ಮಾ.14ರಂದು ವಿಧಾನಸಭಾ ಉಪಾಧ್ಯಕ್ಷ ರುದ್ರಪ್ಪ ಮಾನಪ್ಪ ಲಮಾಣಿ ನೇತೃತ್ವದ ಸಮಿತಿ ಸ್ಥಳ ಪರಿಶೀಲನೆ ನಡೆಸಲಿದೆ.

ಸುಮಾರು 7 ಕೋಟಿ ರೂ. ವೆಚ್ಚದಲ್ಲಿ ಜರ್ಮನ್ ತಂತ್ರಜ್ಞಾನದಲ್ಲಿ ನಡೆದ ತಡೆಗೋಡೆ ಕಾಮಗಾರಿ ಕಳಪೆ ಗುಣಮಟ್ಟದಿಂದ ಕೂಡಿದೆ ಮತ್ತು ಅಪಾಯಕಾರಿಯಾಗಿದೆ ಎಂದು ಆರೋಪಿಸಿ ಅಂದು ವಿರೋಧ ಪಕ್ಷದ ಸ್ಥಾನದಲ್ಲಿದ್ದ ಕಾಂಗ್ರೆಸ್ ಹೋರಾಟ ನಡೆಸಿತ್ತು. ಅಲ್ಲದೆ, ಮಳೆಗಾಲದಲ್ಲಿ ತಡೆಗೋಡೆ ಕುಸಿಯುವ ಆತಂಕವೂ ಎದುರಾಗಿತ್ತು ಕಾಂಗ್ರೆಸ್ ನೇತೃತ್ವದ ರಾಜ್ಯ ಸರ್ಕಾರ ಅಧಿಕಾರಕ್ಕೆ ಬಂದ ನಂತರ ಜಿಲ್ಲೆಯ ಶಾಸಕದ್ವಯರಾದ ಡಾ.ಮಂತರ್‌ಗೌಡ ಹಾಗೂ ಎ.ಎಸ್.ಪೊನ್ನಣ್ಣ ಅವರ ಪ್ರಯತ್ನದ ಫಲವಾಗಿ ತಡೆಗೋಡೆ ನಿರ್ವಹಣೆ ಹೊತ್ತ ಇಂಜಿನಿಯರ್ ಅಮಾನತಿಗೆ ಒಳಗಾದರು. ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಸೇರಿದಂತೆ ಇನ್ನೂ ಕೆಲವು ಅಧಿಕಾರಿಗಳು ವರ್ಗಾವಣೆ ಶಿಕ್ಷೆಗೆ ಗುರಿಯಾದರು.

ಮಡಿಕೇರಿ ಶಾಸಕ ಡಾ.ಮಂತರ್‌ಗೌಡ ಪ್ರಥಮ ಅಧಿವೇಶನದಲ್ಲಿ ತಡೆಗೋಡೆ ಅವೈಜ್ಞಾನಿಕವಾಗಿದ್ದು, ಬಿದ್ದು ಅನಾಹುತ ಸಂಭವಿಸುವುದರಿಂದ ಸುಭದ್ರ ತಡೆಗೋಡೆ ನಿರ್ಮಾಣಕ್ಕೆ ಒತ್ತಾಯಿಸಿದ್ದರು. ಇದೀಗ ಕಳಪೆ ಕಾಮಗಾರಿಯ ತಡೆಗೋಡೆ ತೆರವಿಗೆ ಕ್ರಮ ಕೈಗೊಳ್ಳಲಾಗುತ್ತಿದ್ದು, ಗುರುವಾರ ವಿಧಾನಸಭಾ ಉಪಾಧ್ಯಕ್ಷ ರುದ್ರಪ್ಪ ಮಾನಪ್ಪ ಲಮಾಣಿ ಅವರು ಸ್ಥಳೀಯ ಜನಪ್ರತಿನಿಧಿಗಳು ಹಾಗೂ ಅಧಿಕಾರಿಗಳೊಂದಿಗೆ ಸಭೆ ನಡೆಸಲಿದ್ದಾರೆ.



ಮಡಿಕೇರಿ ಜಿಲ್ಲಾಧಿಕಾರಿ ಕಚೇರಿಯ ತಡೆಗೋಡೆ ಕುಸಿಯುವ ಆತಂಕವಿರುವುದರಿಂದ ತಡೆ ಹೊದಿಕೆ ಹಾಕಿರುವುದು.

ಅಭಿವೃದ್ಧಿಗೊಂಡ ಮತ್ತಿಗೋಡು ಸಾಕಾನೆ ಶಿಬಿರ ಉದ್ಘಾಟನೆ



ಅಭಿವೃದ್ಧಿಗೊಂಡ ಮತ್ತಿಗೋಡು ಸಾಕಾನೆ ಶಿಬಿರ ಉದ್ಘಾಟನೆ ನಂತರ ವಿರಾಜಪೇಟೆ ಶಾಸಕ ಎ.ಎಸ್.ಪೊನ್ನಣ್ಣ ಆನೆಗಳನ್ನು ವೀಕ್ಷಿಸಿದರು.

ಮಡಿಕೇರಿ: ಅರಣ್ಯ ಇಲಾಖೆ ವತಿಯಿಂದ ಸುಮಾರು 1 ಕೋಟಿ ರೂ. ವೆಚ್ಚದಲ್ಲಿ ಅಭಿವೃದ್ಧಿಪಡಿಸಿರುವ ದಕ್ಷಿಣ ಕೊಡಗಿನ ಮತ್ತಿಗೋಡು ಸಾಕಾನೆ ಶಿಬಿರವನ್ನು ವಿರಾಜಪೇಟೆ ಶಾಸಕ ಎ.ಎಸ್.ಪೊನ್ನಣ್ಣ ಬುಧವಾರ ಉದ್ಘಾಟಿಸಿದರು.

ಕೊಡಗು–ಮೈಸೂರು ಮುಖ್ಯರಸ್ತೆಯ ತಿತಿಮತಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಗಡಿಭಾಗ ಆನೆಚೌಕೂರಿನ ಅನತಿ ದೂರದ ಮತ್ತಿಗೋಡು ಸಾಕಾನೆ ಶಿಬಿರದಲ್ಲಿರುವ ಭೀಮ, ಮಹೇಂದ್ರ, ಶ್ರೀಕಂಠ, ಅಶೋಕ, ರಾಮಯ್ಯ, ಕೃಷ್ಣ, ಶ್ರೀರಂಗ, ಕ್ಯಾತ, ಮಾಸ್ತಿ, ಏಕಲವ್ಯ, ರವಿ, ಸೋಮಶೇಖರ, ಚಾಮುಂಡೇಶ್ವರಿ, ಭುವನೇಶ್ವರಿ, ವಿರಾಟ್ ಸೇರಿದಂತೆ 17 ಆನೆಗಳಿದ್ದು, ಶಾಸಕ ಪೊನ್ನಣ್ಣ ಆನೆಗಳಿಗೆ ಪೂಜೆ ಸಲ್ಲಿಸಿ, ಕಲ್ಲಂಗಡಿ, ಕಬ್ಬಿನ ಜಲ್ಲೆ ನೀಡಿದರು.

ಈ ಸಂದರ್ಭ ನಾಗರಹೊಳೆ ವನ್ಯಜೀವಿ ವಿಭಾಗದ ನಿರ್ದೇಶಕ ಹರ್ಷಕುಮಾರ್, ಪ್ರಸ್ತುತ ಅರಣ್ಯ ಇಲಾಖೆಯಲ್ಲಿ ಬಳಸುವ ಅತ್ಯಾಧುನಿಕ ಮಾದರಿಯ ಉಪಕರಣಗಳಾದ ಡ್ರೋನ್ ಕ್ಯಾಮರಾ, ವಾಕಿಟಾಕಿ ಸೇರಿದಂತೆ ಇನ್ನಿತರ ಉಪಕರಣಗಳನ್ನು ಶಾಸಕ ಎ.ಎಸ್.ಪೊನ್ನಣ್ಣ ಅವರಿಗೆ ಪರಿಚಯಿಸಿದರು.

ವಿಧಾನಪರಿಷತ್ ಮಾಜಿ ಸದಸ್ಯ ಸಿ.ಎಸ್.ಅರುಣ್ ಮಾಚಯ್ಯ, ಕಾಂಗ್ರೆಸ್ ಜಿಲ್ಲಾಧ್ಯಕ್ಷ ಧರ್ಮಜ ಉತ್ತಪ್ಪ, ಪೊನ್ನಂಪೇಟೆ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮಿದೇರಿರ ನವೀನ್, ಡಿಸಿಸಿ ಸದಸ್ಯರಾದ ವಿನಯ್ ಕುಮಾರ್, ಅಬ್ದುಲ್ ರೆಹಮಾನ್ ಬಾಪು, ಅರವಿಂದ್ ಕುಟ್ಟಪ್ಪ, ಜಿಪಂ ಮಾಜಿ ಸದಸ್ಯರಾದ ಪಿ.ಆರ್.ಪಂಕಜ, ಬಾನಂಡ ಪ್ರಥ್ಯು, ತಿತಿಮತಿ ವಲಯ ಕಾಂಗ್ರೆಸ್ ಅಧ್ಯಕ್ಷ ನವೀನ್, ಗ್ರಾಪಂ ಅಧ್ಯಕ್ಷರಾದ ಟಾಟು ಮೊಣ್ಣಪ್ಪ ರಾಣಿ ಎಸಿಎಫ್ ಡಿ.ಎಸ್.ದಯಾನಂದ್, ಕೆ.ಪಿ.ಗೋಪಾಲ್, ಪಿ.ಅನುಷಾ ಇತರರಿದ್ದರು.

ಬೈಕ್ ಗ್ರಾಹಕನಿಗೆ 30 ಸಾವಿರ ರೂ. ಪರಿಹಾರ

ಮಡಿಕೇರಿ: ಬೈಕ್‌ಗೆ ಯಾವುದೇ ದಾಖಲೆಗಳನ್ನು ನೀಡದಿರುವುದು ಮತ್ತು ನೋಂದಣಿ ಮಾಡದಿರುವ ಶೋ ರೂಂವೊಂದಕ್ಕೆ ಕೊಡಗು ಜಿಲ್ಲಾ ಗ್ರಾಹಕರ ಆಯೋಗ 30 ಸಾವಿರ ರೂ. ಪರಿಹಾರವನ್ನು ಗ್ರಾಹಕರಿಗೆ ನೀಡುವಂತೆ ಆದೇಶ ನೀಡಿದೆ.

ಪ್ರಕರಣ: ಸೋಮವಾರಪೇಟೆ ತಾಲೂಕಿನ ಮುಳ್ಳೂರು ಗ್ರಾಮದ ನಿವಾಸಿ ಎಂ.ಸಿ.ಅನಿಲ್ ಅವರು ಆತ್ಮಿಕಾ ಮೋಟಾರ್ಸ್ ಶೋ ರೂಂನಿಂದ ಟಿವಿಎಸ್ ಅಪಾಚಿ ಬೈಕ್ ಖರೀದಿಸಿದ್ದರು. ಆದರೆ, 10 ತಿಂಗಳು ಕಳೆದರೂ ಬೈಕ್‌ಗೆ ಯಾವುದೇ ದಾಖಲಾತಿ ಮತ್ತು ನೋಂದಣಿ ಕೂಡ ಮಾಡಿರಲಿಲ್ಲ. ಈ ಕುರಿತು ಅನಿಲ್ ಹಲವು ಬಾರಿ ಶೋ ರೂಂಗೆ ತೆರಳಿ ವಿಚಾರಣೆ ಮಾಡಿದ್ದರೂ ಯಾವುದೇ ಕ್ರಮ ಕೈಗೊಂಡಿರಲಿಲ್ಲ. ಇದರಿಂದ ಮನನೊಂದ ಅನಿಲ್ ಕೊಡಗು ಜಿಲ್ಲಾ ಗ್ರಾಹಕರ ಆಯೋಗಕ್ಕೆ ದೂರು ಸಲ್ಲಿಸಿದ್ದರು.

ಎಂ.ಸಿ.ಅನಿಲ್ ಅವರಿಗೆ ಶೋರೂಂನ ಸೇವಾ ನ್ಯೂನತೆಯನ್ನು ಜಿಲ್ಲಾ ಗ್ರಾಹಕರ ಆಯೋಗ ಪರಿಗಣಿಸಿ, ಆಯೋಗದ ಪ್ರಭಾರ ಅಧ್ಯಕ್ಷೆ ಸಿ.ರೇಣುಕಾಂಬ ಮತ್ತು ಸದಸ್ಯೆ ಗೌರಮ್ಮಣ್ಣಿ ದೂರುದಾರರಿಗೆ ಸದರಿ ಬೈಕ್‌ನ ಆರ್‌ಸಿ, ನಂಬರ್ ಪ್ಲೇಟ್ ಮುಂತಾದ ದಾಖಲೆಗಳನ್ನು ಬಾಕಿ ಇರುವ ಡೌನ್ ಪೇಮೆಂಟ್ ಕಟ್ಟಿಸಿಕೊಂಡು 30 ದಿನದೊಳಗೆ ನೀಡಬೇಕು. ಅಲ್ಲದೇ, ಸೇವಾ ನ್ಯೂನತೆಗೆ 20 ಸಾವಿರ ರೂ. ಮತ್ತು ಮಾನಸಿಕ ವೇದನೆ ನೀಡಿದಕ್ಕೆ 10 ಸಾವಿರ ರೂ. ಪಾವತಿಸುವಂತೆ ಆದೇಶ ಹೊರಡಿಸಿದೆ.

ಸುಪ್ರೀಂ ತೀರ್ಪಿನಿಂದ ಕೊಡವ ಲ್ಯಾಂಡ್ ಬೇಡಿಕೆಗೆ ಮತ್ತಷ್ಟು ಪುಷ್ಠಿ

ಮಡಿಕೇರಿ, ಮಾ.13–ಜಮ್ಮು ಮತ್ತು ಕಾಶ್ಮೀರದ 370ನೇ ವಿಧಿಯ ರದ್ದತಿಯ ತೀರ್ಪಿನಲ್ಲಿ ಸುಪ್ರೀಂಕೋರ್ಟ್‌ನ ಸಾಂವಿಧಾನ ಪೀಠ ಭೂತಪೂರ್ವ ಕೊಡಗು ರಾಜ್ಯದ ಗತ ಇತಿಹಾಸವನ್ನು ದಾಖಲಿಸಿದೆ. ಈ ತೀರ್ಪು ಕೊಡವ ಲ್ಯಾಂಡ್ ಬೇಡಿಕೆಗೆ ಮತ್ತಷ್ಟು ಪುಷ್ಠಿ ನೀಡಿದೆ ಎಂದು ಕೊಡವ ನ್ಯಾಷನಲ್ ಕೌನ್ಸಿಲ್ ಸಂಘಟನೆಯ ಅಧ್ಯಕ್ಷ ಎನ್.ಯು.ನಾಚಪ್ಪ ತಿಳಿಸಿದ್ದಾರೆ.



ನಾಚಪ್ಪ

ಈ ಕುರಿತು ಪತ್ರಿಕಾ ಹೇಳಿಕೆ ನೀಡಿರುವ ಅವರು, ಸುಪ್ರೀಂಕೋರ್ಟ್‌ನ ಸಾಂವಿಧಾನಿಕ ಪೀಠದಿಂದ 2023 ಡಿ.11ರಂದು ಜಮ್ಮು ಮತ್ತು ಕಾಶ್ಮೀರದ ವಿಶೇಷ ಸ್ಥಾನಮಾನವನ್ನು ರದ್ದುಗೊಳಿಸುವ ಕುರಿತು ಮಹತ್ವದ ತೀರ್ಪು ಹೊರ ಬಿದ್ದಿದ್ದು, ಜಮ್ಮು ಮತ್ತು ಕಾಶ್ಮೀರಕ್ಕೆ ರಾಜ್ಯತ್ವವನ್ನು ಮರುಸ್ಥಾಪಿಸಲು ಶಿಫಾರಸ್ಸು ಮಾಡಿದೆ. ಕಾಶ್ಮೀರರೊಂದಿಗೆ ಕರ್ನಾಟಕ ಸರ್ಕಾರ ಕೂಡ ಇದೇ ರೀತಿ ಮಾಡಬೇಕೆನ್ನುವುದು ಖಾತರಿಯಾಗಿದೆ. ಆದ್ದರಿಂದ ಸಂವಿಧಾನದ ಆರ್ಟಿಕಲ್ 244 ಆರ್/ಡಬ್ಲ್ಯೂ 6ನೇ ಮತ್ತು 8ನೇ ಶೆಡ್ಯೂಲ್‌ನಡಿ ಲಡಾಖ್ ಹಾಗೂ ಲೇಹ್ ಬೌದ್ಧ ಸ್ವಾಯತ್ತ ಮಂಡಳಿಗಳು ಮತ್ತು ಪ್ರದೇಶಗಳ ಸಾಲಿನಲ್ಲಿ ಕೊಡವ ಲ್ಯಾಂಡ್ ಭೂರಾಜಕೀಯ ಸ್ವಾಯತ್ತತೆಯನ್ನು ಸೃಷ್ಟಿಸಬೇಕು ಎಂದು ಒತ್ತಾಯಿಸಿದ್ದಾರೆ.

370ನೇ ವಿಧಿಯ ರದ್ದತಿಯನ್ನು ಸುಪ್ರೀಂಕೋರ್ಟ್ ಎತ್ತಿ ಹಿಡಿದಿದೆ. ಜಮ್ಮು–ಕಾಶ್ಮೀರದ ವಿಶೇಷ ಸ್ಥಾನಮಾನದ ರದ್ದತಿಗೆ ಸಂಬಂಧಿಸಿದಂತೆ ಸುಪ್ರೀಂ ಕೋರ್ಟ್ ತೀರ್ಪಿನ ಪ್ರಕಾರ, ಕೂರ್ಗ್ ರಾಜ್ಯವನ್ನು ಹೊರತುಪಡಿಸಿ ಎಲ್ಲಾ 'ಸಿ' ರಾಜ್ಯಗಳು ಅದರ ಹಣಕಾಸಿನ ನೆರವಿಗಾಗಿ ಕೇಂದ್ರದ ಮೇಲೆ ಹೆಚ್ಚು ಅವಲಂಬಿತವಾಗಿವೆ. ಅದರ ಹೊರತಾಗಿಯೂ ತ್ರಿಪುರಾ, ದೆಹಲಿ, ಹಿಮಾಚಲ ಮತ್ತು ಮಣಿಪುರದ ಭಾಗ 'ಸಿ' ರಾಜ್ಯತ್ವದ ಸ್ಥಾನಮಾನವನ್ನು ಉಳಿಸಿಕೊಂಡಿವೆ ಮತ್ತು ನಂತರ ಭಾರತದ ಇತರ ಪ್ರಮುಖ ಪ್ರಾಂತೀಯ ರಾಜ್ಯಗಳಿಗೆ ಸಮಾನವಾಗಿ ಪ್ರಮುಖ ರಾಜ್ಯಗಳಾಗಿ ಬಡ್ತಿ ನೀಡಲಾಯಿತು.

ಸಾಂವಿಧಾನಿಕ ಪೀಠವು ಗಮನಿಸಿದಂತೆ, ಕೊಡವ ತಾಯ್ನಾಡಿನ ಹಿಂದಿನ ಕೂರ್ಗ್ ರಾಜ್ಯ ಭಾರತದ ಆರು 'ಸಿ' ರಾಜ್ಯಗಳಲ್ಲಿ ಕೇಂದ್ರ, ಭಾರತೀಯ ಒಕ್ಕೂಟದ ಆರ್ಥಿಕ ಅವಲಂಬನೆ ಮತ್ತು ಸಹಾಯವಿಲ್ಲದೆ ಸ್ವಂತವಾಗಿ ಆಡಳಿತ ನಡೆಸುವ ಸಾಮರ್ಥ್ಯವನ್ನು ಹೊಂದಿರುವ ಏಕೈಕ 'ಸಿ' ರಾಜ್ಯವಾಗಿತ್ತು. ಸುಪ್ರೀಂ ಕೋರ್ಟ್‌ನ ಈ ಐತಿಹಾಸಿಕ ತೀರ್ಪು ಸ್ವಾಯತ್ತ ಕೊಡವ ತಾಯ್ನಾಡಿನ ಸಿಎನ್‌ಸಿ ಬೇಡಿಕೆಗೆ ಗರಿ ಮೂಡಿಸಿದೆ ಎಂದು ನಾಚಪ್ಪ ಅಭಿಪ್ರಾಯಪಟ್ಟಿದ್ದಾರೆ.

ತ್ವರಿತವಾಗಿ ಸಿದ್ಧತಾ ಕಾರ್ಯ ಪೂರ್ಣಗೊಳಿಸಿ

ಲೋಕಸಭಾ ಚುನಾವಣೆ ಸಂಬಂಧ ಜಿಲ್ಲಾಧಿಕಾರಿ ಶಿಲ್ಪನಾಗ್ ಸೂಚನೆ



ಚಾ.ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ನಡೆದ ಜಿಲ್ಲಾ ನೋಡಲ್ ಅಧಿಕಾರಿಗಳ ಸಭೆಯಲ್ಲಿ ಡಿಸಿ ಶಿಲ್ಪನಾಗ್ ಮಾತನಾಡಿದರು.

ಚಾಮರಾಜನಗರ, ಮಾ.13–ಲೋಕಸಭಾ ಸಾರ್ವತ್ರಿಕ ಚುನಾವಣೆ ಕಾರ್ಯಗಳಿಗೆ ನಿಯೋಜಿತರಾಗಿರುವ ವಿವಿಧ ನೋಡಲ್ ಅಧಿಕಾರಿಗಳು ಪೂರ್ವ ಸಿದ್ಧತಾ ಕಾರ್ಯಗಳನ್ನು ತ್ವರಿತವಾಗಿ ಪೂರ್ಣಗೊಳಿಸುವಂತೆ ಜಿಲ್ಲಾಧಿಕಾರಿ ಶಿಲ್ಪನಾಗ್ ಸೂಚಿಸಿದರು.

ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಬುಧವಾರ ನಡೆದ ಲೋಕಸಭಾ ಚುನಾವಣೆಯ ಜಿಲ್ಲಾ ನೋಡಲ್ ಅಧಿಕಾರಿಗಳ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಚುನಾವಣಾ ಕರ್ತವ್ಯ ನಿರ್ವಹಣೆಗೆ 16 ನೋಡಲ್ ಅಧಿಕಾರಿಗಳನ್ನು ನೇಮಿಸಲಾಗಿದೆ. ಪ್ರತಿಯೊಬ್ಬರಿಗೂ ನಿರ್ವಹಿಸಬೇಕಿರುವ ಜವಾಬ್ದಾರಿಗಳನ್ನು ನಿಗದಿಪಡಿಸಲಾಗಿದೆ. ಚುನಾವಣೆ ಘೋಷಣೆಯಾದ ಕೂಡಲೇ ಕರ್ತವ್ಯಗಳ ಕುರಿತ ಪೂರ್ವ ಸಿದ್ಧತಾ ಕೆಲಸಗಳನ್ನು ತ್ವರಿತವಾಗಿ ಪೂರ್ಣಗೊಳಿಸಬೇಕೆಂದು ತಿಳಿಸಿದರು.

ಮತಗಟ್ಟೆಗಳ ಭೌತಿಕ ಪರಿಶೀಲನೆ, ಮತಗಟ್ಟೆ ಸಿಬ್ಬಂದಿ ನಿಯೋಜನೆ, ವಾಹನಗಳ ಬೇಡಿಕೆ, ಇನ್ನಿತರ ಸಿದ್ಧತೆಗಳನ್ನು ಪರಿಪೂರ್ಣಗೊಳಿಸಬೇಕು. ಯಾವುದೇ ಕೆಲಸ ಬಾಕಿ ಉಳಿಸಿಕೊಳ್ಳದೇ ಸಮರ್ಪಕವಾಗಿ ವ್ಯವಸ್ಥೆ ಮಾಡಿಕೊಳ್ಳಬೇಕು. ಹೆಚ್ಚುವರಿ ಸಿಬ್ಬಂದಿಯನ್ನು ನಿಯೋಜಿಸಿಕೊಳ್ಳಬೇಕು ಎಂದರು.

ಮಾದರಿ ನೀತಿ ಸಂಹಿತೆ ಅನುಷ್ಠಾನವನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸಲು ಅಂತರ ಜಿಲ್ಲಾ, ರಾಜ್ಯ, ಗಡಿ ಚೆಕ್‌ಪೋಸ್ಟ್‌ಗಳನ್ನು ತೆರೆದು ಸಕ್ರಿಯವಾಗಿ ಕಾರ್ಯನಿರ್ವಹಿಸಬೇಕು. ಚೆಕ್‌ಪೋಸ್ಟ್‌ಗಳಲ್ಲಿ ಕುಡಿಯುವ ನೀರು, ಹತ್ತಿರದಲ್ಲೇ ಶೌಚಾಲಯ, ಇನ್ನಿತರ ಮೂಲ ಸೌಕರ್ಯಗಳು ಇರಬೇಕು. ಚೆಕ್‌ಪೋಸ್ಟ್‌ಗಳು 24X7 ಕಾರ್ಯ ನಿರ್ವಹಿಸಬೇಕು ಎಂದು ನಿರ್ದೇಶಿಸಿದರು.

ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕಾಧಿಕಾರಿ ಆನಂದ್ ಪ್ರಕಾಶ್ ಮೀನಾ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪದ್ಮಿನಿ ಸಾಹು, ಹೆಚ್ಚುವರಿ ಜಿಲ್ಲಾಧಿಕಾರಿ ಗೀತಾ ಹುಡೇದ, ಜಿಪಂ ಉಪ ಕಾರ್ಯದರ್ಶಿ ಪಿ.ಲಕ್ಷ್ಮೀ, ಉಪವಿಭಾಗಾಧಿಕಾರಿ ಎಂ.ಶಿವಮೂರ್ತಿ, ತಹಶೀಲ್ದಾರ್‌ಗಳು, ಚುನಾವಣಾ ನೋಡಲ್ ಅಧಿಕಾರಿಗಳು ಸಭೆಯಲ್ಲಿ ಉಪಸ್ಥಿತರಿದ್ದರು.

ಪತಿಯ ಆಸೆ ನೆರವೇರಿಸಲು ರಾಜಕೀಯಕ್ಕೆ ಬರುವೆ

ನುಡಿನಮನ ಕಾರ್ಯಕ್ರಮದಲ್ಲಿ ವಾಣಿ ಕೆ.ಶಿವರಾಂ ಘೋಷಣೆ



ಡಾ.ರಾಜ್‌ಕುಮಾರ್ ಕಲಾಮಂದಿರದಲ್ಲಿ ನಡೆದ ಕೆ.ಶಿವರಾಂ ಪುಣ್ಯಸ್ಮರಣೆ ಕಾರ್ಯಕ್ರಮವನ್ನು ವಾಣಿ ಕೆ.ಶಿವರಾಂ ಉದ್ಘಾಟಿಸಿದರು.

ಚಾಮರಾಜನಗರ, ಮಾ.13–ನನ್ನ ಪತಿ ಕೆ.ಶಿವರಾಂ ಕಳೆದ ಹತ್ತು ವರ್ಷಗಳಿಂದ ಸಮಾಜ ಸೇವೆ ಹಾಗೂ ರಾಜಕಾರಣದಲ್ಲಿ ಜನಸೇವೆ ಮಾಡುವ ಹಂಬಲ ಹೊಂದಿದ್ದರು. ಹಾಗಾಗಿ ಅವರ ಆಸೆಯನ್ನು ಈಡೇರಿಸಲು ಛಲದಿಂದ ರಾಜಕೀಯಕ್ಕೆ ಬರುವುದಾಗಿ ವಾಣಿ ಕೆ.ಶಿವರಾಂ ಘೋಷಿಸಿದರು.

ನಗರದ ಡಾ.ರಾಜ್‌ಕುಮಾರ್ ಕಲಾಮಂದಿರದಲ್ಲಿ ಛಲವಾದಿ ಮಹಾಸಭಾ ಹಾಗೂ ದಲಿತ ಸಂಘಟನೆಗಳ ಒಕ್ಕೂಟದ ವತಿಯಿಂದ ಆಯೋಜಿಸಿದ್ದ ಕೆ.ಶಿವರಾಂ ಪುಣ್ಯಸ್ಮರಣೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಹತ್ತು ವರ್ಷಗಳಿಂದ ಅವರಿಗೆ ರಾಜಕಾರಣದಲ್ಲಿ ಬಹಳಷ್ಟು ನಿರಾಶೆಯಾಗಿತ್ತು. ಪ್ರತಿ ಬಾರಿಯೂ ಟಿಕೆಟ್ ಕೈ ತಪ್ಪಿತ್ತು. ಈ ಬಾರಿ ನಾನು ಗೆದ್ದು ಸಂಸದನಾಗುತ್ತೇನೆ ಎಂದು ಅವರು ಕನಸು ಕಟ್ಟಿಕೊಂಡಿದ್ದರು. ಜೊತೆಗೆ ಜನಸೇವೆ ಆಸೆಯನ್ನು ಇಟ್ಟುಕೊಂಡಿದ್ದರು. ಟಿಕೆಟ್ ಕೈ ತಪ್ಪಿದಾಗಲು ಬೇಸರಗೊಳ್ಳದೇ ನಿಷ್ಠೆಯಿಂದ ಪಕ್ಷಕ್ಕಾಗಿ ದುಡಿಯುತ್ತಿದ್ದರು ಎಂದರು.

ಯಾವುದೇ ಪಕ್ಷಗಳು ಅವರನ್ನು ಗುರುತಿಸಿರುವುದು ವಿಷಾಧಕರ. ಯಾವುದೇ ಪಕ್ಷಕ್ಕೆ ಹೋದರು ಸಿದ್ಧಾಂತವನ್ನು ಬಿಟ್ಟು ಹೋದವರಲ್ಲ. ಅವರ ಬಹಳ ಕಷ್ಟಪಟ್ಟು ಜನಸೇವೆ ಮಾಡಲು ಛಲವಾದಿ ಮಹಾಸಭಾ ಸಂಘಟನೆಯನ್ನು ಸ್ಥಾಪಿಸಿದ್ದರು. ಇದನ್ನು ಮುಂದುವರಿಸಿಕೊಂಡು ಹೋಗುವ ಜೊತೆಗೆ ನಿಮ್ಮೊಂದಿಗೆ ನಾನು ಸದಾ ಇರುತ್ತೇನೆ ಎಂದರು.

ನನಗೆ ರಾಜಕೀಯ ಶಕ್ತಿ ತುಂಬಿ: ನನ್ನ ಪತಿ ಕೆ.ಶಿವರಾಂ ಚಾ.ನಗರ ಲೋಕಸಭಾ ಕ್ಷೇತ್ರ ವ್ಯಾಪ್ತಿಯ ಸುಮಾರು ಸಾವಿರಕ್ಕೂ ಹೆಚ್ಚು ಹಳ್ಳಿಗಳಲ್ಲಿ ಸುತ್ತಿದ್ದಾರೆ. ರಾಜಕೀಯ ಅಧಿಕಾರ ಇದ್ದರೆ ಮಾತ್ರ ಜನಸೇವೆ ಮಾಡಲು ಸಾಧ್ಯ ಎಂಬ ಸತ್ಯವನ್ನು ಎಲ್ಲರೂ ಅರಿತುಕೊಳ್ಳಬೇಕು. ಶಿವರಾಂ ಅವರಿಗೆ ಬಹಳ ಅನ್ಯಾಯವಾಗಿದೆ. ಆ ಅನ್ಯಾಯವನ್ನು ಸರಿಪಡಿಸಲು ನಾನು ಮನೆಯಲ್ಲಿ ಕೂರದೇ ನಿಮ್ಮೊಂದಿಗೆ ಇರುತ್ತೇನೆ. ನಮ್ಮ ಯಜಮಾನರ ಆಸೆಯನ್ನು ನೆರವೇರಿಸಲು ರಾಜಕೀಯ ಬರುತ್ತೇನೆ. ಹೀಗಾಗಿ ನನಗೆ ರಾಜಕೀಯ ಶಕ್ತಿ ತುಂಬುವ ಮೂಲಕ ಅವರನ್ನು ಜೀವಂತವಾಗಿ ಉಳಿಸಿಕೊಡಿ ಎಂದು ವಾಣಿ ಭಾವುಕರಾದರು. ಚಿತ್ರದುರ್ಗದ ಛಲವಾದಿ ಮಠಾಧ್ಯಕ್ಷ ಛಲವಾದಿ ಬಸವನಾಗಿಸ್ವಾಮೀಜಿ, ತಿ.ನರಸೀಪುರದ ಬುದ್ಧ ವಿಹಾರದ ಬೋಧಿ ರತ್ನ ಬಂತೇಜಿ, ಪತ್ರಕರ್ತ ಕೆ.ದೀಪಕ್, ಛಲವಾದಿ ಮಹಾಸಭಾದ ಅಧ್ಯಕ್ಷ ಅಣಗಳ್ಳಿ ಬಸವರಾಜು, ದಲಿತ ಮಹಾಸಭಾದ ರಾಜ್ಯ ಉಪಾಧ್ಯಕ್ಷ ವೆಂಕಟ ರಮಣಸ್ವಾಮಿ, ಛಲವಾದಿ ಮಹಾಸಭಾ ರಾಜ್ಯ ಸಂಘಟನಾ ಕಾರ್ಯದರ್ಶಿ ಹಂಸರಾಜು, ಅಂಬೇಡ್ಕರ್ ಸಂಘಟನೆ ಒಕ್ಕೂಟದ ಅಧ್ಯಕ್ಷ ಸಿ.ಕೆ.ಮಂಜುನಾಥ್, ಕೆ.ಶಿವರಾಂ ಅಳಿಯ ಭರತ್ ಇದ್ದರು.

ಎಸ್.ಬಾಲರಾಜುಗೆ ಒಲಿದ ಕಮಲ

● ಬಿಜೆಪಿ ಟಿಕೆಟ್ ಪಡೆಯುವಲ್ಲಿ ಯಶಸ್ವಿಯಾದ ಮಾಜಿ ಶಾಸಕ ● ಮಾಜಿ ಸಿಎಂ ಬಿಎಸ್‌ವೈ ಮಾತಿಗೆ ಮನ್ನಣೆ

ಸಿದ್ದಲಿಂಗಸ್ವಾಮಿ



ಎಸ್.ಬಾಲರಾಜು

ಚಾಮರಾಜನಗರ, ಮಾ.13–ಚಾಮರಾಜನಗರ ಎಸ್‌ಸಿ ಮೀಸಲು ಲೋಕಸಭಾ ಕ್ಷೇತ್ರದಿಂದ ಬಿಜೆಪಿ ಅಭ್ಯರ್ಥಿಯಾಗಿ ಕೊಳ್ಳೇಗಾಲ ಕ್ಷೇತ್ರದ ಮಾಜಿ ಶಾಸಕ ಎಸ್.ಬಾಲರಾಜು ಸ್ಪರ್ಧಿಸಲಿದ್ದಾರೆ.

ಕಳೆದ ವಿಧಾನಸಭಾ ಚುನಾವಣೆಯಲ್ಲಿ ಕೊಳ್ಳೇಗಾಲದಿಂದ ಕಾಂಗ್ರೆಸ್ ಟಿಕೆಟ್ ಕೈ ತಪ್ಪಿದುದರಿಂದ ಬೇಸರಗೊಂಡು ಬಿಜೆಪಿ ಸೇರ್ಪಡೆಯಾಗಿದ್ದ ಬಾಲರಾಜು ಬಿಜೆಪಿಯಿಂದ ಚಾಮರಾಜನಗರ ಲೋಕಸಭಾ ಕ್ಷೇತ್ರದ ಟಿಕೆಟ್ ಪಡೆಯುವಲ್ಲಿ ಯಶಸ್ವಿಯಾಗಿದ್ದಾರೆ.

ಕಳೆದ 31 ವರ್ಷಗಳಿಂದಲೂ ಸಕ್ರಿಯ ರಾಜಕೀಯದಲ್ಲಿದ್ದ ಬಾಲರಾಜು, ರಾಜ್ಯಸಭಾ ಮಾಜಿ ಸದಸ್ಯರಾದ ದಿವಂಗತ ಎಂ.ರಾಜಶೇಖರ್‌ಮೂರ್ತಿ ಅವರ ಇಬ್ಬರು ಕಟ್ಟಾ ಶಿಷ್ಯರ ಪೈಕಿ ಇವರು ಒಬ್ಬರು. ಮತ್ತೊಬ್ಬ ಮಾಜಿ ಸಂಸದ ದಿವಂಗತ ಆರ್.ಧ್ರುವನಾರಾಯಣ್. ಇವರನ್ನು ನೀಲಿಕಣ್ಣಿನ ಹುಡುಗರು ಎಂದು ರಾಜಶೇಖರ್ ಮೂರ್ತಿ ಅವರು ಕರೆಯುತ್ತಿದ್ದರು.

ಕಾಂಗ್ರೆಸ್‌ನಿಂದ ರಾಜಕೀಯ ಪ್ರವೇಶ: ಹಿರಿಯ ಮುತ್ಸದಿ ಎಂ.ರಾಜಶೇಖರ್‌ಮೂರ್ತಿ ಅವರ ಶಿಷ್ಯರಾಗಿದ್ದ ಬಾಲರಾಜು, 1991–92ರಲ್ಲಿ ಕಾಂಗ್ರೆಸ್ ಪಕ್ಷ ಪ್ರವೇಶ ಮಾಡಿದರು. 1993ರಲ್ಲಿ ಟಿಎಪಿಸಿಎಂಎಸ್‌ನಲ್ಲಿ ನಿರ್ದೇಶಕರಾಗಿ ಆಯ್ಕೆಯಾದರು. 1997ರಲ್ಲಿ ಚಾಮರಾಜನಗರ ಜಿಲ್ಲೆಯಾಗಿ ಘೋಷಣೆಯಾದ ನಂತರ ಬಾಲರಾಜು ಯುವ ಕಾಂಗ್ರೆಸ್ ಅಧ್ಯಕ್ಷರಾಗಿ ನೇಮಕಗೊಂಡರು. 1999ರಲ್ಲಿ ತಮ್ಮ ಗುರು ಎಂ.ರಾಜಶೇಖರ್ ಮೂರ್ತಿ ಅವರೊಂದಿಗೆ ಬಿಜೆಪಿಗೆ ಸೇರ್ಪಡೆಯಾದ ಬಾಲರಾಜು ಕೊಳ್ಳೇಗಾಲ ಕ್ಷೇತ್ರದಿಂದ ಸ್ಪರ್ಧಿಸಿ ಅಲ್ಪ ಮತಗಳಿಂದ ಸೋತರು.

2004ರಲ್ಲಿ ಬಿಜೆಪಿ–ಜೆಡಿಯು ಹೊಂದಾಣಿಕೆಯಿಂದ ಟಿಕೆಟ್ ಕೈತಪ್ಪಿದ್ದರಿಂದ ಅವರು ಕೊಳ್ಳೇಗಾಲ ಕ್ಷೇತ್ರದಿಂದ ಪಕ್ಷೇತರರಾಗಿ ಕಣಕ್ಕಿಳಿದು ಶಾಸಕರಾಗಿ ಆಯ್ಕೆಯಾದ್ದರು. ನಂತರ 2007ರಲ್ಲಿ ಮತ್ತೊಮ್ಮೆ ಪಕ್ಷೇತರ ಅಭ್ಯರ್ಥಿಯಾಗಿ ಸ್ಪರ್ಧಿಸಿ ಸೋಲು ಕಂಡರು. ಬಳಿಕ ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರೊಂದಿಗೆ ಕೆಜೆಪಿ ಸೇರ್ಪಡೆಯಾಗಿ 2013ರಲ್ಲಿ ಮತ್ತೆ ಕೊಳ್ಳೇಗಾಲ ವಿಧಾನಸಭಾ ಕ್ಷೇತ್ರದಿಂದ ಸ್ಪರ್ಧಿಸಿ, ಅಲ್ಪಮತಗಳ ಅಂತರದಲ್ಲಿ ಸೋಲು ಕಂಡರು.

ಬಳಿಕ ಆರ್.ಧ್ರುವನಾರಾಯಣ್ ಅವರ ಸಲಹೆ ಮೇರೆಗೆ ಕಾಂಗ್ರೆಸ್ ಸೇರ್ಪಡೆಯಾಗಿ ಕಳೆದ 10 ವರ್ಷಗಳಿಂದ ಕಾಂಗ್ರೆಸ್‌ನಲ್ಲಿ ನಿಷ್ಠಾವಂತ ಕಾರ್ಯಕರ್ತರಾಗಿ ಶ್ರಮಿಸಿದರು. ಕೊಳ್ಳೇಗಾಲ ಕ್ಷೇತ್ರದಿಂದ 2023ರ ವಿಧಾನಸಭಾ ಚುನಾವಣೆಗೆ ಕಾಂಗ್ರೆಸ್‌ನಿಂದ ಪ್ರಬಲ ಆಕಾಂಕ್ಷಿಯಾಗಿದ್ದರು. ಇವರಿಗೆ ಧ್ರುವನಾರಾಯಣ್ ಅವರ ಬೆಂಬಲವೂ ಇತ್ತು ಎನ್ನಲಾಗುತ್ತಿತ್ತು. ಆದರೆ, ಚುನಾವಣೆ ಸಮೀಪಿಸುತ್ತಿದ್ದ ವೇಳೆ ಧ್ರುವನಾರಾಯಣ್ ಅವರು ಅಕಾಲಿಕ ಮರಣ ಹೊಂದಿದ್ದರು. ಹೀಗಾಗಿ ಕಾಂಗ್ರೆಸ್‌ನಲ್ಲಿ ಬಾಲರಾಜುವಿಗೆ ಹೆಚ್ಚಿನ ಬೆಂಬಲ ದೊರೆಯದೆ ಟಿಕೆಟ್ ಕೈ ತಪ್ಪಿತ್ತು.

ಕಾಂಗ್ರೆಸ್‌ನಿಂದ ಟಿಕೆಟ್ ಕೈ ತಪ್ಪಿದ ಹಿನ್ನೆಲೆಯಲ್ಲಿ ಬೇಸರಗೊಂಡು ಬಾಲರಾಜು ಯಡಿಯೂರಪ್ಪ ಸಮ್ಮುಖದಲ್ಲಿ ಬಿಜೆಪಿ ಸೇರ್ಪಡೆಯಾದರು. ಈ ವೇಳೆ ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಚಾಮರಾಜನಗರ ಕ್ಷೇತ್ರದಿಂದ ಟಿಕೆಟ್ ನೀಡುವಂತೆ ಬೇಡಿಕೆ ಇಟ್ಟಿದ್ದರು ಎನ್ನಲಾಗಿದೆ. ಇದಕ್ಕೆ ಯಡಿಯೂರಪ್ಪ ಸಮ್ಮತಿಸಿದರು ಎನ್ನಲಾಗಿದೆ. ರಾಜ್ಯದ ಬಿಜೆಪಿ ಚುನಾವಣೆಯ ಉಸ್ತುವಾರಿಯನ್ನು ಯಡಿಯೂರಪ್ಪ ಅವರಿಗೆ ವಹಿಸಿದ್ದರಿಂದ ಅಭ್ಯರ್ಥಿಗಳ ಆಯ್ಕೆಯಲ್ಲಿ ಅವರ ಮಾತಿಗೆ ಮನ್ನಣೆ ಸಿಕ್ಕಿರುವುದರಿಂದ ಬಾಲರಾಜು ಅವರಿಗೆ ಟಿಕೆಟ್ ಸಿಕ್ಕಿದೆ ಎಂಬ ಮಾತುಗಳು ಕ್ಷೇತ್ರದಲ್ಲಿ ಕೇಳಿಬರುತ್ತಿದೆ.

ಮೋಹನ್‌ಗೆ ತಪ್ಪಿದ ಟಿಕೆಟ್

ಚಾಮರಾಜನಗರ ಮೀಸಲು ಲೋಕಸಭಾ ಕ್ಷೇತ್ರದಿಂದ ಬಿಜೆಪಿ ಪ್ರಬಲ ಟಿಕೆಟ್ ಆಕಾಂಕ್ಷಿಗಳ ಪಟ್ಟಿಯಲ್ಲಿ ಹಾಲಿ ಸಂಸದ ವಿ. ಶ್ರೀನಿವಾಸಪ್ರಸಾದ್ ಅವರ ಅಳಿಯ ವೈದ್ಯ ಡಾ.ಎನ್.ಎಸ್.ಮೋಹನ್ ಅವರ ಹೆಸರು ಹೆಚ್ಚು ಮುನ್ನಲೆಗೆ ಬಂದಿತ್ತು. ಶ್ರೀನಿವಾಸ್‌ಪ್ರಸಾದ್ ಕೂಡ ತಮ್ಮ ಅಳಿಯನಿಗೆ ಟಿಕೆಟ್ ನೀಡುವಂತೆ ವರಿಷ್ಠರಿಗೆ ಒತ್ತಡ ಹೇರಿದ್ದರು ಎನ್ನಲಾಗಿದೆ. ಹೀಗಾಗಿ ಮೋಹನ್ ಅವರಿಗೆ ಟಿಕೆಟ್ ಬಹುತೇಕ ಖಚಿತ ಎಂದು ಕಳೆದೆರಡು ದಿನಗಳಿಂದ ಕ್ಷೇತ್ರದಲ್ಲಿ ಗುಸು– ಗುಸು ಕೇಳುತ್ತಿತ್ತು. ಅಲ್ಲದೇ ಅವರು ಕೂಡ ತನ್ನ ಮಾವನೊಂದಿಗೆ ಕ್ಷೇತ್ರದಲ್ಲಿ ಓಡಾಟ ನಡೆಸುತ್ತಿದ್ದರು. ಆದರೆ, ಕೊನೆಯ ಹಂತದಲ್ಲಿ ಇವರಿಗೆ ಟಿಕೆಟ್ ತಪ್ಪಿದ್ದು, ಎಸ್.ಬಾಲರಾಜು ಅವರಿಗೆ ಬಿಜೆಪಿ ವರಿಷ್ಠರು ಮಣೆ ಹಾಕಿದ್ದಾರೆ.

ಲಂಚ ಪಡೆಯುತ್ತಿದ್ದ ಬಿಇಓ, ಸಿಆರ್‌ಪಿ ಲೋಕಾಯುಕ್ತ ಬಲೆಗೆ

ಹನೂರು: ನಿವೃತ್ತ ಶಿಕ್ಷಕನ ಗಳಿಕೆ ರಜೆ ಹಣವನ್ನು ನಗದೀಕರಿಸಲು ಲಂಚ ಪಡೆಯುತ್ತಿದ್ದ ಕ್ಷೇತ್ರ ಶಿಕ್ಷಣಾಧಿಕಾರಿ, ಸಿಆರ್‌ಪಿ ಬುಧವಾರ ಲೋಕಾಯುಕ್ತ ಪೊಲೀಸರ ಬಲೆಗೆ ಬಿದ್ದಿದ್ದಾರೆ.

ಕ್ಷೇತ್ರ ಶಿಕ್ಷಣಾಧಿಕಾರಿ ಶಿವರಾಜು ಹಾಗೂ ಸಿಆರ್‌ಪಿ ಮುನಿರಾಜು ಸಿಕ್ಕಿ ಬಿದ್ದಿದ್ದು, ತಾಲೂಕಿನ ತೋಮಿಯರ್ ಪಾಳ್ಯ ಗ್ರಾಮದ ನಿವೃತ್ತ ಶಿಕ್ಷಕ ವಿಜಯ್ ಕುಮಾರ್ ಅವರ 139 ದಿನಗಳ ಗಳಿಕೆ ರಜೆಯ (ಎನ್ ಕ್ಯಾಶಮೆಂಟ್) ಹಣ ಮಂಜೂರು ಮಾಡಲು 15 ಸಾವಿರ ರೂ.ಗೆ ಬಿಇಓ ಮತ್ತು ಸಿಆರ್‌ಪಿ ಬೇಡಿಕೆ ಇಟ್ಟಿದ್ದರು. ಈ ಸಂಬಂಧ ನಿವೃತ್ತ ಶಿಕ್ಷಕ ವಿಜಯ್‌ಕುಮಾರ್ ಲೋಕಾಯುಕ್ತ ಪೊಲೀಸರಿಗೆ ದೂರು ನೀಡಿದ್ದರು.

ಪಟ್ಟಣದ ಕ್ಷೇತ್ರ ಶಿಕ್ಷಣಾಧಿಕಾರಿ ಕಚೇರಿಯಲ್ಲಿ ನಿವೃತ್ತ ಶಿಕ್ಷಕ ವಿಜಯ್ ಕುಮಾರ್ ಲಂಚ ನೀಡುತ್ತಿದ್ದಾಗ ಲೋಕಾಯುಕ್ತ ಇನ್ಸ್‌ಪೆಕ್ಟರ್ ಲೋಹಿತ್ ಕುಮಾರ್ ಹಾಗೂ ತಂಡ ಬಿಇಓ ಶಿವರಾಜು ಹಾಗೂ ಸಿಆರ್‌ಪಿ ಮುನಿರಾಜುನನ್ನು ವಶಕ್ಕೆ ಪಡೆದು ಹಣವನ್ನು ಮುಟ್ಟುಗೋಲು ಹಾಕಿಕೊಂಡಿದ್ದಾರೆ.

ಹಿಂದೆ ತಿ.ನರಸೀಪುರ ಬಿಇಓ ಆಗಿದ್ದಾಗಲೂ ಶಿವರಾಜು ಲೋಕಾಯುಕ್ತ ದಾಳಿಗೆ ಒಳಗಾಗಿದ್ದರು ಎನ್ನಲಾಗಿದೆ.





ಬಿಇಓ ಶಿವರಾಜು, ಸಿಆರ್‌ಪಿ ಮುನಿರಾಜು

ಲೋಕಾಯುಕ್ತ ಪೊಲೀಸರು ತನಿಖೆ ಮುಂದುವರಿಸಿದ್ದು, ಈ ಸಂಬಂಧ ಲೋಕಾಯುಕ್ತ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

10 ತಿಂಗಳಲ್ಲಿ 100 ಕೋಟಿ ರೂ. ಅನುದಾನ

ಯಳಂದೂರು, ಮಾ.13–ನಾನು ಶಾಸಕನಾದ ಕೇವಲ 10 ತಿಂಗಳ ಅವಧಿಯಲ್ಲೇ 100 ಕೋಟಿ ರೂ.ಗೂ ಅಧಿಕ ಅನುದಾನವನ್ನು ಕೊಳ್ಳೇಗಾಲ ಕ್ಷೇತ್ರದ ಅಭಿವೃದ್ಧಿಗೆ ತಂದಿದ್ದೇನೆ ಎಂದು ಶಾಸಕ ಎ.ಆರ್.ಕೃಷ್ಣಮೂರ್ತಿ ತಿಳಿಸಿದರು.

ತಾಲೂಕಿನ ಗೌಡಹಳ್ಳಿ ಗ್ರಾಮದಲ್ಲಿ ಪಶು ಆಸ್ಪತ್ರೆ ಉದ್ಘಾಟಿಸಿ ಮಾತನಾಡಿದ ಅವರು, ನಮ್ಮ ಸರ್ಕಾರ ಗ್ಯಾರಂಟಿ ಯೋಜನೆಗಳಿಗೆ ಅನುದಾನವನ್ನು ಮೀಸಲಾಗಿಟ್ಟರೂ ಸದೃಢವಾಗಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ರಾಜ್ಯದ ಎಲ್ಲಾ ಕ್ಷೇತ್ರಗಳ ಅಭಿವೃದ್ಧಿಗೆ ಅನುದಾನ ಮೀಸಲಿಟ್ಟಿದ್ದಾರೆ. ಈ ಹಿನ್ನೆಲೆಯಲ್ಲಿ ನನ್ನ ಕ್ಷೇತ್ರ ವ್ಯಾಪ್ತಿಯ ಯಳಂದೂರಿನ 100 ಹಾಸಿಗೆಗಳ ಆಸ್ಪತ್ರೆಗೆ 40 ಕೋಟಿ ರೂ. ಬಿಳಿಗಿರಿರಂಗನಬೆಟ್ಟದ ರಸ್ತೆ ಅಭಿವೃದ್ಧಿಗೆ 20 ಕೋಟಿ ರೂ., 25 ಕೋಟಿ ರೂ. ವಿಶೇಷ ಅನುದಾನ ತರಲಾಗಿದೆ ಎಂದರು.

ಎಲ್ಲಾ ಸಮುದಾಯ ಭವನಗಳನ್ನು ಪೂರ್ಣಗೊಳಿಸಲು 12 ಕೋಟಿ ರೂ. ನೀಡಲಾಗಿದೆ. ಐಟಿಐ ಕಾಲೇಜು ಕಟ್ಟಡ, ವಿವೇಕ್ ಯೋಜನೆ, ಪಾಲಿಟೆಕ್ನಿಕ್ ಕಾಲೇಜು ಕಟ್ಟಡಗಳೂ ಸೇರಿದಂತೆ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಹಣ ಮೀಸಲಿಡಲಾಗಿದೆ ಎಂದರು.

ಪಶು ಇಲಾಖೆಯ ಉಪನಿರ್ದೇಶಕ ಡಾ.ಎಲ್.ಹನುಮೇಗೌಡ, ಸಹಾಯಕ ನಿರ್ದೇಶಕರಾದ ಡಾ.ಶಿವಣ್ಣ, ಡಾ.ಎಸ್.ಶಿವರಾಜು, ಗ್ರಾಪಂ ಸದಸ್ಯರು, ಪಿಡಿಓ ಇತರರಿದ್ದರು.



ಗುಂಡ್ಲುಪೇಟೆ ತಾಲೂಕಿನ ಬೇಗೂರು ಸಮೀಪದ ನಂಜನಗೂಡು ತಾಲೂಕಿನ ದೇವರಾಯಶೆಟ್ಟಿಪುರ (ಹಂಚಿಪುರ) ಗ್ರಾಮದ ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘದ ಅಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆಯಾದ ಸರ್ವಮಂಗಳಾ ಅವರನ್ನು ಉಪಾಧ್ಯಕ್ಷೆ ಮಂಜುಳಾ, ನಿರ್ದೇಶಕರಾದ ಮಂಗಳಮ್ಮ, ರತ್ನಮ್ಮ, ಚಂದ್ರಮ್ಮ, ಮುತ್ತಮ್ಮ ಅಭಿನಂದಿಸಿದರು.

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

WANTED
B.Sc., B.Ed and D.Ed Teachers
Contact: 9731258008 or 7259613783
Timings: 9am to 5pm

WANTED
ACCOUNTANT
Experienced full time Accountant
Tally prime / E-filling / GST filling work etc @ bannimantap
Contact
8618312269

ಬೇಕಾಗಿದ್ದಾರೆ
HPCL ಕಂಪನಿ ಪೆಟ್ರೋಲ್ ಬಂಕಿನಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ. ESI, PF ಇರುತ್ತದೆ.
ಸಂಪರ್ಕಿಸಿ: ಜೆ.ಎಲ್.ಬಿ. ರಸ್ತೆ, ಮೈಸೂರು
9741798683
8971538250

WALK IN INTERVIEW
SAI GURUKULA PRESCHOOL
Hebbal & JP Nagar
Requires Female Teachers and Staff with experience
Teachers (B.Ed, D.Ed or NTT) -3Nos.
Asst Teachers - 2 Nos
Front Office Staff (Any Degree) 1 No.
Care taker Post - 1No.
9686862606
7373969663

Site for Sale (MUDA)
SILICON VALLEY LAYOUT
(Near Infosys)
35x50 East-North Corner
30x50, E/F, Preethi Layout, Vijayanagar 4th Stage.
8217538285

FOR SALE
FARM LAND WITH AN AREA OF 5 ACRES
Holenarasipura Taluk
Hassan District
9845073953
9845016564

ಶ್ರೀ ಗೌರೀಶಂಕರ ಟ್ರಾವೆಲ್ಸ್
30–3–24 (3 ದಿನ): ಅಯೋಧ್ಯೆ, ಕಾಶಿ. 11–4–24 (4 ದಿನ): ಬಾದಾಮಿ, ಕೂಡಲಸಂಗಮ, ಹಂಪಿ. 26–4–24 (6 ದಿನ): ಅಯೋಧ್ಯೆ, ಕಾಶಿ, ಗಯಾ. 30–5–24 (11 ದಿನ): ಅಯೋಧ್ಯೆ, ಕಾಶಿ, ನೇಪಾಳ್, ಮುಕ್ತಿನಾಥ್, ಲುಂಬಿನಿ. 15–7–24 (11 ದಿನ): ವೈಷ್ಣೋ ದೇವಿ, ಅಮರ್‌ನಾಥ್, ಶ್ರೀನಗರ, ಗುಲ್‌ಮಾರ್ಗ್.
(ವಿಮಾನ, ಬಸ್, ಊಟ, ರೂಂ)
Mob: 9620002114

ಬೇಕಾಗಿದ್ದಾರೆ
ಮಂಗಳೂರಿನ ಹೆಸರಾಂತ ಸಂಸ್ಥೆಗೆ ಸಿಹಿ ತಿಂಡಿ ಮಾಡುವವರು ಬೇಕಾಗಿದ್ದಾರೆ ಉತ್ತಮ ವೇತನ ಊಟ ವಸತಿ Familyಗೆ ಬೇಕಾಗಿದಲ್ಲಿ ವಸತಿ ಮಾಡಿಕೊಡಲಾಗುವುದು.
WhatsApp 9448152290
CALL: 9480271070

WANTED
ಹೆಲ್ಪರ್ಸ್ ಹುಡುಗರು
ಐಟಿಐ ಎಲೆಕ್ಟ್ರಿಕಲ್ಸ್ ಆದವರಿಗೆ ಆದ್ಯತೆ
ದ್ವಿಚಕ್ರ ವಾಹನ ಹೊಂದಿರಬೇಕು
ವಯಸ್ಸು 18–25 ವರ್ಷ
ಸರಸ್ವತಿಪುರಂ, ಮೈಸೂರು
98808 28999

MUDA KHATA SITE
East Facing 1124 Sqft Corner Site, Dadadahalli, JNANABHARATI Layout Airport Behind Road
Direct Owner
9342123373

ವೃದ್ಧಾಶ್ರಮ
ಹಿರಿಯ ಜೀವಗಳಿಗೆ, ಹಾಸಿಗೆ ಹಿಡಿದ ವೃದ್ಧರನ್ನು, ಪಾರ್ಶ್ವವಾಯು ಪೀಡಿತರು, ಹಾಗೂ ಕೈಲಾಗದ ವಯೋ ವೃದ್ಧರನ್ನು ಮನೆಯಂತೆಯೇ ನೋಡಿ ಕೊಳ್ಳುತ್ತಿರುವ ಸಂಸ್ಥೆ ನಮ್ಮ ಮೈಸೂರಿನಲ್ಲಿ ಊಟ, ವಸತಿ, ವೈದ್ಯಕೀಯ ಸೌಲಭ್ಯದೊಂದಿಗೆ ಇಚ್ಛೆಯುಳ್ಳವರು ಸಂಪರ್ಕಿಸಿ
9110455297 | 9591557126

ಬೇಕಾಗಿದ್ದಾರೆ
ಮೈಸೂರು ಹೆಬ್ಬಾಳು ಕೈಗಾರಿಕಾ ಪ್ರದೇಶದಲ್ಲಿರುವ ಅನಿಮಲ್ ಫೀಡ್, ಲೋಡಿಂಗ್ ಅನ್ ಲೋಡಿಂಗ್ ಕಂಪನಿಗೆ ಪುರುಷರು 18 ರಿಂದ 45 ವರ್ಷದ ಒಳಗಿನವರು ಕೆಲಸಕ್ಕೆ ಬೇಕಾಗಿದ್ದಾರೆ. ಸಂಬಳ 18000 & OT ಸೇರಿ 24000 ಇರುತ್ತದೆ. ಸಂಪರ್ಕಿಸಿ: ಸಾಯಿ ಕೃಪ ಎಂಟರ್‌ಪ್ರೈಸಸ್
ರತ್ನಯ್ಯ: 9900889325
ಪ್ರಕಾಶ: 7348833792

SHED FOR RENT
30x50 Shed & 50x150 Open Land with 37 HP Power Borewell
9900128602
Near Sterling Theatre

S.K.CONSTRUCTION
ಹೊಸ ಮನೆ ಕಟ್ಟಬೇಕೇ? ನಿಮ್ಮ ಕೈಗೆಟುಕುವ ಬೆಲೆಯಲ್ಲಿ ಅತಿ ಉತ್ತಮ ಗುಣಮಟ್ಟದಲ್ಲಿ Engineering Plan, 3D Elivation ಸಹಿತ ನಾವೇ LOAN ಮಾಡಿ ನಿಮ್ಮ ಕನಸಿನ ಮನೆ ನಿರ್ಮಿಸಿ ಕೊಡುತ್ತೇವೆ.
9620528490

COMMERCIAL SITE FOR SALE
50x80, 80 ft Road, Manasi Nagar Main Road, (RR Complex Road) Near Bannur Ring road Junction
Price : 6000/- Per Sqft (Nego)
7019769205

ಕಂಪ್ಯೂಟರ್ ತರಬೇತಿ
Basic Computer and Tally ERP-9 Rs. 2999/-
(ನುಡಿ – 4.0 ಮತ್ತು ಇಂಟರ್‌ನೆಟ್ ಬ್ರೌಸಿಂಗ್ ಉಚಿತ)
0821-3553964
6364116745

HOUSE FOR RENT
New spacious 4 Master Bedroom, all attached, Bath, Kitchen, Hall, 1700 sqft., suitable for Playhome, baby care home, Coaching centre, Ayurvedic Clinic, Diagnostic Centre, Mini Nursing Home or any Office in Siddhartha Layout.
Contact: 8073412866

COMMERCIAL SHOP FOR RENT
Front approx 300 sq ft & Back 80 Sq ft.
Address - K. R Circle.
Near cycle stand. Mysore.
Contact -9742717345

DTCP SITES FOR SALE
DTCP Sites
Rs. 699 per sq.ft.,
Near Jayapura,
H.D. Kote Road, Mysore.
9590491194,9606783264

ಮನೆ ಮಾರಾಟಕ್ಕಿದೆ
ಜೆಪಿ ನಗರ ಪಕ್ಕದಲ್ಲಿರುವ ಮಾನಂದವಾಡಿ ಮುಖ್ಯ ರಸ್ತೆಗೆ ತಾಗಿಕೊಂಡಿರುವ ಪ್ರಕೃತಿ ಬಡಾವಣೆಯಲ್ಲಿ ಸುಸಜ್ಜಿತವಾದ 20X30 ಡ್ಯೂಪ್ಲೆಕ್ಸ್ ಹೊಸ ಮನೆ ಮಾರಾಟಕ್ಕಿದೆ. ನೇರ ಮಾಲೀಕರನ್ನು ಸಂಪರ್ಕಿಸಲು ಕರೆ ಮಾಡಿ.
Mob: 7019188932

WANTED
- North Indian Manpower Supply Contractor.
- Accommodation Free
- 8% commission
- 50 Peoples required per Month.

Call : 8748991416

CONSTRUCTION
SKANDA PROPERTIES
ಉತ್ತಮ ಗುಣಮಟ್ಟ ಮತ್ತು ಆಕರ್ಷಕ ಬೆಲೆಯಲ್ಲಿ ಮನೆ ನಿರ್ಮಿಸಲಾಗುವುದು
Starts @ 1850/- Sft
9379888558

ಪ್ರವಾಸ
ವಾರಣಾಸಿ, ಪ್ರಯಾಗ್‌ರಾಜ್, ಅಯೋಧ್ಯೆ, ಗಯಾ, ಬುದ್ದಗಯಾ, AC ರೈಲು, ಊಟ, ವಸತಿ ಲೋಕಲ್ ಬಸ್ ಸೇರಿ 16000/– ವಿಮಾನ ಪ್ರಯಾಣಕ್ಕೆ 30,000/– ನಿಮ್ಮ ದಿನಾಂಕಕ್ಕೆ ಪ್ರವಾಸ ಮಾಡಿಕೊಡಲಾಗುವುದು.
9902698623

ಬೇಕಾಗಿದ್ದಾರೆ
ಬ್ಯಾಂಕಿಂಗ್ ಸೆಕ್ಟರ್‌ಗೆ ಟೆಲಿಕಾಲರ್ ಬೇಕಾಗಿದ್ದಾರೆ. Experienced & Freshers (SSLC and above) ಹುಡುಗ ಮತ್ತು ಹುಡುಗಿಯರು ಹಾಗೂ ಕಲೆಕ್ಷನ್ ಮತ್ತು ರಿಕವರಿ ಹುದ್ದೆಗಳಿಗೆ ಬೇಕಾಗಿದ್ದಾರೆ. ದ್ವಿಚಕ್ರ ವಾಹನ ಹೊಂದಿರಬೇಕು.
9591425134

ಬೋಳು ತಲೆಯ ಸಮಸ್ಯೆಯೇ?

ಕಿಮೊತೆರಪಿ ಚಿಕಿತ್ಸೆಗೆ ಒಳಪಡುತ್ತಿರುವ ರೋಗಿಗಳಿಗೆ ಸ್ವರ್ಥಾತ್ಮಕ ಬೆಲೆಯಲ್ಲಿ ಹೇರ್ ವಿಗ್‌ಗಳು ದೊರೆಯುತ್ತವೆ.
SMART HAIR FIXING
574, 9th Cross, Anikethana Road, kuvempunagar, Mysuru
MYSURU 9611028523 MANGALORE 9343142258

ಪ್ರಸಿದ್ಧ ಮಾಹಮಾಂತ್ರಿಕ ಕೇರಳ ಶ್ರೀ ಭಗವತಿ ಜ್ಯೋತಿಷ್ಯರು
ಪಂಡಿತ್॥ ಪ್ರಸಾದ್ ಪೊದುವಾಳ್
9731839596
ಇವರು ಸ್ತ್ರೀ–ಪುರುಷ, ಪ್ರೇಮ, ಸಂತಾನ, ದಾಂಪತ್ಯ ಸಮಸ್ಯೆ, ಸಾಲಬಾಧೆ, ಭೂಮಿ, ಕೋರ್ಟು, ತನ್ನವರೆ ತನಗೆ ಶತ್ರು ಪ್ರೇತಬಾದೆ, ಇನ್ನೂ ಮುಂತಾದ ಸರ್ವ ಸಮಸ್ಯೆಗಳಿಗೆ 2 ದಿನದಲ್ಲಿ ಶಾಶ್ವತ ಪರಿಹಾರ ನೇರ ಭೇಟಿಯಾಗಿ ಪರಿಹಾರಿಸಿಕೊಳ್ಳಿ
ಮನೆ ವಿಳಾಸ ಲಕ್ಷ್ಮಿ ನಿವಾಸ # 19/ಡಿ2, ಹೋಟೆಲ್ ದೋಸೆ ಕಾರ್ನರ್ ಪಕ್ಕ, ಹೊಸ ಡಿ.ಸಿ ಆಫೀಸ್ ಎದುರು ಸಿದ್ದಾರ್ಥ ಲೇಔಟ್, ಮೈಸೂರು

AQUAGUARD AND KENT
Sales and Service.
Service charge :300/-
9901200444

IMKTA - PRE-SCHOOL TEACHER TRAINING
Diploma Courses for SSLC, PU or any Degree Candidates.
Regular / Saturday / Correspondence Courses with practical training.
www: imkta.in
ALPHA INTERNATIONAL SCHOOL @ Srirampura
Call: 7829937469
ONLINE TRAINING AVAILABLE

ಉದ್ಯೋಗವಕಾಶ
ಮಹಿಳೆಯರು, ಯುವತಿಯರು ಹಾಗೂ ಯುವಕರು ನಮ್ಮ ಶಾಖೆಗಳಲ್ಲಿ ವಯಸ್ಸಾದ ಹಿರಿಯ ನಾಗರೀಕರನ್ನು ಮನೆಯಲ್ಲೇ ಉಳಿದುಕೊಂಡು ನೋಡಿಕೊಳ್ಳಲು ಹೋಂ ನರ್ಸ್‌ಗಳು ಬೇಕಾಗಿದ್ದಾರೆ. ತಿಂಗಳ ವೇತನ 13000 ರಿಂದ 20000 ರೂ ವರೆಗೆ ಉಚಿತ ಊಟ ಮತ್ತು ವಸತಿಯೊಂದಿಗೆ ವಯೋಮಿತಿ 18–50 ವರ್ಷ ವಯಸ್ಸಿನವರು ಅಗ್ರಹಾರ
9035113222

ಮನೆ ಮಾರಾಟಕ್ಕಿದೆ
15x20 ಅಡಿಯ ಗ್ರೌಂಡ್, ಫಸ್ಟ್, ಸೆಕೆಂಡ್ ಫ್ಲೋರ್ ನಲ್ಲಿ ತಲ ಒಂದು ಬೆಡ್ ರೂಮ್ ಇರುವ ಮತ್ತು 3ನೇ ಫ್ಲೋರ್ ನಲ್ಲಿ (ಒಂದು ರೂಮ್ + ವಾಶ್ ರೂಮ್) ಇರುವ 15000/– ಬಾಡಿಗೆ ಬರುವ ರೆವಿನ್ಯೂ ಮನೆ ಮಾರಾಟಕ್ಕಿದೆ. ಜನತಾ ನಗರ ಮೈಸೂರು 29.99 ಲಕ್ಷಗಳು ಮಾತ್ರ
9036733220

ಕೆಲಸಕ್ಕೆ ಬೇಕಾಗಿದ್ದಾರೆ
ಕಂಪ್ಯೂಟರ್ ಆಪರೇಟಿಂಗ್ ಹಾಗೂ ಟೆಲಿಕಾಲಿಂಗ್ ಕೆಲಸಕ್ಕೆ ಬೇಕಾಗಿದ್ದಾರೆ. ಮಹಿಳೆಯರಿಗೆ ಆದ್ಯತೆ.
Mob: 98443 55941

ಸೈಟುಗಳು ಮಾರಾಟಕ್ಕಿವೆ
(ಮುಡಾ ಅಪ್ರೂವಲ್)
20x30, 30x40
ಶ್ರೀನಗರ ಹಿಂಭಾಗ ಮತ್ತು ಶ್ರೀರಾಂಪುರ ರಿಂಗ್ ರೋಡ್ ಹತ್ತಿರ
8050345574

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್
Mob: 8861401315

ಬೇಕಾಗಿದ್ದಾರೆ
ವಾಹನಗಳ ವಾಟರ್ ಸರ್ವೀಸ್ ಸ್ಟೇಷನ್ ಇಲ್ಲಿಗೆ ನುರಿತ ಕೆಲಸಗಾರರು ಬೇಕಾಗಿದ್ದಾರೆ
ವಸತಿ ಸೌಲಭ್ಯ ಲಭ್ಯವಿದೆ
ಕೂಡಲೇ ಸಂಪರ್ಕಿಸಿ:
94495 14889
83108 14289

FOR RENT
2250 Sq.ft. shed for Shamiyana Godown in Gayathripuram, Mysore.
9742934598, 9480966998

ಬೇಕಾಗಿದ್ದಾರೆ
ಕಂಪನಿಯಲ್ಲಿ 12 ಗಂಟೆಗಳ ಕೆಲಸ ಮಾಡಲು Helpers ಬೇಕಾಗಿದ್ದಾರೆ. ಕೆಲಸದ ಸಮಯ: ಬೆಳಿಗ್ಗೆ 8 ರಿಂದ ಸಂಜೆ 8ರ ವರೆಗೆ ಸಂಜೆ 8 ರಿಂದ ಬೆಳಿಗ್ಗೆ 8ರವರೆಗೆ ಸಂಬಳ: 16000/– (ವಸತಿ ಸೌಲಭ್ಯ ಇರುತ್ತದೆ.
9513777350

ಮೈಸೂರು ಮ್ಯಾರೇಜ್ ಬ್ಯೂರೋ
ಎಲ್ಲಾ ಜಾತಿಯ ವಧುವರರು ವಿಧುರರು, ವಿಧವೆಯರು ವಿಚ್ಛೇದಿತರು ನೇರ ಸಂಪರ್ಕಿಸಿ ಮದುವೆ ವಿಳಂಬವಾದಲ್ಲಿ ಪರಿಹಾರ ಶತಸಿದ್ಧ
9448229184
7899625268
Lady Receptionist ಬೇಕಾಗಿದ್ದಾರೆ

ಸಾಲ / LOANS
* House / Site Purchase
* Construction Loan
* Mortgage Loan
Loans for MUDA, Corporation, Revenue, 11A & 11B Property.
98807-18980

ತಕ್ಷಣ ಬೇಕಾಗಿದ್ದಾರೆ
ಬೋಗಾದಿ, ದಟ್ಟಗಳ್ಳಿ, ಬಲ್ಲಾಳ್ ಹತ್ತಿರ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್‌ಗಳು ಹಾಗೂ ಫೀಲ್ಡ್ ಆಫೀಸರ್‌ಗಳು ಬೇಕಾಗಿದ್ದಾರೆ. ಸಂಪರ್ಕಿಸಿ:
8971367078, 9740480171

ಕರ್ನಾಟಕ ಫ್ಯಾಷನ್ ಶೋ 2024
31–3–2024 ಮೈಸೂರಿನ ಪುರಭವನದಲ್ಲಿ 3 ವರ್ಷದಿಂದ 65 ವರ್ಷದವರೆಗೆ ಭಾಗವಹಿಸುವವರಿಗೆ ನೆನಪಿನ ಕಾಣಿಕೆ, ಪ್ರಮಾಣ ಪತ್ರ ನೀಡುತ್ತೇವೆ. ಪ್ರವೇಶ ಶುಲ್ಕ 1000/–. ಸಂಪರ್ಕಿಸಿ:
Mob: 88676-88676

ಪ್ರಮಾಣ ಪತ್ರ
ಕುಮಾರ ಎನ್., S/o ನರಸೇಗೌಡ ಆದ ನಾನು ನಂ. 369/D, ಹೊಸಬೀದಿ, ಕುಂಬಾರಕೊಪ್ಪಲು, ದೇವರಾಜ ಮೊಹಲ್ಲಾ, ಮೈಸೂರು–570 016 ಇಲ್ಲಿ ವಾಸವಿದ್ದು ನನ್ನ ಹೆಸರು ಶಾಲಾ ದಾಖಲಾತಿ, ಆಧಾರ್ ಕಾರ್ಡ್, ವೋಟರ್ ಐಡಿ ಹಾಗೂ ಪಾನ್‌ಕಾರ್ಡ್‌ನಲ್ಲಿ ಕುಮಾರ. ಎನ್. (Kumar. N) ಎಂದು ನಮೂದಾಗಿರುತ್ತದೆ. ಆದರೆ ಪಾಸ್‌ಪೋರ್ಟ್ ಕಾರ್ಡಿನಲ್ಲಿ ಕುಮಾರ್. ಎನ್. (Kumar. N) ಎಂದು ನಮೂದಾಗಿರುತ್ತದೆ. ಆದ್ದರಿಂದ ನನ್ನ ಹೆಸರು ಕುಮಾರ ಎನ್. ಎಂದು ನೋಟರಿ ಮುಂಗಳಮ್ಮನ ಎದುರು ಪ್ರಮಾಣೀಕರಿಸಿರುತ್ತೇನೆ.
ಸಹಿ/– ಕುಮಾರ. ಎನ್.

ಮೈನಗರ...ಮೈನಗರ...ಮೈನಗರ
ಬನ್ನೂರು ರಸ್ತೆಯ ಮೈನಗರ ಬಡಾವಣೆಯಲ್ಲಿ ನೊಂದಣಿಗೆ ಸಿದ್ಧವಿರುವ ಮುಡಾ ನಿವೇಶನಗಳು ಮಾರಾಟಕ್ಕಿವೆ. ಸಂಪರ್ಕಿಸಿ:
8088187466, 9660160225

ಯುಗಾದಿ ಹಬ್ಬದ ಪ್ರಯುಕ್ತ ಕೇವಲ 30 ದಿನಗಳಲ್ಲಿ ಬ್ಯೂಟಿಷಿಯನ್ ತರಬೇತಿಯನ್ನು ಒಂದು ಒಳ್ಳೆಯ ರಿಯಾಯಿತಿ ದರದಲ್ಲಿ ಕೇವಲ 12000/– ರೂಗಳಲ್ಲಿ ನೀಡಲಾಗುತ್ತದೆ. ಜೊತೆಗೆ Certificate ಸಹ ಕೊಡಲಾಗುತ್ತದೆ ಟೈಲರಿಂಗ್ ತರಬೇತಿಯನ್ನು ಸಹ ರಿಯಾಯಿತಿ ದರದಲ್ಲಿ ನೀಡಲಾಗುತ್ತದೆ. ಆಸಕ್ತಿಯುಳ್ಳವರು ಈ ಕೆಳಗಿನ ನಂಬರಿಗೆ ಸಂಪರ್ಕಿಸಿ:
ಸ್ಥಳ: ಲ್ಯಾವೆಂಡರ್ ಪಾರ್ಕ್ ಸಲೂನ್
9035417045
9482136317

SITE FOR SALE
Mogarhalli (Manti) 40x62 Dimention, Site # 49, North facing Site Before Brigade Oaktree Villa Project
Clear Papers
Price 2200/- Sqft (Fixed Price)
No Brokers Pls
9845033998

ಶ್ರೀಚಾಮುಂಡೇಶ್ವರಿ ಟ್ರೇಡರ್ಸ್, ಬಂಡಿಪಾಳ್ಯ
ನಂಬರ್ 1 ಕ್ವಾಲಿಟಿ ಹುರುಳಿಕಾಳು ಹೋಲ್‌ಸೇಲ್ ಬೆಲೆಯಲ್ಲಿ ದೊರೆಯುತ್ತದೆ
Mob: 9379235789

ತಕ್ಷಣ ಬೇಕಾಗಿದ್ದಾರೆ
ಟೆಲಿಕಾಲಿಂಗ್ ಕೆಲಸಕ್ಕೆ ಹುಡುಗಿಯರು ಬೇಕಾಗಿದ್ದಾರೆ. (ಮಂಡ್ಯ, ಮೈಸೂರು) 8000 ರಿಂದ 10,000 fixed ಸಂಬಳವಿರುತ್ತದೆ ಹಾಗೂ ಇನ್‌ಸೆಂಟೀವ್ ಇರುತ್ತದೆ.
9606084390, 9606084387

ಬೇಕಾಗಿದ್ದಾರೆ
ಸನ್‌ಡೈರೆಕ್ಟ್ ಡಿ.ಟಿ.ಹೆಚ್‌ನಲ್ಲಿ ಟೆಕ್ನಿಷಿಯನ್ ಆಗಿ ಕೆಲಸ ಮಾಡಲು ದ್ವಿಚಕ್ರ ವಾಹನವಿರುವ ಹುಡುಗರು ಬೇಕಾಗಿದ್ದಾರೆ. ITI, SSLC, PUC ಪಾಸ್ ಅಥವಾ ಫೇಲ್ ಆಗಿದ್ದವರು ತರಬೇತಿಯನ್ನು ನಾವೇ ಕೊಡುತ್ತೇವೆ. ಆಕರ್ಷಕ ಸಂಬಳ ಮತ್ತು ಇನ್‌ಸೆಂಟೀವ್ ಇರುತ್ತದೆ. ಸಂಪರ್ಕಿಸಿ:
9964555920, 8867019475

ಪ್ರಮಾಣ ಪತ್ರ
ಮೈಸೂರು ತಾಲ್ಲೂಕು, ಕಸಬಾ ಹೋಬಳಿ, ಬೆಲವತ್ತ ಗ್ರಾಮ, ಆರ್.ಬಿ.ಐ. ಪೋಸ್ಟ್ ಮನೆ ನಂ. 227ರಲ್ಲಿ ವಾಸವಾಗಿರುವ ಲೇಟ್ ಜೈ ಕುಮಾರ್ ರವರ ಧರ್ಮಪತ್ನಿಯಾದ ಶ್ರೀಮತಿ ಶಾಂತ (Shanta) ಆದ ನಾನು ಪ್ರಮಾಣೀಕರಿಸುವುದೇನೆಂದರೆ, ನನ್ನ ಎಲ್ಲಾ ದಾಖಲಾತಿಗಳಲ್ಲೂ (ಆಧಾರ್ ಕಾರ್ಡ್, ಗುರುತಿನ ಚೀಟಿ, ಪಡಿತರ ಚೀಟಿ) ನನ್ನ ಹೆಸರು ಶಾಂತ (Shanta) ಎಂದು ಸರಿಯಾಗಿರುತ್ತದೆ. ಆದರೆ ಎಸ್.ಬಿ.ಐ ಬ್ಯಾಂಕ್ ಮೈಸೂರು ರ ಬ್ಯಾಂಕ್ ಪುಸ್ತಕದಲ್ಲಿ ನನ್ನ ಹೆಸರನ್ನು ಶಾಂತಿ (Shanti) ಎಂದು ನಮೂದಾಗಿದೆ. ಈ ಮೂಲಕ ನಾನು ಪ್ರಮಾಣೀಕರಿಸುವುದೇನೆಂದರೆ ಶಾಂತ (Shanta) ಹಾಗೂ ಶಾಂತಿ (Shanti) ಎಂಬ ಎರಡೂ ಹೆಸರು ನನ್ನದೇ ಆಗಿದ್ದು, ಎರಡೂ ಹೆಸರಿನ ವ್ಯಕ್ತಿಯು ನಾನೇ ಆಗಿರುತ್ತೇನೆಂದು ನೋಟರಿ ರಾಜೇಂದ್ರ ಕುಮಾರ್ K.M. ಎದುರು ಪ್ರಮಾಣೀಕರಿಸಿರುತ್ತೇನೆ
ಸಹಿ/– ಶಾಂತ

"ಓಂ ನಮಃ ಶಿವಾಯ"
ಶಿವಂ ಬಡಾವಣೆ ಮೈಸೂರು–ನಂಜನಗೂಡು ಹೈವೆ ರಸ್ತೆಯಿಂದ ಕೇವಲ 1 ಕಿ.ಮೀ. ಅಂತರದಲ್ಲಿ ಮುಡಾ ಮತ್ತು ಸಾಲ ಸೌಲಭ್ಯವುಳ್ಳ ನಿವೇಶನಗಳು ಮಾರಾಟಕ್ಕಿವೆ.
7760591291, 6363798472

SITES FOR SALE
1. 30x40 Dattagalli
2. 40x45 R.K.Nagar
3. 30x40 Srirampura Ring Road
4. 30x45 Srirampura Ring Road
5. Sites Near MIT College

9483358399

WANTED
Sales Executive for Distribution
office, Experienced in hardware Shop, for taking order
Address : 48, TSK Layout, Boddamma Thayi Temple Belwadi, Mysore
8310918004

FOR SALE
1) 20x30, 30x40, 30x50 near Defence Apartment H.D. Kote Road.
2) 30x50 Varuna Lake near Narasipura Road.
3) 2, 3 BHK flats in Ramakrishnanagar.
4) 100x100 Farm house KRS Back Water attach 19 Lakhs starts.
5) 40x72 house Vidyaranyapuram.
6) 20x30 House Giridarshini Layout, Alanahalli attach.

PRAKRUTHI PROPERTIES
9538690359, 9035990359

ಅನುಬಂಧ ಮ್ಯಾರೇಜಸ್
ವಧುವರರನ್ನು ಹುಡುಕಲು ಸಹಾಯ ಬೇಕೆ ? ನಮಗೆ ಕರೆ ಮಾಡಿ
Mob: 6361740552
ನಮ್ಮ ಸಂಸ್ಥೆಗೆ ವಿದ್ಯಾವಂತ ಯುವತಿಯರು ಬೇಕಾಗಿದ್ದಾರೆ.

30x40 DTCP 'A'
ಖಾತೆಯುಳ್ಳ ಸೊಸೈಟಿ E/F ಸೈಟು ಮಾರಾಟಕ್ಕಿದೆ. 16 ಲಕ್ಷಗಳು. ನಂಜುಂಡೇಶ್ವರ ನಗರ, ಟಿವಿಎಸ್ ಫ್ಯಾಕ್ಟರಿ ಹತ್ತಿರ, ಮೈಸೂರು.
9742198093

ಕೃಷ್ಣಂ ಹಿಲ್ ವೀವ್
ಬಂಡಿಪಾಳ್ಯ ರಿಂಗ್ ರಸ್ತೆಯಿಂದ ಕೇವಲ 500 ಮೀ ಅಂತರದಲ್ಲಿ ಮುಡಾ ಮತ್ತು ಸಾಲ ಸೌಲಭ್ಯವುಳ್ಳ ನಿವೇಶನಗಳು ಮಾರಾಟಕ್ಕಿವೆ.
9353843772, 7022718593

ಬಾಲಾಜಿ ಕೃಪ ಪ್ರಾಪರ್ಟೀಸ್
ಮೈಸೂರಿನ ಲಲಿತಾದ್ರಿಪುರ ರಿಂಗ್ ರಸ್ತೆಗೆ ಹತ್ತಿರವಿರುವ ಮುಡಾ ನಿವೇಶನಗಳು ಮಾರಾಟಕ್ಕಿವೆ. ಸಂಪರ್ಕಿಸಿ:
9019562901, 8217596732

WANTED
ACCOUNTANT (Female)
(Min 2-3 yrs Exp. in Auditor Office)
Electrical Engineer (Female Only)
(2 years + experience in Handling ESCOM GK, WS and Linkline Work
6366366388
Call between 9.30 am to 5.30 pm
Mail your C.V: acpltd123@gmail.com

COMMERCIAL SHOP FOR RENT
Ground Floor 1850 Sqft
Address: Near Royal City Club 80 ft Road, Kergalli Post
9740811277
Shashikumar H

ಬೇಕಾಗಿದ್ದಾರೆ
ಒಂಟಿಕೊಪ್ಪಲ್‌ನಲ್ಲಿರುವ ಮನೆಗೆ ಮನೆ ಕೆಲಸಕ್ಕೆ ಹಾಗೂ ಅಡುಗೆ ಕೆಲಸಕ್ಕೆ ಇಬ್ಬರು ಹೆಂಗಸರು ಬೇಕಾಗಿದ್ದಾರೆ. 40 ರಿಂದ 45 ವರ್ಷದೊಳಗಿನ ಹೆಂಗಸರಿಗೆ ಮೊದಲ ಆದ್ಯತೆ. ಬೆಳಿಗ್ಗೆ 8 ರಿಂದ 3 ಗಂಟೆಯವರೆಗೆ ಕೆಲಸ.
Mob: 9916623340

ಬರವಣಿಗೆ ಕೆಲಸ
ಮನೆಯಿಂದಲೇ ಫಾರಂ ಭರ್ತಿ ಮಾಡುವ ಉದ್ಯೋಗ ಮಾಡಿ ಪ್ರತಿ 1 ಫಾರಂಗೆ 30 ರೂ.ಗಳನ್ನು ಪಡೆಯಿರಿ.
9731891409

ಕೇರಳ ಶ್ರೀ ಪ್ರಸಿದ್ಧ ಜ್ಯೋತಿಷ್ಯರು
Famous Astrologer
ಪಂಡಿತ್ ಸಂತೋಷ್. 9741250896
ಕಾಣತೂರ್ ನಾಲ್ವರ ದೈವ, ಕಲ್ಲುಟಿ ಭಗವತಿ ಶಕ್ತಿಯಿಂದ ದಾಂಪತ್ಯ ಸಮಸ್ಯೆ, ಲೈಂಗಿಕ ಸಮಸ್ಯೆ, ಸ್ತ್ರೀ ಪುರುಷ ಪ್ರೇಮ ವಿಚಾರ, ಶತ್ರು ಬಾಧೆ, ಹಣಕಾಸಿನ ತೊಂದರೆ, ಮಾನಸಿಕ ಚಿಂತೆ, ಪ್ರೇತ ಬಾಧೆ, ವಿದೇಶ ಪ್ರಯಾಣ ಇನ್ನೂ ಮುಂತಾದ ಯಾವುದೇ ಕಠಿಣ ಸಮಸ್ಯೆಗಳಿಗೆ 3 ದಿನದಲ್ಲಿ ಶಾಶ್ವತ ಪರಿಹಾರ ಮಾಡಿಕೊಡುತ್ತಾರೆ.
ಖಾಯಂ ವಿಳಾಸ: ವಿನಯ ಮಾರ್ಗ ರಸ್ತೆ,, ಶ್ರೀ ಸಿದ್ಧಿವಿನಾಯಕ ದೇವಸ್ಥಾನದ ಎದುರು, ಬ್ಯಾಂಕ್ ಆಫ್ ಬರೋಡ ಪಕ್ಕ, ಸಿದ್ಧಾರ್ಥ ನಗರ, ಮೈಸೂರು

ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ
NO TARGET, TYPING WORK
ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.
8884439666

ಕೇರಳ ಶ್ರೀ ಪ್ರಸಿದ್ಧ ಮಹಾ ಮಾಂತ್ರಿಕ ಜ್ಯೋತಿಷ್ಯರು, ನಂ.1 ಮೋಡಿ ತಜ್ಞರು
ಪಂಡಿತ್ ಕೆ.ಎಸ್.ಕೃಷ್ಣಮೂರ್ತಿ
ಮೊ.: 9741806990
ತಾಯಿ ಚಾಮುಂಡೇಶ್ವರಿ ಕಾಣತೂರೆ ನಾಲ್ವರ ದೈವ ಚೌಡಮ್ ಕರೆ ಭಗವತಿ ಮಹಾ ಮಾಂತ್ರಿಕ ಶಕ್ತಿಯಿಂದ ಲೈಂಗಿಕ, ದಾಂಪತ್ಯ, ಸ್ತ್ರೀ ಪುರುಷ ಪ್ರೇಮ ವಿಚಾರ, ಕೋರ್ಟ್ ಕಚೇರಿ, ಹಣಕಾಸಿನ ತೊಂದರೆ, ವಿವಾದ, ಮನೆಯಲ್ಲಿ ಅಶಾಂತಿ, ಮಾನಸಿಕ ಚಿಂತೆ, ಇನ್ನೂ ಮುಂತಾದ ಸಮಸ್ಯೆಗಳಿಗೆ 3 ದಿನದಲ್ಲಿ ಪರಿಹಾರ ಶತಸಿದ್ಧ. ಖಾಯಂ ವಿಳಾಸ ಸುಬರ್ಬ್ ಬಸ್‌ಸ್ಟ್ಯಾಂಡ್ ಪಕ್ಕ, ಇರ್ವಿನ್ ರೋಡ್, ಆಂಧ್ರ ಶೈಲಿ ನಂದಿನಿ ಹೋಟೆಲ್ ಹಿಂಭಾಗ, ಮಾರುತಿ ಸುಜುಕಿ ಆಟೋ ಮೊಬೈಲ್ ಪಕ್ಕ ಮನೆಯಲ್ಲಿ ನೆಲೆಸಿದ್ದಾರೆ. ಹಳ್ಳಕೇರಿ, ಮೈಸೂರು ಇಲ್ಲಿ ಹೇಳುವ ವಿಚಾರಗಳನ್ನು ಗುಪ್ತವಾಗಿ ಇಡಲಾಗುತ್ತದೆ.

ಉದ್ಯೋಗವಕಾಶ
ಹೆಬ್ಬಾಳು ಇಂಡಸ್ಟ್ರಿಯಲ್ ಏರಿಯಾ/ಕೂರ್ಗಳ್ಳಿ ಇಂಡಸ್ಟ್ರಿಯಲ್ ಏರಿಯಾಗಳಿಗೆ ಮಾಜಿ ಸೈನಿಕರು ಮತ್ತು ಸೆಕ್ಯೂರಿಟಿ ಗಾರ್ಡ್‌ಗಳು ತಕ್ಷಣ ಬೇಕಾಗಿದ್ದಾರೆ. 8 ಗಂಟೆ ಪಾಳಿ 26 ದಿನಕ್ಕೆ ಆಕರ್ಷಕ ವೇತನ ದೊರೆಯುತ್ತದೆ. ಬನ್ನೂರಿಗೆ ಹತ್ತಿರವಿರುವ ಒಂದು ದೊಡ್ಡ ಕಂಪನಿಗೆ ಸೂಪರ್ ವೈಸರ್. 8 ಗಂಟೆ ಪಾಳಿಗೆ 26 ದಿನಕ್ಕೆ ಉತ್ತಮವೇತನ ದೊರೆಯುತ್ತದೆ.
9108990972, 0821-2001661
9900066478

ಬೇಕಾಗಿದ್ದಾರೆ
ಸಿಬಿ ನರಸಿಂಹಸ್ವಾಮಿ ಚಿಟ್ (ಕ) ಪ್ರೈ ಮದ್ವೇಶ್ ಕಾಂಪ್ಲೆಕ್ಸ್ ನಜರ್‌ಬಾದ್ ರಸ್ತೆ, ಮೈಸೂರು ಮ್ಯಾನೇಜರ್ –1, ಆಫೀಸ್ ಅಸಿಸ್ಟೆಂಟ್ –1 ಸಂದರ್ಶನದ ಸಮಯ: 1 ಗಂಟೆಗೆ ದಿನಾಂಕ : 16–3–2024
7892303484
9483247455

ಮನೆ ಬಾಡಿಗೆಗೆ
H.Block ರಾಮಕೃಷ್ಣನಗರದಲ್ಲಿ 30x40 ಅಳತೆಯಲ್ಲಿ ಕಟ್ಟಿರುವ 4 Bed Room Attached Bath Room ಸೋಲಾರ್ ವ್ಯವಸ್ಥೆ 1 ಡ್ಯೂಪ್ಲೆಕ್ಸ್ ಇಂಡಿಪೆಂಡೆಂಟ್ ಮನೆ ಬಾಡಿಗೆಗೆ ಇದೆ.
9380681006

ಹೊಸ ಮನೆ ಮಾರಾಟಕ್ಕಿದೆ
ಪೂರ್ವ ದಿಕ್ಕು, 30x40 3BHK, Allteak with Interior ಕಲ್ಪವೃಕ್ಷನಗರ, ಕೆಸರೆ 3ನೇ ಹಂತ
8095673991

ಹಳೆ ಬಿಲ್ಡಿಂಗ್‌ಗಳನ್ನು ಡೆಮಾಲಿಸ್ ಮಾಡಿಕೊಡಲಾಗುತ್ತದೆ
7259407518
7349692749

SITE FOR SALE
Bogadi Gaddige road Jattihundi 30x40, 30x50, 40x60, 40x40
Near St. Francis School
9008474797
8431531684

WANTED SALES BOYS
For A SPORTS SHOP IN MYSORE
FULL TIME - 10 AM TO 7 PM
7760109047
8105368325

CHANGE OF NAME
I, SHARATA KRISHNA MOGERA, Residing at Sahasralli, Uttara Kannada Post, Yedalli, Sirsimakki-581340 have changed my name from SHARATA KRISHNA MOGERA to SHARAT KRISHNA MOGER vide affidavit sworn before Notary Vinayaka, Mysore Dated-12-03-2024

ಸೈಟ್ ಮಾರಾಟಕ್ಕಿದೆ
40x60 ಮಂಡ್ಯ (ಫ್ಯಾಕ್ಟರಿ ಸರ್ಕಲ್‌ನಿಂದ 500 ಮೀಟರ್) ಸಂಪರ್ಕಿಸಿ:
7406767223
8618889686

ಬೇಕಾಗಿದ್ದಾರೆ
M.R. MOTORS
TV ಆಟೋ ಶೋರೂಂನಲ್ಲಿ ಕೆಲಸಕ್ಕೆ ಹುಡುಗಿಯರು ಬೇಕಾಗಿದ್ದಾರೆ.
ವಿದ್ಯಾರ್ಹತೆ: Any Degree
8970592073
6363552350

HOUSES & OFFICE SPACE FOR RENT
@ Saraswathipuram, Kuvempunagar & Surroundings
S.S. PROPERTY SERVICES
(Opp. Kuvempu School)
S.S.Puram, Mysore
9342125252

MATCH MAKERS, BRIDE / GROOM
ತಕ್ಷಣ ವಿವಾಹಕ್ಕೆ ಭೇಟಿ ನೀಡಿ
ಎಲ್ಲಾ ಜಾತಿಯ Govt Job, Private Jobs, ಸ್ವಂತ/ಪ್ರಗತಿಪರರು/ಸ್ವತಂತ್ರರು, ಡಾಕ್ಟರ್, ಇಂಜಿನಿಯರ್, ಎಲ್ಲಾ ವಿದ್ಯಾಭ್ಯಾಸದವರು ಕರ್ನಾಟಕದಾದ್ಯಂತ ಇರುವ ಲಕ್ಷಾಂತರ ವಧು/ವರರ ಆಯ್ಕೆಗೆ 1st Marriage ಡೈವೋರ್ಸಿಗಳು, ವಿಧವೆಯರು/ಸ್ವತಂತ್ರರು Life partner ಗಾಗಿ ನೇರ ಭೇಟಿ ನೀಡಿ ಬಡವರ ವಧುಗಳಿಗೆ ರಿಯಾಯಿತಿ ಇದೆ ಉದ್ಯೋಗಕ್ಕಾಗಿ ಸಂಘಗಳ ನೋಂದಣಿಗೆ
7975728012

ಮತ್ತಷ್ಟು ವರ್ಗೀಕೃತ ಜಾಹೀರಾತು ಪುಟ 10 ರಲ್ಲಿ

ಮಾನಸಿಕವಾಗಿ ಗಂಡಿಗಿಂತ ಹೆಣ್ಣು ಪ್ರಬಲಳು

ಮೈಸೂರು ವಿವಿ ಮಾನವ ಸಂಪನ್ಮೂಲ ಅಭಿವೃದ್ಧಿ ಕೇಂದ್ರದ ನಿರ್ದೇಶಕಿ ಡಾ.ಮಾಲಿನಿ ಅಭಿಮತ



ಮೈಸೂರು-ಊಟಿ ರಸ್ತೆಯ ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನಲ್ಲಿ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಹಾಗೂ ಮಹಿಳಾ ವಸತಿ ನಿಲಯದ ವೇದಿಕೆಯನ್ನು ಮೈಸೂರು ವಿವಿ ಮಾನವ ಸಂಪನ್ಮೂಲ ಅಭಿವೃದ್ಧಿ ಕೇಂದ್ರದ ನಿರ್ದೇಶಕಿ ಡಾ.ಎಸ್.ಎಸ್.ಮಾಲಿನಿ ಉದ್ಘಾಟಿಸಿದರು.

ಮೈಸೂರು, ಮಾ.13(ಎಸ್‌ಪಿಎನ್)– ಭಾರತೀಯ ಪರಂಪರೆಯಲ್ಲಿ ಹೆಣ್ಣಿಗೆ ಮಹತ್ವದ ಸ್ಥಾನವಿದೆ. ಅಲ್ಲದೆ ಹೆಣ್ಣನ್ನು ಆದಿಶಕ್ತಿ, ಸರ್ವಶಕ್ತಿ ಎಂದು ಸಂಬೋಧಿಸುತ್ತಾರೆ. ಹಾಗಾಗಿ ಹೆಣ್ಣು ಶಕ್ತಿಕೇಂದ್ರವಾದ ಮೇಲೆ ಆಕೆ ಅಬಲೆಯಲ್ಲ, ಸಬಲೆ ಎಂದು ಮೈಸೂರು ವಿವಿ ಮಾನವ ಸಂಪನ್ಮೂಲ ಅಭಿವೃದ್ಧಿ ಕೇಂದ್ರದ ನಿರ್ದೇಶಕಿ ಡಾ.ಎಸ್.ಎಸ್.ಮಾಲಿನಿ ಅಭಿಪ್ರಾಯಪಟ್ಟರು.

ಮೈಸೂರು–ಊಟಿ ರಸ್ತೆಯ ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನಲ್ಲಿ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಹಾಗೂ ಮಹಿಳಾ ವಸತಿ ನಿಲಯದ ವೇದಿಕೆ ಉದ್ಘಾಟಿಸಿ ಮಾತನಾಡಿದ ಅವರು, ನಮ್ಮ ದೇಶದ ಹಳ್ಳಿಗಾಡಿನ ಜನರು ತಮ್ಮ ಊರಿನ ರಕ್ಷಣೆ ಹಾಗೂ ರೋಗ–ರುಜಿನಗಳಿಂದ ಜನರ ಕಾಪಾಡುವಂತೆ ಈಗಲೂ ಗ್ರಾಮದೇವತೆಯನ್ನು ಪೂಜಿಸುವ ಪರಿಪಾಠವಿದೆ ಎಂದರು.

ಭಾರತೀಯ ಪರಂಪರೆಯಲ್ಲಿ ಅನಾದಿ ಕಾಲದಿಂದಲೂ ಹೆಣ್ಣಿಗೆ ಮಹತ್ವದ ಸ್ಥಾನವಿದೆ. ಯಾವುದೇ ಹಳ್ಳಿಯಲ್ಲಿ ಆಯಾಯ ಊರಿನ ಹೆಸರಿನ ಮೇಲೆ ಗ್ರಾಮದೇವತೆಗಳನ್ನು ಪೂಜಿಸುತ್ತಿರುವುದು ಎಲ್ಲರಿಗೂ ತಿಳಿದ ವಿಚಾರ. ಹಾಗಾಗಿ ಮಹಿಳೆ ಎಂದರೆ ಅಗಾಧವಾದ ಶಕ್ತಿ ಎಂದು ತಿಳಿಸಿದರು.

ಶಿಕ್ಷಣ ಬಹುದೊಡ್ಡ ಅಸ್ತ್ರ: ಜಗತ್ತಿನಲ್ಲಿ ಶಕ್ತಿಶಾಲಿಯಾದ ಅಸ್ತ್ರ ಶಿಕ್ಷಣ. ಇದು ಮಹಿಳೆಯ ಕೈಗೆ ಸಿಕ್ಕ ನಂತರ ಜಗತ್ತಿನ ಎಲ್ಲಾ ಕ್ಷೇತ್ರದಲ್ಲೂ ಅಭಿವೃದ್ಧಿ ಹೊಂದಲು ಸಾಧ್ಯವಾಯಿತು. ಇವೆಲ್ಲಾ ಬೆಳವಣಿಗೆಯನ್ನು ಗಮನಿಸಿದರೆ, ಪುರುಷರೇ ಎಲ್ಲಾ ಕ್ಷೇತ್ರಗಳಲ್ಲೂ ಮೈನಾರಿಟಿ ಆಗುತ್ತಿದ್ದಾರೆ. ಯಾವಾಗ ಹೆಣ್ಣಿಗೆ ಶಿಕ್ಷಣ ಸಿಗುತ್ತದೆ ಆಕೆ ಜಗತ್ತನ್ನೇ ನಿಯಂತ್ರಿಸುತ್ತಾಳೆ ಎಂದು ಅರಿತುಕೊಂಡು ಇಂದಿಗೂ ಬಹಳಷ್ಟು ರಾಷ್ಟ್ರಗಳಲ್ಲಿ ಹೆಣ್ಣಿಗೆ ಶಿಕ್ಷಣ ಸಿಗದಂತೆ ನೋಡಿಕೊಳ್ಳಲಾಗುತ್ತಿದೆ. ಈ ಅಂಶವನ್ನು ವೈಜ್ಞಾನಿಕವಾಗಿ ನೋಡುವಾಗ ಮಾನವನ ದೇಹದಲ್ಲಿ 'ಮೈಟೋಕಾಂಡ್ರಿಯಾ' ಎಂಬ ರಸ ಉತ್ಪತ್ತಿಯಾಗುತ್ತದೆ. ಈ ರಸ ಉತ್ಪತ್ತಿಯಿಂದಲೇ ಹೆಣ್ಣಿನ ಅಗಾಧವಾದ ಶಕ್ತಿ ಅಡಕವಾಗಿದೆ. ಇದರಿಂದ ಹೆಣ್ಣನ್ನು 'ಪವರ್ ಹೌಸ್ ಆಫ್ ದಿ ಸೆಲ್' ಎಂದು ಕರೆಯಲಾಗುತ್ತದೆ ಎಂದು ತಿಳಿಸಿದರು.

ಮಾನಸಿಕವಾಗಿ ಮಹಿಳೆ ಪ್ರಬಲರು: ಮಾನಸಿಕವಾಗಿ ಗಂಡಿಗಿಂತ ಹೆಣ್ಣು ಹೆಚ್ಚು ಪ್ರಬಲಳು. ಹೆಣ್ಣು ಮಕ್ಕಳಲ್ಲಿ ಹೆರಿಗೆ ನೋವನ್ನು ಸಹಿಸಿಕೊಳ್ಳುವ ಅಪಾರ ಶಕ್ತಿ ಇರುತ್ತದೆ. ಈ ಹೆರಿಗೆ ನೋವು ಕ್ಯಾನ್ಸರ್ ನೋವಿಗಿಂತಲೂ 10 ಪಟ್ಟು ಹೆಚ್ಚಾಗಿರುತ್ತದೆ. ಆದರೂ ಆ ನೋವನ್ನು ಸಹಿಸಿಕೊಳ್ಳುತ್ತಾಳೆ ಎಂದರೆ ಆಕೆ ಮಾನಸಿಕವಾಗಿ ದೃಢತೆ ಇದ್ದಾಗ ಮಾತ್ರ ಸಾಧ್ಯ. ಹಾಗಾಗಿ ಹೆಣ್ಣು ಅಬಲೆ ಎನ್ನುವುದು ಆಕೆಯ ವ್ಯಕ್ತಿತ್ವಕ್ಕೆ ಹೊಂದಿಕೆ ಆಗುವುದಿಲ್ಲ ಎಂದರು.

ಯುವಕರ ಶಕ್ತಿ ನಾಶ: ತಂತ್ರಜ್ಞಾನ ಬೆಳೆದಂತೆ ಹೆಣ್ಣು ಮತ್ತು ಪುರುಷರ ಜೀವನ ಶೈಲಿ ಬದಲಾಗುತ್ತಿದೆ. ದಿನ ಕಳೆದಂತೆ ಪ್ಲಾಸ್ಟಿಕ್ ಬಳಕೆ ವಿಪರೀತವಾಗುತ್ತಿದೆ. ಇದರಿಂದ ಮಾನವನ ದೇಹದಲ್ಲಿ ಕ್ಯಾನ್ಸರ್‌ಕಾರಕ ಶಕ್ತಿ ಬೆಳವಣಿಗೆಗೊಂಡು ವರ್ಷದಿಂದ ವರ್ಷಕ್ಕೆ ಕ್ಯಾನ್ಸರ್ ಪೀಡಿತರ ಸಂಖ್ಯೆ ಹೆಚ್ಚಾಗುತ್ತಿದೆ. ಇದು ಯುವಶಕ್ತಿ ಬೆಳವಣಿಗೆಯಲ್ಲಿ ಮುಖ್ಯ ಪಾತ್ರವಹಿಸುತ್ತದೆ ಎಂದು ತಿಳಿಸಿದರು.

ಇಂದಿನ ಯುವ ಪೀಳಿಗೆ ಕಲರ್ ಮಿಶ್ರಿತ ಜಂಕ್‌ಫುಡ್ ಅತೀಯಾಗಿ ಸೇವನೆ, ಅತೀಯಾದ ಮೊಬೈಲ್ ಬಳಕೆ, ನಿದ್ರಾಹೀನತೆ, ಯುವಕ–ಯುವತಿಯರು ಕೂತಲ್ಲೇ ಕೂತು ಕೆಲಸ ಮಾಡುವುದರಿಂದ ಮಧುಮೇಹ, ರಕ್ತದೊತ್ತಡದಿಂದ ಬಳಲುತ್ತಿರುವ ರೋಗಿಗಳ ಸಂಖ್ಯೆ ಶೇ.30ರಿಂದ 50 ರಷ್ಟು ಹೆಚ್ಚಾಗುತ್ತಿದೆ. ಯುವ ಪೀಳಿಗೆಯಲ್ಲಿ ಈ ಜೀವನ ಶೈಲಿ ಹೀಗೆ ಮುಂದುವರೆದರೆ ಮುಂದಿನ 10 ವರ್ಷಗಳಲ್ಲಿ ಯುವಕರ ಬಾಹ್ಯ ಶಕ್ತಿ ಕ್ಷೀಣಿಸಬಹುದು ಎಂದು ಆತಂಕ ವ್ಯಕ್ತಪಡಿಸಿದರು.

ವೈಜ್ಞಾನಿಕ ಕಾರಣವಿದೆ: ನಮ್ಮ ಪರಂಪರೆಯ ಆಚರಣೆಗಳ ಹಿಂದೆ ಒಂದು ವೈಜ್ಞಾನಿಕ ಕಾರಣವಿರುತ್ತದೆ. ಆದರೆ, ಇಂದಿನ ಯುವ ಪೀಳಿಗೆಯಲ್ಲಿ ವೈಚಾರಿಕತೆ ಹೆಸರಿನಲ್ಲಿ ನಮ್ಮ ಆಚರಣೆ, ಸಂಸ್ಕೃತಿ ಕುರಿತು ಅಭಿಮಾನ ಬೆಳೆಸಿಕೊಂಡಿಲ್ಲ. ಪ್ರತಿಯೊಂದು ಆಚರಣೆ ಹಿಂದೆ ವೈಜ್ಞಾನಿಕತೆ ಇರುವುದು ಅವರಿಗೆ ತಿಳಿದಿಲ್ಲ. ಇದನ್ನು ಪರಿಚಯಿಸುವ ಕೆಲಸ ಹಿರಿಯರಿಂದ ಆಗಬೇಕು ಎಂದು ಸಲಹೆ ನೀಡಿದರು. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಕಾಲೇಜಿನ ಮುಖ್ಯ ಕಾರ್ಯನಿರ್ವಾಣಾಧಿಕಾರಿ ಪ್ರೊ.ಬಿ.ವಿ ಸಾಂಬಶಿವಯ್ಯ ಮಾತನಾಡಿದರು. ಈ ವೇಳೆ ಪ್ರಾಂಶುಪಾಲರಾದ ಡಾ.ಎಸ್‌ಪ್ರತಿಭಾ, ಪ್ರಾಧ್ಯಾಪಕಿ ಜಿ.ಎಸ್.ವಿದ್ಯಾ, ಪದವಿಪೂರ್ವ ಕಾಲೇಜು ಪ್ರಾಂಶುಪಾಲ ಎಸ್.ಸೋಮಶೇಖರ್, ಡಾ. ಬಿ.ಎಸ್ ಸುದೀಪ್, ನಿಲಯ ಪಾಲಕಿ ಅನಿತಾ ಉಪಸ್ಥಿತರಿದ್ದರು.

ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್‌ನಿಂದ ಮಾಜಿ ಶಾಸಕ ವಾಸು ಅವರಿಗೆ ಶ್ರದ್ಧಾಂಜಲಿ



ಮೈಸೂರು,ಮಾ.13(ಎಸ್‌ಪಿಎನ್)– ಇತ್ತೀಚೆಗೆ ನಿಧನರಾದ ಮಾಜಿ ಶಾಸಕರಾದ ವಾಸು ಅವರಿಗೆ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ವತಿಯಿಂದ ಶ್ರದ್ಧಾಂಜಲಿ ಸಲ್ಲಿಸಲಾಯಿತು. ಮೈಸೂರು ವಿಜಯನಗರ ಒಂದನೇ ಹಂತದಲ್ಲಿರುವ ಜಿಲ್ಲಾ ಕಸಾಪ ಆವರಣದ ನಾಲ್ವಡಿ ಕೃಷ್ಣರಾಜ ಒಡೆಯರ್ ಸಭಾಂಗಣದಲ್ಲಿ ಮಾಜಿ ಶಾಸಕ ವಾಸು ಅವರ ಭಾವಚಿತ್ರಕ್ಕೆ ಹಿರಿಯ ಸಾಹಿತಿ ಡಾ.ಸಿ.ಪಿ.ಕೃಷ್ಣಕುಮಾರ್, ಕಸಾಪ ಜಿಲ್ಲಾಧ್ಯಕ್ಷ ಮಡ್ಡೀಕೆರೆ ಗೋಪಾಲ್ ನೇತೃತ್ವದಲ್ಲಿ ಪುಷ್ಪಾರ್ಚನೆ ಮಾಡಿ ಬುಧವಾರ ಶ್ರದ್ಧಾಂಜಲಿ ಅರ್ಪಿಸಲಾಯಿತು.

ನಂತರ ಹಿರಿಯ ಸಾಹಿತಿ ಡಾ.ಸಿ.ಪಿ. ಕೃಷ್ಣಕುಮಾರ್ ಸಂತಾಪ ಸೂಚಿಸುತ್ತಾ, ಸರಳ ಸಜ್ಜನಿಕೆಯುಳ್ಳ ವಾಸು ಅವರ ನಿಧನದಿಂದ ರಾಜಕೀಯ, ಸಾಮಾಜಿಕ ಹಾಗೂ ಸಾಂಸ್ಕೃತಿಕ ಕ್ಷೇತ್ರಕ್ಕೆ ತುಂಬಲಾರದ ನಷ್ಟವಾಗಿದೆ. 'ಸಾಂಸ್ಕೃತಿ ನಗರಿ ಮೈಸೂರು' ಗಣ್ಯ ಸ್ಥಾನಕೇರಲು ವಾಸು ಕೊಡುಗೆ ಸ್ಮರಣೀಯ. ನಾನು ಬಹಳ ವರ್ಷಗಳ ಹಿಂದೆ ವಾಸು ಕುರಿತು ಅಭಿನಂದನಾ ಸಮಾರಂಭದಲ್ಲಿ ಭಾಷಣ ಮಾಡುತ್ತಾ, ನೀವು ಮೃದು ಸ್ವಭಾವದವರು. ಅದು ಎಷ್ಟು ಎಂದರೆ ವಜ್ರಕ್ಕಿಂತಲೂ ಕಠೋರ, ಹೂವಿಗಿಂತಲೂ ಮೃದು ಸ್ವಭಾವದವರು ಎಂದು ಹೇಳಿದ್ದೆ ಎಂದು ಹಳೆಯ ನೆನಪುಗಳನ್ನು ಮೆಲುಕು ಹಾಕಿದರು. ಇವತ್ತಿಗೂ ಚಾಮರಾಜ ಕ್ಷೇತ್ರದ ವ್ಯಾಪ್ತಿಯಲ್ಲಾಗಿರುವ ಅಭಿವೃದ್ಧಿ ನೋಡಿದರೆ, ವಾಸು ನೆನಪಾಗುತ್ತಾರೆ. ಅದರಲ್ಲೂ ಮಹಾರಾಣಿ ವಾಣಿಜ್ಯ ಕಾಲೇಜು ಕಟ್ಟಡ ನೋಡಿದಾಗಲೆಲ್ಲ ವಾಸು ಅವರ ನೆನಪು ಅಜರಾಮರ ಎನಿಸುತ್ತದೆ. ವಾಸು ಅವರು ಮಾಜಿ ಮುಖ್ಯಮಂತ್ರಿ ವೀರಪ್ಪ ಮೊಯ್ಲಿ ಅವರಿಗೆ ಆಪ್ತರಾಗಿದ್ದರು. ಅವರಿಗೆ ಜ್ಞಾನಪೀಠ ಸಿಗಲಿ ಎಂದು ಆಶಿಸುತ್ತಿದ್ದರು. ಮೊಯ್ಲಿ ಬರೆದಿರುವ ಪುಸ್ತಕಗಳನ್ನು ನಮ್ಮ ಮನೆಗೆ ಬಂದು ಕೊಟ್ಟು ಹೋಗುತ್ತಿದ್ದರು. ಆ ವೇಳೆ ಈ ಪುಸ್ತಕಗಳ ಕುರಿತು ಏನನ್ನು ಹೇಳುತ್ತಿರಲಿಲ್ಲ. ಇದು ಅವರ ವಿಶೇಷತೆಗಳಲ್ಲೊಂದು ಎಂದು ತಿಳಿಸಿದರು.

ವಾಸು ರಾಜಕೀಯ ಕ್ಷೇತ್ರದಲ್ಲಿ ಮೈಸೂರಿನ ಮೇಯರ್ ಆಗಿ, ಚಾಮರಾಜ ಕ್ಷೇತ್ರದ ಶಾಸಕರಾಗಿ ಹಾಗೂ ಸರ್ಕಾರದ ವಿವಿಧ ಹಂತದಲ್ಲಿ ಕೆಲಸ ಮಾಡಿ ಹೆಸರುವಾಸಿಯಾಗಿದ್ದರು. ಅಂತೆಯೇ ಶಿಕ್ಷಣ ಕ್ಷೇತ್ರದಲ್ಲಿ ತೊಡಗಿಸಿಕೊಂಡು ಪ್ರತಿಷ್ಠಿತ ವಿದ್ಯಾಸಂಸ್ಥೆ ಕಟ್ಟಿ, ಲಕ್ಷಾಂತರ ವಿದ್ಯಾರ್ಥಿಗಳಿಗೆ ವಿದ್ಯಾದಾನ ಮಾಡಿದ ಕೀರ್ತಿ ಅವರಿಗೆ ಸಲ್ಲುತ್ತದೆ ಎಂದು ಹೇಳಿದರು.

ನಂತರ ವಿಶ್ರಾಂತ ಕುಲಪತಿ ಪ್ರೊ.ಪದ್ಮಾಶೇಖರ್ ಕಂಬನಿ ಮಿಡಿಯುತ್ತಾ, ಸತ್ಯದ ಜೊತೆ ಗುದ್ದಾಡುವುದು ತುಂಬಾ ಕಷ್ಟವಿದೆ. ಅಲ್ಲದೆ, ಮಾನಸಿಕವಾಗಿ ವಾಸು ಅವರು ನೋವು ಅನುಭವಿಸಿದ್ದಾರೆ. ಯಾವ ಸಮಯದಲ್ಲಾದರೂ ನಮ್ಮ ಸಮಸ್ಯೆಗಳಿಗೆ ಕರೆ ಮಾಡಿದಾಗ ಸ್ಪಂದಿಸುತ್ತಿದ್ದರು ಎಂದು ಕೆಲ ಘಟನೆಗಳನ್ನು ವಿವರಿಸಿದರು. ಕವಿಯತ್ರಿ ಡಾ.ಲತಾ ರಾಜಶೇಖರ್ ಮಾತನಾಡಿ, ವಾಸು ಅವರು ವಿವಿಧ ಕ್ಷೇತ್ರದಲ್ಲಿ ತೊಡಗಿಸಿಕೊಂಡು ಸಾಕಷ್ಟು ಸಾಧನೆ ಮಾಡಿದ್ದಾರೆ. ಮೈಸೂರಿನ ಮೇಯರ್ ಆಗಿದ್ದ ವೇಳೆ ನಗರದ ಅಭಿವೃದ್ಧಿಗೆ ವಿಶೇಷ ಕೊಡುಗೆ ನೀಡಿದ್ದಾರೆ. ಅವರು ಜಾತ್ಯತೀತವಾಗಿ ಮನೆಗೆ ಬಂದ ಅತಿಥಿಗಳನ್ನು ಆತ್ಮೀಯತೆಯಿಂದ ಸತ್ಕರಿಸುತ್ತಿದ್ದ ಪ್ರಸಂಗಗಳನ್ನು ಎಳೆ–ಎಳೆಯಾಗಿ ಬಿಡಿಸಿಟ್ಟರು. ಅವರಿಗೆ ಸಾಕು ಪ್ರಾಣಿಗಳೆಂದರೆ ಬಹಳ ಪ್ರೀತಿ. ಅವರ ಅಗಲಿಕೆ ಸಾಂಸ್ಕೃತಿಕ, ರಾಜಕೀಯ ಕ್ಷೇತ್ರಕ್ಕೆ ತುಂಬಾ ನಷ್ಟ ಎಂದು ಕಂಬನಿ ಮಿಡಿದರು.

ಸಭೆಯಲ್ಲಿ ಕಸಾಪ ನಗರಾಧ್ಯಕ್ಷ ಕೆ.ಎಸ್. ಶಿವರಾಮ್, ಮಾಜಿ ಅಧ್ಯಕ್ಷರಾದ ಡಾ.ವೈ.ಡಿ.ರಾಜಣ್ಣ, ಎಂ.ಚಂದ್ರಶೇಖರ್, ಡಾ ರಾಜಶೇಖರ್, ಜೈನಹಳ್ಳಿ ಸತ್ಯ ನಾರಾಯಣಗೌಡ, ಹಿರಿಯ ರಂಗಕರ್ಮಿ ರಾಜಶೇಖರ ಕದಂಬ ಸೇರಿದಂತೆ ಇತರರಿದ್ದರು.

ಹೆಚ್ಚಿನ ವರ್ಗೀಕೃತ ಜಾಹೀರಾತು ಪುಟ 9ರಲ್ಲಿ

ಪ್ರಸಾದ ತಯಾರಿಕೆಗೆ ಮುನ್ನ ಪದಾರ್ಥಗಳ ಪರೀಕ್ಷೆ

ಸರ್ಕಾರದ ಆದೇಶ

ಬೆಂಗಳೂರು, ಮಾ.13(ಕೆಎಂಶಿ)– ದೇವಸ್ಥಾನಗಳಲ್ಲಿ ಪ್ರಸಾದ ಹಂಚಿಕೆಗೂ ಮುನ್ನ ಅದರ ತಯಾರಿಕೆಯ ಕಚ್ಚಾ ಸಾಮಗ್ರಿಗಳನ್ನು ಪರೀಕ್ಷೆಗೆ ಒಳಪಡಿಸಿ ನಂತರ ಬಳಕೆ ಮಾಡುವಂತೆ ಸರ್ಕಾರ ಇಂದಿಲ್ಲಿ ಆದೇಶ ಹೊರಡಿಸಿದೆ.

ಇತ್ತೀಚಿನ ದಿನಗಳಲ್ಲಿ ಪ್ರಸಾದ ಸೇವನೆ ನಂತರ ಸಾರ್ವಜನಿಕರು ಅಸ್ವಸ್ಥಗೊಂಡ ಪ್ರಕರಣಗಳು ವರದಿಯಾದ ಹಿನ್ನೆಲೆಯಲ್ಲಿ ಸರ್ಕಾರ ಈ ತೀರ್ಮಾನಕ್ಕೆ ಬಂದಿದೆ. ಕಚ್ಚಾ ಸಾಮಗ್ರಿಗಳನ್ನು ಎಫ್‌ಎಸ್‌ಎಸ್‌ಎಐ ಅಂಗೀಕೃತ ಹಾಗೂ ಎನ್‌ಎಬಿಎಲ್ ಮಾನ್ಯತೆ ಪಡೆದ ಪ್ರಯೋಗಾಲಯಗಳಲ್ಲಿ ಪರೀಕ್ಷೆಗೆ ಒಳಪಡಿಸುವಂತೆ ಸೂಚಿಸಲಾಗಿದೆ.

ಬಿಎಸ್‌ವೈ ಭೇಟಿಯಾದ ಬೆಂಗಳೂರು ಗ್ರಾಮಾಂತರ ಬಿಜೆಪಿ ಅಭ್ಯರ್ಥಿ ಡಾ.ಸಿ.ಎನ್. ಮಂಜುನಾಥ್



ಬೆಂಗಳೂರು, ಮಾ.13– ಜಯದೇವ ಹೃದ್ರೋಗ ಸಂಸ್ಥೆಗೆ ವಿಶ್ವಮಾನ್ಯತೆ ತರುವಲ್ಲಿ ಪ್ರಮುಖ ಪಾತ್ರ ವಹಿಸಿರುವ ಸಂಸ್ಥೆಯ ಮಾಜಿ ನಿರ್ದೇಶಕ ಡಾ. ಸಿ.ಎನ್. ಮಂಜುನಾಥ್, ಇಂದು ಬಿಜೆಪಿ ಹಿರಿಯ ನಾಯಕ ಮಾಜಿ ಸಿಎಂ ಬಿ.ಎಸ್.ಯಡಿಯೂರಪ್ಪ ಅವರನ್ನು ಭೇಟಿ ಮಾಡಿದರು.

ಡಾಲರ್ಸ್ ಕಾಲೋನಿಯಲ್ಲಿರುವ ಧವಳಗಿರಿ ನಿವಾಸಕ್ಕೆ ಡಾ.ಸಿ.ಎನ್.ಮಂಜುನಾಥ್ ಭೇಟಿ ನೀಡಿದರು. ತಮ್ಮ ನಿವಾಸಕ್ಕೆ ಬಂದ ಮಂಜುನಾಥ್‌ರನ್ನು ಯಡಿಯೂರಪ್ಪ ಆತ್ಮೀಯವಾಗಿ ಬರಮಾಡಿಕೊಂಡರು. ಇಬ್ಬರು ಉಭಯ ಕುಶಲೋಪರಿ ನಂತರ ರಾಜಕೀಯ ವಿಚಾರ ಕುರಿತು ಕೆಲಕಾಲ ಮಾತುಕತೆ ನಡೆಸಿದರು. ವೈದ್ಯಕೀಯ ಸೇವೆಯ ನಂತರ ರಾಜಕೀಯ ಕ್ಷೇತ್ರದ ಮೂಲಕ ಮತ್ತೊಮ್ಮೆ ಸಮಾಜ ಸೇವಾ ಕ್ಷೇತ್ರದಲ್ಲಿ ತೊಡಗುವ ಅಪೇಕ್ಷೆಯಂತೆ ರಾಜಕೀಯಕ್ಕೆ ಬರುತ್ತಿರುವ ಕುರಿತು ಚರ್ಚಿಸಿದರು. ಇವರು ಬೆಂಗಳೂರು ಗ್ರಾಮಾಂತರದ ಅಭ್ಯರ್ಥಿ. ಬಿಜೆಪಿ ಸೇರ್ಪಡೆಯಾಗುವ ಕುರಿತು ಮಾತುಕತೆ ನಡೆಸಿದರು. ರಾಜಕೀಯ ಜೀವನಕ್ಕೆ ಪ್ರವೇಶ ಮಾಡುತ್ತಿರುವ ಮಂಜುನಾಥ್ ಅವರಿಗೆ ಶುಭ ಕೋರಿದ ಯಡಿಯೂರಪ್ಪ, ಯಶಸ್ವಿ ವೈದ್ಯಕೀಯ ಜೀವನ ನಡೆಸಿದ ನಿಮಗೆ ಯಶಸ್ವಿ ರಾಜಕೀಯ ಜೀವನ ನಡೆಸುವ ಅವಕಾಶ ಸಿಗಲಿ ಎಂದು ಹಾರೈಸಿದರು.

ವಾಹನ ಸಂಚಾರಕ್ಕೆ ನಿರ್ಬಂಧ ಮಾರ್ಗ ಬದಲಾವಣೆ

ಮೈಸೂರು, ಮಾ.13(ಎಸ್‌ಪಿಎನ್)– ಮೈಸೂರು ನಗರ ಪಾಲಿಕೆ ವ್ಯಾಪ್ತಿಯ ವಾರ್ಡ್ ನಂ.42ರ ಸರಸ್ವತಿಪುರಂನ ಕಾಮಾಕ್ಷಿ ಆಸ್ಪತ್ರೆ ರಸ್ತೆಯ 8ನೇ ಮುಖ್ಯರಸ್ತೆಯಿಂದ 16ನೇ ಮುಖ್ಯರಸ್ತೆವರೆಗೆ ಹಮ್ಮಿಕೊಂಡಿರುವ ಒಳಚರಂಡಿ ಕೊಳವೆ ಮಾರ್ಗ ಅಳವಡಿಸುವ ಕಾಮಗಾರಿ ಪ್ರಗತಿಯಲ್ಲಿವೆ.


ಈ ಹಿನ್ನೆಲೆಯಲ್ಲಿ ಮಾರ್ಗದ ವಾಹನ ಸಂಚಾರವನ್ನು ಬುಧವಾರ(ಮಾ.13)ದಿಂದ ಏ.5ರವರೆಗೆ ತಾತ್ಕಾಲಿಕವಾಗಿ ನಿರ್ಬಂಧಿಸಲಾಗಿದೆ.

ಬದಲಿ ಮಾರ್ಗದ ವಿವರ: ವಿಶ್ವಮಾನವ ಜೋಡಿರಸ್ತೆ ಕಡೆಯಿಂದ ಸಂಚರಿಸುವ ವಾಹನಗಳು ಸರಸ್ವತಿಪುರಂ 16ನೇ ಮುಖ್ಯರಸ್ತೆಗೆ ಎಡ ತಿರುವು ಪಡೆದು ನಂತರ 6ನೇ ಅಡ್ಡ ರಸ್ತೆಯ ಬಲತಿರುವು ತೆಗೆದುಕೊಂಡು ಸಂಚರಿಸಬೇಕು. ಕಾಂತರಾಜ ಅರಸು ರಸ್ತೆ ಕಡೆಯಿಂದ ಸಂಚರಿಸುವ ವಾಹನಗಳು ಸರಸ್ವತಿಪುರಂ 8ನೇ ಮುಖ್ಯರಸ್ತೆಗೆ ಎಡ ತಿರುವು ತೆಗೆದುಕೊಂಡ ನಂತರ ನ್ಯೂ ಕಾಂತರಾಜ ಅರಸು ರಸ್ತೆಯ ಮೂಲಕ ಸಂಚರಿಸಬಹುದಾಗಿದೆ ಎಂದು ಪಾಲಿಕೆ ಆಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮಾ.16ಕ್ಕೆ ಯದುವೀರ್, ಡಾ.ಮಂಜುನಾಥ್, ಬಿಜೆಪಿ ಸೇರ್ಪಡೆ

ಬೆಂಗಳೂರು, ಮಾ.13–ಮೈಸೂರು–ಕೊಡಗು ಕ್ಷೇತ್ರದ ಬಿಜೆಪಿ ಅಭ್ಯರ್ಥಿಯಾಗಿ ಘೋಷಿಸಲ್ಪಟ್ಟಿರುವ ಮೈಸೂರು ರಾಜವಂಶಸ್ಥರಾದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಅವರು ಮಾ.16ರಂದು ಬೆಂಗಳೂರಿನ ಬಿಜೆಪಿ ಕಚೇರಿಯಲ್ಲಿ ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ, ಪಕ್ಷದ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ, ವಿಧಾನಸಭೆ ವಿಪಕ್ಷ ನಾಯಕ ಆರ್. ಅಶೋಕ್ ಮುಂತಾದವರ ಸಮ್ಮುಖದಲ್ಲಿ ಅಧಿಕೃತವಾಗಿ ಬಿಜೆಪಿಗೆ ಸೇರ್ಪಡೆಯಾಗಲಿದ್ದಾರೆ ಎಂದು ಸುದ್ದಿವಾಹಿನಿಗಳು ವರದಿ ಮಾಡಿವೆ. ಅದೇ ದಿನ ಬೆಂಗಳೂರು ಗ್ರಾಮಾಂತರ ಕ್ಷೇತ್ರದ ಅಭ್ಯರ್ಥಿಯೂ ಆದ ಜಯದೇವ ಹೃದ್ರೋಗ ಆಸ್ಪತ್ರೆಯ ಮಾಜಿ ನಿರ್ದೇಶಕ ಡಾ. ಸಿ.ಎನ್.ಮಂಜುನಾಥ್ ಅವರೂ ಕೂಡ ಬಿಜೆಪಿ ಸೇರ್ಪಡೆಯಾಗಲಿದ್ದಾರೆ ಎಂದು ಹೇಳಲಾಗಿದೆ.

ಹಾವೇರಿಯಿಂದ ಪುತ್ರನಿಗೆ ಬಿಜೆಪಿ ಟಿಕೆಟ್ ಮಿಸ್ ಶಿವಮೊಗ್ಗದಲ್ಲಿ ಬಂಡಾಯವಾಗಿ ಸ್ಪರ್ಧಿಸಲು ಈಶ್ವರಪ್ಪ ಚಿಂತನೆ; ನಾಳೆ ಅಭಿಮಾನಿಗಳ ಸಭೆ



ಶಿವಮೊಗ್ಗ, ಮಾ. 13– ತಮ್ಮ ಪುತ್ರ ಕಾಂತೇಶ್ ಅವರಿಗೆ ಹಾವೇರಿ ಲೋಕಸಭಾ ಕ್ಷೇತ್ರದ ಟಿಕೆಟ್ ಸಿಗದ ಕಾರಣ ಮಾಜಿ ಸಚಿವ, ಬಿಜೆಪಿ ಹಿರಿಯ ಮುಖಂಡ ಕೆ.ಎಸ್. ಈಶ್ವರಪ್ಪ ಗರಂ ಆಗಿದ್ದಾರೆ. ಅಲ್ಲದೆ, ಶಿವಮೊಗ್ಗ ಕ್ಷೇತ್ರದಲ್ಲಿ ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಪುತ್ರ ಹಾಲಿ ಸಂಸದ ಬಿ.ವೈ. ರಾಘವೇಂದ್ರ ವಿರುದ್ಧ ಬಂಡಾಯವಾಗಿ ಸ್ಪರ್ಧಿಸುವ ಬಗ್ಗೆ ಚಿಂತನೆ ನಡೆಸುತ್ತಿರುವುದಾಗಿ ಹೇಳಿದ್ದಾರೆ.

ಬಿಜೆಪಿಯ 2ನೇ ಪಟ್ಟಿ ಪ್ರಕಟವಾಗುತ್ತಿದ್ದಂತೆಯೇ ಸುದ್ದಿಗೋಷ್ಠಿ ನಡೆಸಿದ ಅವರು, ಯಡಿಯೂರಪ್ಪ ತಮಗೆ ಮೋಸ ಮಾಡಿದ್ದಾರೆ ಎಂದು ಆರೋಪಿಸಿದರಲ್ಲದೇ, ತಾವು ಸೇರಿದಂತೆ ಪ್ರತಾಪ್ ಸಿಂಹ, ಸಿ.ಟಿ. ರವಿ, ನಳಿನ್‌ಕುಮಾರ್ ಕಟೀಲ್ ಮುಂತಾದ ನಿಷ್ಠಾವಂತರನ್ನು ಪಕ್ಕಕ್ಕೆ ಸರಿಸುವ ಕೆಲಸವನ್ನು ಯಡಿಯೂರಪ್ಪ ಮಾಡಿದ್ದಾರೆ ಎಂದು ಗಂಭೀರ ಆರೋಪ ಮಾಡಿದರು.

ಯಡಿಯೂರಪ್ಪ ಅವರು ನನ್ನ ಮಗನಿಗೆ ಹಾವೇರಿಯಿಂದ ಟಿಕೆಟ್ ಕೊಡಿಸಿ, ತಾವೇ ಓಡಾಡಿ ಗೆಲ್ಲಿಸುವುದಾಗಿ ಭರವಸೆ ನೀಡಿದ್ದರು. ಆದರೆ, ಈಗ ಮಾತು ತಪ್ಪಿದ್ದಾರೆ. ಹೈಕಮಾಂಡ್ ಟಿಕೆಟ್ ಕೊಟ್ಟಿಲ್ಲ ಎಂದು ಹೇಳುವುದು ಸರಿಯಲ್ಲ. ಯಡಿಯೂರಪ್ಪ ಅವರಿಗೆ ಟಿಕೆಟ್ ಕೊಡಿಸುವ ಶಕ್ತಿ ಇತ್ತು ಎಂದ ಅವರು, ಶೋಭಾ ಕರಂದ್ಲಾಜೆ ಅವರಿಗೆ ಟಿಕೆಟ್ ಕೊಡಿಸಿದ್ದು ಯಾರು? ಎಂದು ಸುದ್ದಿಗಾರರ ಪ್ರಶ್ನೆಯೊಂದಕ್ಕೆ ಮರು ಪ್ರಶ್ನೆ ಹಾಕಿದರು. ಬಸವರಾಜ ಬೊಮ್ಮಾಯಿಯವರು ಚುನಾವಣಾ ಸಮಿತಿ ಸಭೆಯಲ್ಲೇ ತಾವು ಹಾಲಿ ಶಾಸಕರಾಗಿರುವುದಾಗಿಯೂ, ಮುಖ್ಯಮಂತ್ರಿಯಾಗಿದ್ದ ತಾವು ಲೋಕಸಭೆಗೆ ಸ್ಪರ್ಧಿಸುವುದಿಲ್ಲ ಎಂದು ಹೇಳಿದ್ದರು. ಅಲ್ಲದೇ, ನನ್ನ ಪುತ್ರ ಕಾಂತೇಶ್‌ಗೆ ಹಾವೇರಿಯಲ್ಲಿ ಟಿಕೆಟ್ ಕೊಡುವಂತೆಯೂ ಹೇಳಿದ್ದರು. ಇದೇ ಮಾತನ್ನು ಅವರು ದೆಹಲಿಯಲ್ಲಿ ನಡೆದ ಸಭೆಯಲ್ಲೂ ಕೂಡ ಹೇಳಿದ್ದಾರೆ. ಹಾಗಿದ್ದರೂ ಬೊಮ್ಮಾಯಿಯವರನ್ನ ಬಲವಂತಪಡಿಸಿ ಚುನಾವಣೆಯಲ್ಲಿ ಸ್ಪರ್ಧೆಗೆ ಇಳಿಸುತ್ತಿರುವುದು ಏಕೆ ಎಂದು ಪ್ರಶ್ನಿಸಿದರು.

ಶಿವಮೊಗ್ಗ ಕ್ಷೇತ್ರದಿಂದ ಪಕ್ಷೇತರವಾಗಿ ಸ್ಪರ್ಧಿಸಲು ನನಗೆ ಬಹಳ ಒತ್ತಡವಿದೆ. ಪಕ್ಷೇತರರಾಗಿ ಸ್ಪರ್ಧಿಸಿ ಗೆದ್ದು ಸಂಸತ್‌ನಲ್ಲಿ ಮೋದಿಯವರ ಪರವಾಗಿ ಕೈ ಎತ್ತಿ ಎಂದು ಅಭಿಮಾನಿಗಳು ಹೇಳುತ್ತಿದ್ದಾರೆ. ನನ್ನ ಅಭಿಮಾನಿಗಳು, ಹಿತೈಷಿಗಳು ಮಾರ್ಚ್ 15ರಂದು ಸಂಜೆ 5 ಗಂಟೆಗೆ ಬಂಜಾರ ಕಲ್ಯಾಣ ಮಂಟಪದಲ್ಲಿ ಸಭೆ ಕರೆದಿದ್ದಾರೆ. ಆ ಸಭೆಗೆ ನಾನೂ ಹೋಗುತ್ತಿದ್ದೇನೆ. ಅಲ್ಲಿ ಅವರು ಹೇಳುವ ಸಲಹೆ–ಸೂಚನೆ ಮೇರೆಗೆ ಮುಂದಿನ ನಿರ್ಧಾರ ತೆಗೆದುಕೊಳ್ಳುತ್ತೇನೆ ಎಂದು ಈಶ್ವರಪ್ಪ ಹೇಳಿದರು.

ನಿಧನ

ಡಿ.ಕೃಷ್ಣಸಿಂಗ್



ಮೈಸೂರು, ಮಾ.13–ಮೈಸೂರು ನಗರದ ಹೆಸರಾಂತ ಫುಟ್‌ಬಾಲ್ ಆಟಗಾರ, ಐಡಿಯಲ್ ಜಾವಾ ಮೋಟಾರ್ ಕಂಪೆನಿಯ ಫುಟ್‌ಬಾಲ್ ತಂಡದ ನಾಯಕ ಹಾಗೂ ರೆಫ್ರಿ ಆಗಿದ್ದ ಡಿ.ಕೃಷ್ಣಸಿಂಗ್ (83) ಬುಧವಾರ ಮಧ್ಯಾಹ್ನ ತಮ್ಮ ಎನ್.ಆರ್.ಮೊಹಲ್ಲಾದ ನಿವಾಸದಲ್ಲಿ ನಿಧನರಾದರು. ದಿವಂಗತರು ಓರ್ವ ಪುತ್ರ, ಇಬ್ಬರು ಪುತ್ರಿಯರು, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು–ಬಳಗ ಹಾಗೂ ಅಭಿಮಾನಿಗಳನ್ನು ಅಗಲಿದ್ದಾರೆ. ದಿವಂಗತರ ಪಾರ್ಥಿವ ಶರೀರವನ್ನು ಎನ್.ಆರ್.ಮೊಹಲ್ಲಾದ ಶಿವಾಜಿ ರಸ್ತೆಯಲ್ಲಿರುವ ನಿವಾಸದಲ್ಲಿ ಸಾರ್ವಜನಿಕರ ವೀಕ್ಷಣೆಗೆ ಇರಿಸಲಾಗಿದ್ದು, ಗುರುವಾರ ಮಧ್ಯಾಹ್ನ 12 ಗಂಟೆಗೆ ಎನ್.ಆರ್.ಮೊಹಲ್ಲಾದ ಹಿಂದೂ ರುದ್ರಭೂಮಿಯಲ್ಲಿ ಅಂತ್ಯಕ್ರಿಯೆ ನಡೆಸಲಾಗುವುದು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಶ್ರೀಮತಿ ಜಯಮ್ಮ



ಮೈಸೂರು: ಮೈಸೂರಿನ ಎನ್.ಆರ್.ಮೊಹಲ್ಲಾ ನಿವಾಸಿ ಲೇಟ್ ಮಹದೇವು ಅವರ ಪತ್ನಿ ಶ್ರೀಮತಿ ಜಯಮ್ಮ(70) ಬುಧವಾರ ನಿಧನರಾದರು. ಮೃತರು ಇಬ್ಬರು ಪುತ್ರಿಯರು, ಓರ್ವ ಪುತ್ರ ಸೇರಿದಂತೆ ಬಂಧು–ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ನಾಳೆ(ಮಾ.14) ಮಧ್ಯಾಹ್ನ 12 ಗಂಟೆಗೆ ಎನ್.ಆರ್.ಮೊಹಲ್ಲಾ ರುದ್ರಭೂಮಿಯಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಎಂ.ಬಿ.ಹೊನ್ನಮ್ಮ



ಮೈಸೂರು: ಮೈಸೂರಿನ ವಿದ್ಯಾರಣ್ಯಪುರಂ ನಿವಾಸಿ ಹಾಗೂ ಮರಿಮಲ್ಲಪ್ಪ ಪಿಯು ಕಾಲೇಜಿನ ನಿವೃತ್ತ ಪ್ರಾಂಶುಪಾಲ ಲೇಟ್ ಆರ್.ವೀರಭದ್ರಯ್ಯ ಅವರ ಪತ್ನಿ ಎಂ.ಬಿ.ಹೊನ್ನಮ್ಮ(84) ಬುಧವಾರ ನಿಧನರಾದರು. ಮೃತರು ಓರ್ವ ಪುತ್ರಿ, ಇಬ್ಬರು ಪುತ್ರರು ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಬುಧವಾರ ಮಧ್ಯಾಹ್ನ 1.30ರ ವೇಳೆಗೆ ವಿದ್ಯಾರಣ್ಯಪುರಂನಲ್ಲಿರುವ ವೀರಶೈವ ರುದ್ರಭೂಮಿಯಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಆಧುನಿಕ ಕೃಷಿ ತಂತ್ರಜ್ಞಾನ ಬಳಸಿ, ಹೆಚ್ಚಿನ ಆದಾಯ ಗಳಿಸಿ

ರೈತ ಫಲಾನುಭವಿಗಳಿಗೆ ವಿವಿಧ ಸವಲತ್ತು ವಿತರಿಸಿದ ಸಚಿವ ಮಹದೇವಪ್ಪ




ತಿ.ನರಸೀಪುರ ಪಟ್ಟಣದ ಎಪಿಎಂಸಿ ಆವರಣದಲ್ಲಿ ಕೃಷಿ ಇಲಾಖೆ ವತಿಯಿಂದ ಹಮ್ಮಿಕೊಳ್ಳಲಾಗಿದ್ದ ಕಾರ್ಯಕ್ರಮದಲ್ಲಿ ಸಚಿವ ಡಾ.ಎಚ್.ಸಿ.ಮಹದೇವಪ್ಪ ರೈತ ಫಲಾನುಭವಿಗಳಿಗೆ ವಿವಿಧ ಯಂತ್ರೋಪಕರಣಗಳನ್ನು ವಿತರಿಸಿದರು.

ತಿ.ನರಸೀಪುರ, ಮಾ.13– ಕೃಷಿಯಲ್ಲಿ ಆಧುನಿಕ ತಂತ್ರಜ್ಞಾನ ಅಳವಡಿಸಿಕೊಂಡು ಹೆಚ್ಚಿನ ಆದಾಯ ಗಳಿಸುವತ್ತ ಗಮನ ಹರಿಸುವಂತೆ ಜಿಲ್ಲಾ ಉಸ್ತುವಾರಿ ಹಾಗೂ ಸಮಾಜ ಕಲ್ಯಾಣ ಇಲಾಖೆ ಸಚಿವ ಡಾ.ಎಚ್.ಸಿ. ಮಹದೇವಪ್ಪ ರೈತರಿಗೆ ಸಲಹೆ ನೀಡಿದ್ದಾರೆ.

ಪಟ್ಟಣದ ಎಪಿಎಂಸಿ ಆವರಣದಲ್ಲಿ ಕೃಷಿ ಇಲಾಖೆಯಿಂದ ನೀಡಲಾದ ಯಂತ್ರೋಪಕರಣಗಳು ಹಾಗೂ ಸವಲತ್ತುಗಳ ವಿತರಣೆ ಕಾರ್ಯಕ್ರಮದಲ್ಲಿ ರೈತ ಫಲಾನುಭವಿಗಳಿಗೆ ವಿವಿಧ ಸವಲತ್ತುಗಳನ್ನು ವಿತರಿಸಿ ಅವರು ಮಾತನಾಡಿದರು.

ಕೃಷಿ ಯಾಂತ್ರೀಕರಣ ಯೋಜನೆಯ ಮೂಲಕ ಸರ್ಕಾರ ರೈತರಿಗೆ ಬೇಸಾಯಕ್ಕೆ ಬೇಕಾಗುವಂತಹ ಅಗತ್ಯ ಉಪಕರಣಗಳನ್ನು ನೀಡುತ್ತಿದೆ. ಪ್ರಸಕ್ತ ಸನ್ನಿವೇಶದಲ್ಲಿ ಜಾನುವಾರುಗಳನ್ನು ಬಳಸಿ ಬೇಸಾಯ ಮಾಡುವುದು ಕಷ್ಟಕರವಾಗಿದೆ.ಈ ಹಿನ್ನೆಲೆಯಲ್ಲಿ ಯಂತ್ರಗಳ ಸಹಾಯದಿಂದ ಆಧುನಿಕ ಕೃಷಿ ಪದ್ಧತಿಗಳನ್ನು ಬಳಸಿಕೊಂಡು ಕೃಷಿಯಲ್ಲಿ ಹೆಚ್ಚಿನ ಆದಾಯ ಪಡೆಯಬೇಕು ಎಂದರು.

ಸರಕಾರದಿಂದ ರೈತರ ಅಭಿವೃದ್ಧಿಗಾಗಿ ಅನೇಕ ಜನಪರ ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತಿದೆ. ಈ ನಿಟ್ಟಿನಲ್ಲಿ ರೈತರು ಕೃಷಿ ಇಲಾಖೆಯಿಂದ ದೊರೆಯುವ ಪರಿಕರಗಳನ್ನು ಪಡೆದು ಅದನ್ನು ಮಾರಾಟ ಮಾಡಿಕೊಳ್ಳದೇ ತಾವೇ ಬಳಕೆ ಮಾಡಿಕೊಳ್ಳುವ ಮೂಲಕ ಸವಲತ್ತುಗಳ ಸದುಪಯೋಗಪಡಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ರೈತರ ಸರ್ವತೋಮುಖ ಅಭಿವೃದ್ಧಿಗಾಗಿ ಹಲವು ಮಹತ್ವದ ಯೋಜನೆಗಳನ್ನು ಕೃಷಿ ಇಲಾಖೆ ಮೂಲಕ ಅನುಷ್ಠಾನ ಗೊಳಿಸಲಾಗುತ್ತಿದೆ. ರೈತ ಸಮುದಾಯ ಸರ್ಕಾರದ ಎಲ್ಲಾ ರೀತಿಯ ಸೌಲಭ್ಯಗಳನ್ನು ಸದುಪಯೋಗಪಡಿಸಿಕೊಂಡು ಅಭಿವೃದ್ಧಿ ಹೊಂದುವಂತೆ ಅವರು ತಿಳಿಸಿದರು.

ಸಹಾಯಕ ನಿರ್ದೇಶಕಿ ಕೆ.ಸುಹಾಸಿನಿ ಮಾತನಾಡಿ ಕೃಷಿ ಇಲಾಖೆ ವತಿಯಿಂದ ರೈತರಿಗೆ ಅನೇಕ ಉಪಕರಣಗಳನ್ನು ರಿಯಾಯಿತಿ ದರದಲ್ಲಿ ನೀಡಲಾಗುತ್ತಿದೆ. ಇವುಗಳನ್ನು ಸೂಕ್ತ ದಾಖಲೆ ನೀಡಿ ಪಡೆದುಕೊಳ್ಳಬೇಕು. ಕೃಷಿ ಯಾಂತ್ರೀಕರಣ ಯೋಜನೆಯಡಿ 316 ಫಲಾನುಭವಿಗಳಿಗೆ 183.68 ಲಕ್ಷ ರೂಗಳ ಪ್ರಗತಿ ಸಾಧನೆ ಸೇರಿದಂತೆ 43 ರೈತರಿಗೆ ಪವರ್ ಟಿಲ್ಲರ್,8 ಫಲಾನುಭವಿಗಳಿಗೆ ರೋಟೋವೇಟರ್, 9 ರೈತರಿಗೆ ಪವರ್ ವೀಡರ್,7 ರೈತರಿಗೆ ಛಾಫ್ ಕಟರ್,ಇಬ್ಬರು ರೈತರಿಗೆ ಡೀಸೆಲ್ ಪಂಪ್ ಸೆಟ್, ತಲಾ ಒಬ್ಬ ರೈತ ಫಲಾನುಭವಿಗಳಿಗೆ ಬ್ರಷ್ ಕಟರ್, ಪವರ್ ಸ್ಪ್ರೇಯರ್ ನೀಡಲಾಗಿದ್ದು, ಸಾಮಾನ್ಯ ವರ್ಗದ ರೈತರಿಗೆ ಶೇ.50 ಹಾಗೂ ಪ.ಜಾತಿ ಮತ್ತು ವರ್ಗದ ಫಲಾನುಭವಿಗಳಿಗೆ ಶೇ.90 ರ ಸಹಾಯಧನದಡಿ ಯಂತ್ರೋಪಕರಣ ನೀಡಲಾಗಿದೆ ಎಂದರು. ಈ ವೇಳೆ ಕೆಡಿಪಿ ಸದಸ್ಯ ಸುನೀಲ್ ಬೋಸ್, ಕೃಷಿ ಇಲಾಖೆಯ ಜಂಟಿ ನಿರ್ದೇಶಕ ಬಿ.ಎಸ್. ಚಂದ್ರಶೇಖರ್, ಉಪನಿರ್ದೇಶಕ ಧನಂಜಯ, ಕಸಬಾ ಹೋಬಳಿ ಕೃಷಿ ಅಧಿಕಾರಿ ಕಾವ್ಯ, ತಾಂತ್ರಿಕ ಕೃಷಿ ಅಧಿಕಾರಿ ರಾಘವೇಂದ್ರ ಪುರಸಭೆ ಮಾಜಿ ಅಧ್ಯಕ್ಷ ಎಸ್. ಮದನ್ ರಾಜ್, ಮಲ್ಲಿಕಾರ್ಜುನ ಸ್ವಾಮಿ, ಚಂದ್ರು ಸೇರಿದಂತೆ ಮುಖಂಡರು, ರೈತರು ಹಾಜರಿದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	(ದೂ: 2521923)
ಭೀಮ (ತೆ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಕಾಟೇರ (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಸೈತಾನ್ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಕರಟಕ ದಮನಕ (ಕ)	4 ಪ್ರದರ್ಶನಗಳು
ಗಾಯಿತ್ರಿ	
ರಂಗನಾಯಕ (ಕ)	4 ಪ್ರದರ್ಶನಗಳು
ರಾಜಕಮಲ್	
ಕರಟಕ ದಮನಕ (ಕ)	4 ಪ್ರದರ್ಶನಗಳು
ಸಂಗಂ	
ಉಪಾಧ್ಯಕ್ಷ (ಕ)	2 ಪ್ರದರ್ಶನಗಳು
ಸೈತಾನ್ (ಹಿಂ)	2 ಪ್ರದರ್ಶನಗಳು
ಲಿಡೋ	
ಭೀಮ (ತೆ)	4 ಪ್ರದರ್ಶನಗಳು
ತಿಬ್ಬಾದೇವಿ	
ಭೀಮ (ತೆ)	4 ಪ್ರದರ್ಶನಗಳು
ಪ್ರಭಾ	
ಕಾಟೇರ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ಗಾಮಿ (ತೆ): ಬೆ.10.40ಕ್ಕೆ, ರಾ.10.10ಕ್ಕೆ, ಜೋಗ್ 101 (ಕ): ಮ.1.40ಕ್ಕೆ, ಆರ್ಟಿಕಲ್ 370 (ಹಿಂ): ಸಂ.4ಕ್ಕೆ, ರಾ.7.05ಕ್ಕೆ
ಸ್ಕ್ರೀನ್ 2	ಕರಟಕ ದಮನಕ (ಕ): ಬೆ.10.20ಕ್ಕೆ, ಸೈತಾನ್ (ಹಿಂ): ಮ.1.25ಕ್ಕೆ, ರಾ.7.10ಕ್ಕೆ, ಡ್ಯೂನ್ ಪಾರ್ಟ್2 (ಇಂ): ಸಂ.4ಕ್ಕೆ, ರಂಗನಾಯಕ (ಕ): ರಾ.9.50ಕ್ಕೆ.
ಸ್ಕ್ರೀನ್ 3	ಬ್ಲಿಂಕ್ (ಕ): ಬೆ.10.25ಕ್ಕೆ, ಒಂದು ಸರಳ ಪ್ರೇಮಕಥೆ (ಕ): ಮ.1.15ಕ್ಕೆ, ಭೀಮ (ತೆ): ಸಂ.4.10ಕ್ಕೆ, ಮಂಜುಮಲೆ (ಮ): ರಾ.7.10ಕ್ಕೆ, ತಂಕಮಣಿ (ಮ): ರಾ.9.55ಕ್ಕೆ.
ಸ್ಕ್ರೀನ್ 4	ರಂಗನಾಯಕ (ಕ): ಬೆ.10.35ಕ್ಕೆ, ಕರಟಕ ದಮನಕ (ಕ): ಮ.1ಕ್ಕೆ,, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಆಪರೇಷನ್ ವ್ಯಾಲೆಂಟೈನ್ (ತೆ): ಬೆ.9.55ಕ್ಕೆ, ಲಾಪತಾ ಲೇಡಿಸ್ (ಹಿಂ): ಮ.12.45ಕ್ಕೆ, ಡ್ಯೂನ್ ಪಾರ್ಟ್2 (ಇಂ): ಮ.3.30ಕ್ಕೆ, ರಾ.7ಕ್ಕೆ, ರಾ.10.30ಕ್ಕೆ.
ಸ್ಕ್ರೀನ್ 2	ಡ್ಯೂನ್ ಪಾರ್ಟ್2 (ಇಂ): ಬೆ.9.50ಕ್ಕೆ, ಮ.1.20ಕ್ಕೆ, ಕ್ರೀಂ (ಕ): ಸಂ.4.50ಕ್ಕೆ, ಆಪರೇಷನ್ ವ್ಯಾಲೆಂಟೈನ್ (ತೆ): ರಾ.7.25ಕ್ಕೆ, ಮಂಜುಮ್ಮೆಲ್ ಬಾಯ್ಸ್ (ಮ): ರಾ.10.20ಕ್ಕೆ.
ಸ್ಕ್ರೀನ್ 3	ಲಾಪತಾ ಲೇಡಿಸ್ (ಹಿಂ): ಬೆ.10ಕ್ಕೆ, ರಾ.7.25ಕ್ಕೆ, ಆರ್ಟಿಕಲ್ 370 (ಹಿಂ): ಮ.12.45ಕ್ಕೆ, ಸಂ.4.05ಕ್ಕೆ, ರಾ.10.10ಕ್ಕೆ.
ಸ್ಕ್ರೀನ್ 4	ಆಪರೇಷನ್ ವ್ಯಾಲೆಂಟೈನ್ (ತೆ): ಮ.12ಕ್ಕೆ, ಉಪಾಧ್ಯಕ್ಷ (ಕ): ಮ.3.05ಕ್ಕೆ, ಒಂದು ಸರಳ ಪ್ರೇಮಕಥೆ (ಕ): ಸಂ.6.20ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ಪಾರ್ಕಿಂಗ್ (ಕ): ಬೆ.10.35ಕ್ಕೆ, ಸಪ್ತ ಸಾಗರದಾಚೆ ಎಲ್ಲೋ 2 (ಕ): ಮ.1.10ಕ್ಕೆ, ಬ್ಯಾಡ್ ಮ್ಯಾನರ್ಸ್ (ಕ): ಸಂ.4ಕ್ಕೆ, ಅರ್ಧಂಬರ್ಧ ಪ್ರೇಮಕಥೆ (ಕ): ಸಂ.6.35ಕ್ಕೆ, ಅನ್ನಪೂರ್ಣಿ (ತ): ರಾ.9.15ಕ್ಕೆ
ಸ್ಕ್ರೀನ್ 2	ಅನಿಮಲ್ (ಹಿಂ): ಬೆ.10ಕ್ಕೆ, ಸಂ.6ಕ್ಕೆ, ರಾ.9.45ಕ್ಕೆ, ಸ್ಯಾಮ್ ಬಹದ್ದೂರ್ (ಹಿಂ): ಮ.1.45ಕ್ಕೆ.
ಸ್ಕ್ರೀನ್ 3	ಸ್ಯಾಮ್ ಬಹದ್ದೂರ್ (ಹಿಂ): ಬೆ.10.10ಕ್ಕೆ, ಸಂ.4.50ಕ್ಕೆ, ಅನಿಮಲ್ (ಹಿಂ): ಮ.1.05ಕ್ಕೆ, ರಾ.7.45ಕ್ಕೆ
ಸ್ಕ್ರೀನ್ 4	ಸಪ್ತ ಸಾಗರದಾಚೆ ಎಲ್ಲೋ 2 (ಕ): ಬೆ.10.45ಕ್ಕೆ, ಅನಿಮಲ್ (ಹಿಂ): ಮ.2.40ಕ್ಕೆ, ನೆಪೋಲಿಯನ್ (ಇಂ): ಸಂ.6.25ಕ್ಕೆ, ಸ್ಯಾಮ್ ಬಹದ್ದೂರ್ (ಹಿಂ): ರಾ.9.30ಕ್ಕೆ.

ಪಿವಿಆರ್ ಸಿನಿಮಾಸ್
ಮೊ.ನಂ: 8951357139
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಆರ್ಟಿಕಲ್ 370 (ಹಿಂ): ಬೆ.9ಕ್ಕೆ, ಮ.12.20ಕ್ಕೆ, ಮ.3.40ಕ್ಕೆ, ರಾ.7ಕ್ಕೆ, ರಾ.10.20ಕ್ಕೆ, ಡ್ಯೂನ್ ಪಾರ್ಟ್ 2 (ಇಂ): ಬೆ.8.30ಕ್ಕೆ, ಮ.12ಕ್ಕೆ, ಮ.3.30ಕ್ಕೆ, ರಾ.7ಕ್ಕೆ, ರಾ.10.30ಕ್ಕೆ, ಡೆಮೋನ್ ಸ್ಲೇಯರ್ (ಜ): ಸಂ.4.30ಕ್ಕೆ, ಆಪರೇಷನ್ ವ್ಯಾಲೆಂಟೈನ್ (ತೆ & ಹಿಂ): ಬೆ.9.45ಕ್ಕೆ, ಮ.3.40ಕ್ಕೆ, ಸಂ.6.35ಕ್ಕೆ, ರಾ.9.30ಕ್ಕೆ, ಲಾಪತಾ ಲೇಡಿಸ್ (ಹಿಂ): ಬೆ.10.35ಕ್ಕೆ, ಸಂ.4.10ಕ್ಕೆ, ರಾ.9.45ಕ್ಕೆ, ಮಂಜುಮ್ಮೆಲ್ ಬಾಯ್ಸ್ (ಮ): ಬೆ.10.20ಕ್ಕೆ, ಮ.1.25ಕ್ಕೆ, ರಾ.7.25ಕ್ಕೆ, ತೇರಿ ಬತೂನ್ ಮೇ ಐಸಾ ಉಲ್ಜಾ ಜಿಯಾ (ಹಿಂ): ಬೆ.11.55ಕ್ಕೆ, ಕ್ರೀಂ (ಕ): ಸಂ.6.55ಕ್ಕೆ, ಪ್ರೇಮಲು (ಮ): ರಾ.10.20ಕ್ಕೆ, ಜೋಶುವಾ (ತ): ಮ.1.20ಕ್ಕೆ, ಸಂ.6.55ಕ್ಕೆ, ಭ್ರಮಯುಗಂ (ಮ): ರಾ.9.45ಕ್ಕೆ, ವಾರನಂ ಆಯಿರಂ (ತ): ಮ.3.40ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಆದಿಶಕ್ತಿ ತೋಪಮ್ಮ ಅದ್ಧೂರಿ ಜಾತ್ರಾ ಮಹೋತ್ಸವ



ಕೆ.ಆರ್.ನಗರ, ಮಾ.13– ಪಟ್ಟಣದ ಆದಿಶಕ್ತಿ ತೋಪಮ್ಮ ತಾಯಿ ವಾರ್ಷಿಕ ಜಾತ್ರಾಮಹೋತ್ಸವ ಸಾವಿರಾರು ಭಕ್ತರ ಸಮ್ಮುಖದಲ್ಲಿ ಅತ್ಯಂತ ವಿಜೃಂಭಣೆಯಿಂದ ನಡೆಯಿತು.

ಜಾತ್ರೆಯ ಅಂಗವಾಗಿ ದೇವಾಲಯದಲ್ಲಿ ಬೆಳಗ್ಗೆಯಿಂದಲೇ ವಿಶೇಷ ಪೂಜೆ ನೆರವೇರಿಸಿ ದೇವಿಗೆ ಅಲಂಕಾರ ಮಾಡುವುದರ ಜತೆಗೆ ದೇವಸ್ಥಾನವನ್ನು ವಿವಿಧ ಬಗೆಯ ಪುಷ್ಪಗಳಿಂದ ಶೃಂಗರಿಸಲಾಗಿತ್ತು. ಪಟ್ಟಣದ ಶಕ್ತಿ ದೇವತೆ ಎಂದೇ ಹೆಸರಾಗಿರುವ ತೋಪಮ್ಮ ವಾರ್ಷಿಕ ಜಾತ್ರಾ ಮಹೋತ್ಸವಕ್ಕೆ ಕೆ.ಆರ್.ನಗರ ಮತ್ತು ಸುತ್ತ ಮುತ್ತಲ ನೂರಾರು ಗ್ರಾಮಗಳ ಭಕ್ತರು ಆಗಮಿಸಿ ದೇವರ ದರ್ಶನ ಪಡೆದು ಹರಕೆ ತೀರಿಸಿದರು.

ಶಾಸಕ ಡಿ.ರವಿಶಂಕರ್, ಕಾಗಿನೆಲೆ ಕನಕ ಗುರುಪೀಠದ ಶಿವಾನಂದಪುರಿ ಸ್ವಾಮೀಜಿ ಮತ್ತು ಇತರ ಚುನಾಯಿತ ಜನಪ್ರತಿನಿಧಿಗಳು ಹಾಗೂ ಮುಖಂಡರು ದೇವಾಲಯಕ್ಕೆ ಭೇಟಿ ನೀಡಿ ದೇವಿಯ ದರ್ಶನ ಪಡೆದು ವಿಶೇಷ ಪೂಜೆ ಸಲ್ಲಿಸಿದರು. ಈ ಹಿಂದಿನ ಬಾರಿಗೆ ಹೋಲಿಸಿದರೆ ಈ ಸಾರಿ ಆದಿಶಕ್ತಿ ತೋಪಮ್ಮ ದೇವಾಲಯದ 9 ಗ್ರಾಮಗಳ ಟ್ರಸ್ಟ್‌ನ ಆಡಳಿತ ಮಂಡಳಿಯವರು ವ್ಯವಸ್ಥಿತವಾಗಿ ಜಾತ್ರೆ ನಡೆಸಿ ಸಾರ್ವಜನಿಕರ ಮೆಚ್ಚುಗೆಗೆ ಪಾತ್ರರಾದರು. ಟ್ರಸ್ಟ್‌ನ ಗೌರವಾಧ್ಯಕ್ಷ ಅಣ್ಣಯ್ಯ ನಾಯಕ, ಅಧ್ಯಕ್ಷ ಚೌಕಹಳ್ಳಿ ರಾಜಣ್ಣ, ಕಾರ್ಯದರ್ಶಿ ಕೆ.ಪಿ.ಜಗದೀಶ್, ಖಜಾಂಚಿ ಪರಶಿವಮೂರ್ತಿ, ನಿರ್ದೇಶಕರಾದ ಯೋಗೇಶ್, ನಂಜುಂಡ, ಮೋಟೇಗೌಡ, ಚನ್ನಬಸಪ್ಪ, ಜವರೇಗೌಡ, ಚನ್ನಕೇಶವ, ಆರ್.ಬಿ.ಮಹದೇವ ಮತ್ತಿತರರು ಪಾಲ್ಗೊಂಡಿದ್ದರು.

ಸರಗೂರಲ್ಲಿ ದಿ. ಧ್ರುವನಾರಾಯಣ್ ಪುಣ್ಯಸ್ಮರಣೆ



ಸರಗೂರು ಪಟ್ಟಣದಲ್ಲಿ ಆದಿಕರ್ನಾಟಕ ಸಮಾಜದ ವತಿಯಿಂದ ಮಾಜಿ ಸಂಸದರು, ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್.ಧ್ರುವನಾರಾಯಣ್ ಅವರ ಪುಣ್ಯಸ್ಮರಣೆ ಆಚರಣೆ ಮಾಡಲಾಯಿತು.

ಸರಗೂರು, ಮಾ.13– ಸರಗೂರು ತಾಲೂಕು ಕೇಂದ್ರವಾಗಿ ಘೋಷಣೆಯಾಗಲು ಅವಿರತವಾಗಿ ಶ್ರಮಿಸಿದರು ಆರ್.ಧ್ರುವನಾರಾಯಣ್ ಎಂದು ಪಟ್ಟಣ ಪಂಚಾಯಿತಿ ಮಾಜಿ ಅಧ್ಯಕ್ಷ ಶಿವಣ್ಣ ತಿಳಿಸಿದರು,

ಪಟ್ಟಣದ ಆದಿ ಕರ್ನಾಟಕ ಸಮಾಜದ ವತಿಯಿಂದ ಡಾ. ಅಂಬೇಡ್ಕರ್ ಸಮುದಾಯ ಭವನದಲ್ಲಿ ಮಾಜಿ ಸಂಸದರು, ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್.ಧ್ರುವನಾರಾಯಣ್ ಅವರ ಪ್ರಥಮ ವರ್ಷದ ಪುಣ್ಯಸ್ಮರಣೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿ, ಹೃದಯಾಘಾತದಿಂದ ಅಗಲಿದ ನೆಚ್ಚಿನ ನಾಯಕ ಧ್ರುವನಾರಾಯಣ್ ಅವರ ಸರಳತೆ, ನಾಯಕತ್ವ ಗುಣ, ಕಾರ್ಯವೈಖರಿಗಳ ಬಗ್ಗೆ ಎಷ್ಟು ಗುಣಗಾನ ಮಾಡಿದರೂ ಸಾಲದು ಎಂದರು.

ಸರಗೂರು ತಾಲೂಕು ಕೇಂದ್ರವಾಗಿ ಘೋಷಣೆಯಾಗಲು ಅವಿರತವಾಗಿ ಶ್ರಮಿಸಿದರು. ಗ್ರಾಮಾಂತರ ಭಾಗದ ಪ್ರತಿ ಹಳ್ಳಿಗಳಲ್ಲಿ ಅಂಬೇಡ್ಕರ್ ಭವನ, ವಾಲ್ಮೀಕಿ ಭವನ, ವಿಶ್ವಕರ್ಮ ಸಮುದಾಯ ಭವನ ಸೇರಿದಂತೆ ಭವನಗಳು ನಿರ್ಮಾಣಗೊಳ್ಳಲು ಧ್ರುವನಾರಾಯಣ್ ಅವರ ಶ್ರಮ ಅಪಾರವಾದುದು ಎಂದು ಹೇಳಿದರು.

ಡಾ.ಬಿ.ಆರ್.ಅಂಬೇಡ್ಕರ್ ಟ್ರಸ್ಟ್ ಅಧ್ಯಕ್ಷ ಇದೀಯಪ್ಪ ಮಾತನಾಡಿದರು. ಇದಕ್ಕೂ ಮುನ್ನ ಆರ್. ಧ್ರುವನಾರಾಯಣ್ ಅವರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿ ಗೌರವಿಸಲಾಯಿತು. ಪುಣ್ಯಸ್ಮರಣೆಯಲ್ಲಿ ಪಟ್ಟಣ ಪಂಚಾಯಿತಿ ಮಾಜಿ ಅಧ್ಯಕ್ಷ ಶಿವಣ್ಣ, ಡಾ.ಬಿ.ಆರ್.ಅಂಬೇಡ್ಕರ್ ಟ್ರಸ್ಟ್ ಅಧ್ಯಕ್ಷ ಇದೀಯಪ್ಪ, ಆದಿ ಕರ್ನಾಟಕ ಸಮಾಜದ ಯಜಮಾನರಾದ ಜವರಯ್ಯ, ಭೀಮಯ್ಯ, ಗೋಪಾಲಯ್ಯ, ಶಿವಶಂಕರ್, ಹುಚ್ಚಯ್ಯ, ಬಿಲ್ಲಯ್ಯ, ಸಣ್ಣಸ್ವಾಮಿ, ಕಲ್ಲಪ್ಪ ಹಾಜರಿದ್ದರು.

ಯುವ ಪೀಳಿಗೆ ಕ್ರೀಡೆಗೆ ಹೆಚ್ಚು ಒತ್ತು ನೀಡಬೇಕು

ನೇರಳೆ ಗ್ರಾಮ ನಾಲ್ವಡಿ ಸ್ಟ್ರೈಕರ್ಸ್ ತಂಡಕ್ಕೆ ಹರೀಶ್ ಕಪ್



ಪ್ರಥಮ ಸ್ಥಾನ ಪಡೆದು ಹರೀಶ್ ಕಪ್ ತನ್ನದಾಗಿಸಿಕೊಂಡ ನಾಲ್ವಡಿ ಸ್ಟ್ರೈಕರ್ಸ್ ತಂಡ.

ಹೆಚ್.ಡಿ.ಕೋಟೆ, ಮಾ.13– ಯುವ ಪೀಳಿಗೆ ಕ್ರೀಡೆಗೆ ಹೆಚ್ಚು ಒತ್ತು ನೀಡಬೇಕು ಎಂದು ಜೆಡಿಎಸ್ ಮುಖಂಡ ಜಯಪ್ರಕಾಶ್ ಚಿಕ್ಕಣ್ಣ ತಿಳಿಸಿದರು.

ತಾಲೂಕಿನ ನೇರಳೆ ಗ್ರಾಮದಲ್ಲಿ ಇತ್ತೀಚೆಗೆ ನಿಧನರಾದ ದಿ: ಹರೀಶ್ ಅವರ ಸ್ಮರಣಾರ್ಥ ಬೀಚನಹಳ್ಳಿ ಗ್ರಾಮದಲ್ಲಿರುವ ಹೆಲಿಪ್ಯಾಡ್ ಗ್ರೌಂಡ್‌ನಲ್ಲಿ ಆಯೋಜಿಸಲಾಗಿದ್ದ ತಾಲೂಕು ಮಟ್ಟದ ಹರೀಶ್ ಕಪ್ ಕ್ರಿಕೆಟ್ ಟೂರ್ನಿಮೆಂಟ್ ಉದ್ಘಾಟಿಸಿ ಮಾತನಾಡಿದರು.

ಇಂದಿನ ಯುವ ಪೀಳಿಗೆ ಆರೋಗ್ಯ ದೃಷ್ಟಿಯಿಂದ ಕ್ರೀಡಾ ಚಟುವಟಿಕೆಯಲ್ಲಿ ಭಾಗವಹಿಸಿ ಕ್ರೀಡೆಯಲ್ಲಿ ಇನ್ನು ಹೆಚ್ಚು ಆಸಕ್ತಿಯುಳ್ಳ ಯುವಕರುಗಳನ್ನು ಮುಂದೆ ತರುವುದರಲ್ಲಿ ನಮ್ಮಗಳ ಶ್ರಮ ಇರಬೇಕು ಎಂದರು.

ಬಹಳಷ್ಟು ಯುವಕರುಗಳು ದುಶ್ಚಟಕ್ಕೆ ಒಳಗಾಗಿ ಪ್ರಾಣಕ್ಕೆ ಕುತ್ತು ತಂದುಕೊಳ್ಳುವ ಕೆಲಸಕ್ಕೆ ಮುಂದಾಗುತ್ತಿದ್ದಾರೆ. ದುಶ್ಚಟಗಳಿಂದ ದೂರವಿದ್ದು, ಕ್ರೀಡೆಗೆ ಹೆಚ್ಚಿನ ಪ್ರೋತ್ಸಾಹ ಕೊಡುವ ನಿಟ್ಟಿನಲ್ಲಿ ಯುವಕರುಗಳು, ಬದಲಾವಣೆ ಕಂಡುಕೊಳ್ಳಬೇಕು ಎಂದು ತಿಳಿಸಿದರು.

ಇದೇ ಸಂದರ್ಭದಲ್ಲಿ ಸುಭಾಷ್ ಕಬಿನಿ ಪವರ್ ಪ್ರಾಜೆಕ್ಟ್‌ನ ಮುಖ್ಯಸ್ಥ ಕುಮಾರ್ ಮಾತನಾಡಿ, ಯುವಕರುಗಳು ವಿದ್ಯಾಭ್ಯಾಸದಲ್ಲಿ ಸಾಕಷ್ಟು ಮುಂದಿದ್ದಾರೆ. ಅದರ ಜೊತೆಗೆ ಆರೋಗ್ಯವನ್ನು ಕಾಪಾಡಿಕೊಳ್ಳುವ ನಿಟ್ಟಿನಲ್ಲಿ ಕ್ರೀಡೆಗಳಲ್ಲಿ ಭಾಗವಹಿಸಿ, ಜಿಲ್ಲೆ, ರಾಜ್ಯ, ರಾಷ್ಟ್ರ ಮಟ್ಟದವರೆಗೂ, ಭಾಗವಹಿಸಿ ನಮ್ಮ ತಾಲೂಕಿಗೆ ಕೀರ್ತಿ ತರುವುದರಲ್ಲಿ ಮುಂದಾಗಿ ಎಂದು ತಿಳಿಸಿದರು.

ಟೂರ್ನಿಯಲ್ಲಿ ನೇರಳೆ ಗ್ರಾಮದ ನಾಲ್ವಡಿ ಸ್ಟ್ರೈಕರ್ಸ್ ತಂಡ ಹರೀಶ್ ಕಪ್ ಮತ್ತು 50 ಸಾವಿರ ರೂ. ನಗದು ಬಹುಮಾನ ಪಡೆದುಕೊಂಡಿತು. ದ್ವಿತೀಯ ಬಹುಮಾನ ಅನಿಲ್ ಚಿಕ್ಕಮಾದು ಟೈಗರ್ಸ್ ತಂಡ 30 ಸಾವಿರ ರೂ. ಪಡೆದುಕೊಂಡಿದೆ. ಮ್ಯಾನ್ ಆಫ್ ದಿ ಸೀರಿಸ್, ಉತ್ತಮ ಬ್ಯಾಟ್ಸ್‌ಮ್ಯಾನ್, ಪ್ರಥಮ ಸ್ಥಾನವನ್ನು ಸರಗೂರು ಪಟ್ಟಣದ ಪ್ರದೀಪ್ ಅವರು ಪಡೆದು ಕೊಂಡಿದ್ದಾರೆ. ಬೆಸ್ಟ್ ಬೌಲರ್‌ರಾಗಿ ಕೋಟೆ ಪಟ್ಟಣದ ಚನ್ನ ಎಂಬುವರು ಪಡೆದುಕೊಂಡಿದ್ದು, ಆಲ್‌ರೌಂಡ್‌ರಾದ ಪ್ರದೀಪ್ ಭಂಡಾರಿ ಅವರಿಗೆ ಪದಕ ನೀಡಲಾಯಿತು.

ಕಾರ್ಯಕ್ರಮದಲ್ಲಿ ಹರೀಶ್ ಚಾಲೆಂಜರ್ಸ್ ತಂಡದ ನಾಯಕ ಸಂತೋಷ್(ತಮ್ಮಣ್ಣ), ಗ್ರಾಮ ಪಂಚಾಯಿತಿ ಅಧ್ಯಕ್ಷೆ ಲಕ್ಷ್ಮಿ, ಮಾಜಿ ಅಧ್ಯಕ್ಷ ಎನ್.ಸಿ. ಪ್ರಕಾಶ್, ಮುಖಂಡಗಳಾದ ಗೋವಿಂದರಾಜು, ಶಿವನಂಜು, ಗೋವಿಂದ ನಾಯಕ, ರಾಜೇಗೌಡ, ಶಿವಕುಮಾರ್ ಇನ್ನೂ ಮುಂತಾದವರು ಹಾಜರಿದ್ದರು.

ನಂಜನಗೂಡು ತಾಲೂಕು ಕುರುಬರ ಸಂಘದ ಸದಸ್ಯತ್ವ ನೋಂದಣಿಗೆ ಅವಧಿ ವಿಸ್ತರಣೆ

ನಂಜನಗೂಡು, ಮಾ.13– ತಾಲೂಕು ಕುರುಬರ ಸಂಘದ ಸದಸ್ಯತ್ವ ನೊಂದಣಿಗೆ ಮಾ.30ರವರೆಗೆ ಅವಧಿಯನ್ನು ವಿಸ್ತರಿಸಲಾಗಿದೆ ಎಂದು ತಾಲೂಕು ಕುರುಬರ ಸಂಘದ ಅಧ್ಯಕ್ಷ ಕೆಂಪಣ್ಣ ಹೇಳಿದರು.

ಫೆ.2ರಂದು ನಡೆದ ತಾಲೂಕು ಕುರುಬರ ಸಂಘದ ಸರ್ವ ಸದಸ್ಯರ ಸಭೆಯ ನಿರ್ಣಯದಂತೆ ಸಂಘವನ್ನು ದೊಡ್ಡ ಮಟ್ಟದಲ್ಲಿ ವಿಸ್ತರಿಸುವ ಸಲುವಾಗಿ ಸಂಘದ ಸದಸ್ಯರ ಕೋರಿಕೆಯಂತೆ ಅವಧಿಯನ್ನು ವಿಸ್ತರಿಸಲಾಗಿದ್ದು, ಸಮಾಜದ ಬಂಧುಗಳು ಈ ಸದಾವಕಾಶವನ್ನು ಸದುಪಯೋಗಪಡಿಸಿಕೊಂಡು ಹೆಚ್ಚಿನ ಸಂಖ್ಯೆಯಲ್ಲಿ ನೊಂದಾವಣಿ ಮಾಡಿಕೊಂಡು ಸದಸ್ಯರಾಗಬೇಕು ಹಾಗೂ ಸದಸ್ಯತ್ವವನ್ನು ಪಡೆದುಕೊಳ್ಳಲು ಆಧಾರ್‌ಕಾರ್ಡ್ ನಕಲು ಪ್ರತಿ, ಇತ್ತೀಚಿನ ಎರಡು ಭಾವಚಿತ್ರಗಳನ್ನು ಕಚೇರಿಗೆ ನೀಡಿ ಸದಸ್ಯತ್ವ ಪಡೆದುಕೊಳ್ಳಬೇಕು ಎಂದು ಅವರು ಪ್ರಕಟಣೆಯಲ್ಲಿ ಕೋರಿದ್ದಾರೆ.

ಮಾ.26, ಶ್ರೀ ಗುಂಜಾ ನರಸಿಂಹಸ್ವಾಮಿ ಬ್ರಹ್ಮ ರಥೋತ್ಸವ

ಬಣ್ಣ ಹಾಕುವುದನ್ನು ಸಂಪೂರ್ಣವಾಗಿ ನಿಷೇಧಿಸಿದ ತಾಲೂಕು ಆಡಳಿತ



ತಿ.ನರಸೀಪುರ, ಮಾ.13– ಪಟ್ಟಣದ ಶ್ರೀ ಗುಂಜಾ ನರಸಿಂಹಸ್ವಾಮಿ ಬ್ರಹ್ಮ ರಥೋತ್ಸವವು ಮಾ.26ರ ಮಂಗಳವಾರ ನಡೆಯಲಿದ್ದು, ರಥೋತ್ಸವಕ್ಕೆ ಎಲ್ಲರೂ ಸಹಕಾರ ನೀಡುವಂತೆ ತಹಸೀಲ್ದಾರ್ ಸುರೇಶಾಚಾರ್ ಮನವಿ ಮಾಡಿದ್ದಾರೆ.

ತಮ್ಮ ಕಚೇರಿಯಲ್ಲಿ ಶ್ರೀ ಗುಂಜಾ ನರಸಿಂಹಸ್ವಾಮಿ ಬ್ರಹ್ಮ ರಥೋತ್ಸವ ಅಂಗವಾಗಿ ಬುಧವಾರ ಕರೆಯಲಾಗಿದ್ದ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದ ಅವರು, ಪ್ರತಿ ವರ್ಷದಂತೆ ಈ ಬಾರಿಯೂ ಅದ್ಧೂರಿಯಾಗಿ ರಥೋತ್ಸವವನ್ನು ಆಚರಿಸಲು ಎಲ್ಲರೂ ಸಹಕರಿಸಬೇಕು ಎಂದು ಮನವಿ ಮಾಡಿ, ರಥೋತ್ಸವದ ಅಂಗವಾಗಿ ಮಾ.19 ರಿಂದ 30ರವರೆಗೆ ವಿವಿಧ ಧಾರ್ಮಿಕ ಕಾರ್ಯಕ್ರಮಗಳು ಜರುಗಲಿವೆ ಎಂದರು.

ಪುರಸಭೆ ವತಿಯಿಂದ ಸ್ವಚ್ಛತಾ ಕಾರ್ಯಕ್ರಮಗಳು ನಡೆಯಲಿದ್ದು, ರಥೋತ್ಸವಕ್ಕೆ ಬರುವ ಭಕ್ತಾದಿಗಳಿಗೆ ಕುಡಿಯುವ ನೀರಿನ ವ್ಯವಸ್ಥೆಯನ್ನು, ಗ್ರಾಮೀಣ ನೈರ್ಮಲ್ಯ ಇಲಾಖೆ ವತಿಯಿಂದ ಮಾಡಲಾಗುವುದು. ಅಗ್ನಿಶಾಮಕ ದಳದವರು ರಥವನ್ನು ಸ್ವಚ್ಛಗೊಳಿಸಿಕೊಡಲು ತಿಳಿಸಿ, ಸಾರ್ವಜನಿಕ ಆಸ್ಪತ್ರೆ ವತಿಯಿಂದ ಆಂಬುಲೆನ್ಸ್ ವ್ಯವಸ್ಥೆ ಹಾಗೂ ಪೊಲೀಸ್ ಇಲಾಖೆಯವರು ಸೂಕ್ತ ಬಂದೋಬಸ್ತ್ ವ್ಯವಸ್ಥೆಯನ್ನು ಕಲ್ಪಿಸಿ, ರಥೋತ್ಸವದಲ್ಲಿ ಯುವಕರು ಬಣ್ಣ ಎರಚಾಟ ಮಾಡುವುದರಿಂದ ಬರುವ ಭಕ್ತರಿಗೆ ಸಮಸ್ಯೆಯಾಗುವುದರಿಂದ ಸಂಪೂರ್ಣವಾಗಿ ಬಣ್ಣ ಹಾಕುವುದನ್ನು ನಿಷೇಧಿಸಲಾಗಿದೆ ಎಂದರು. ಪುರಸಭಾ ವತಿಯಿಂದ ಸಂಪೂರ್ಣವಾಗಿ ರಥೋತ್ಸವ ಜರುಗುವ ಜಾಗದಲ್ಲಿ ಸ್ವಚ್ಛಗೊಳಿಸಿ ವಿದ್ಯುತ್ ವಿತರಣಾ ನಿಗಮದಲ್ಲಿ ಮರಗಳನ್ನು ತೆಗೆಯುವುದು ಮತ್ತು ರಥೋತ್ಸವಕ್ಕೆ ಬರುವ ಭಕ್ತಾದಿಗಳಿಗೆ ಕುಡಿಯುವ ನೀರಿನ ವ್ಯವಸ್ಥೆಗೊಳಿಸಿ ಬಿಸಿಲ ಬೇಗೆಯಿಂದ ಕಾಪಾಡಬೇಕು ಎಂದು ಸಭೆಯಲ್ಲಿ ತೀರ್ಮಾನಿಸಲಾಯಿತು. ಸಭೆಯಲ್ಲಿ ಪಾರುಪತ್ತೆಗಾರ್ ವಿ. ಪ್ರದೀಪ್(ದೀಪು), ಪೊಲೀಸ್ ಇಲಾಖೆಯ ಮೇದಪ್ಪ, ಜಗದೀಶ್ ಧೂಳ್ ಶೆಟ್ಟಿ, ಕುರುಬ ಸಮುದಾಯದ ಯಜಮಾನ ಬಸವಣ್ಣ, ಮಹದೇವ್ (ಪುಳ್ಳಾರಿಗೌಡ), ನಾಯಕ ಸಮುದಾಯದ ಯಜಮಾನ ಮಹದೇವಪ್ಪ, ಘಟಕ ಮಹದೇವ್, ಕೆಬ್ಬೆ ಹಾಗೂ ವ್ಯಾಸರಾಜಪುರದ ಗ್ರಾಮದ ಕೃಷ್ಣ, ರಮೇಶ್, ಆಲಗೂಡು ಗ್ರಾಮದ ರಾಚಪ್ಪ, ಗಿರೀಶ್, ಕುಮಾರ್, ರಾಜು, ದೇವಸ್ಥಾನದ ಮುಜರಾಯಿ ಇಲಾಖೆಯ ಕಿರಣ್ ಮತ್ತಿತರರು ಉಪಸ್ಥಿತರಿದ್ದರು.

ಬಿಜೆಪಿ ಗ್ರಾಮಾಂತರ ಕಾರ್ಯದರ್ಶಿಯಾಗಿ ನೇಮಕ



ತಿ.ನರಸೀಪುರ, ಮಾ.13– ಭಾರತೀಯ ಜನತಾ ಪಾರ್ಟಿಯ ಮೈಸೂರು ಜಿಲ್ಲಾ ಗ್ರಾಮಾಂತರ ಕಾರ್ಯದರ್ಶಿಯಾಗಿ ಹಿರಿಯ ಮುಖಂಡ ನುಗ್ಗಹಳ್ಳಿಕೊಪ್ಪಲು ಎನ್.ಎಂ. ರಾಮಚಂದ್ರ ಅವರನ್ನು ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಅವರ ಆದೇಶದ ಮೇರೆಗೆ ಜಿಲ್ಲಾ ಗ್ರಾಮಾಂತರ ಅಧ್ಯಕ್ಷ ಎಲ್. ಆರ್. ಮಹಾದೇವಸ್ವಾಮಿ ನೇಮಕ ಮಾಡಿ ಆದೇಶ ಹೊರಡಿಸಿದ್ದಾರೆ.

ನೀರಿಗಾಗಿ ಖಾಲಿಕೊಡ ಹಿಡಿದು ಪ್ರತಿಭಟನೆ



ಚನ್ನಕಲ್ ಹಾಡಿ ನಿವಾಸಿಗಳು ಕುಡಿಯುವ ನೀರಿಗಾಗಿ ಪ್ರತಿಭಟನೆ ನಡೆಸಿದರು.

ಬೈಲಕುಪ್ಪೆ, ಮಾ.13– ಪಿರಿಯಾಪಟ್ಟಣ ತಾಲೂಕಿನ ಚೆನ್ನಕಲ್ ಕಾವಲ್ ಗ್ರಾಮ ಪಂಚಾಯಿತಿ ವ್ಯಾಪ್ತಿ ಚನ್ನಕಲ್ ಹಾಡಿ ಜನರು ಕುಡಿಯಲು ನೀರು ಕೊಡಿ ಎಂದು ಖಾಲಿ ಕೊಡ ಹಿಡಿದು ಪ್ರತಿಭಟನೆ ನಡೆಸಿದರು.

ಈ ವೇಳೆ ಮುಖಂಡ ಶ್ರೀನಿವಾಸ್ ಮಾತನಾಡಿ, ಚನ್ನಕಲ್ ಕಾವಲು ಗ್ರಾಪಂ ಪಿಡಿಓಗೆ ಹಲವಾರು ಬಾರಿ ಕುಡಿಯಲು ನೀರು ಸಮಸ್ಯೆ ಗಮನಕ್ಕೆ ತಂದರೂ ನೀರಿನ ಸೌಕರ್ಯ ಒದಗಿಸಿ ಕೊಟ್ಟಿಲ್ಲ ಎಂದು ಆರೋಪಿಸಿದರು. ನಾವು ಗ್ರಾಮದ ಸುತ್ತಮುತ್ತ ನೀರನ್ನು ಒಂದು ಕಿಲೋಮೀಟರ್ ದೂರದಿಂದ ಹೊತ್ತು ತಂದು ಕುಡಿಯುವಂತಾಗಿದೆ. ಕೂಲಿಯಿಂದ ಜೀವನ ಮಾಡುವ ನಾವುಗಳು ನೀರಿಗಾಗಿ ಪರದಾಡುವಂತಾಗಿದೆ ಎಂದರು. ಮಹಿಳೆ ತೋಪಮ್ಮ ಮಾತನಾಡಿ, ನಮಗೆ ಕುಡಿಯಲು ನೀರಿಲ್ಲದೆ ಧನ ಕರುಗಳಿಗೂ ಸಹ ನೀರಿಲ್ಲ. ಸುತ್ತಮುತ್ತ ಕೆರೆಗಳು ಸಹ ಇಲ್ಲ. ರೈತರ ಪಂಪ್‌ಸೆಟ್ ನೀರಿಗೆ ಹೋದರೆ ಸಮಯಕ್ಕೆ ಸರಿಯಾಗಿ ಕೂಲಿ ಕೆಲಸಕ್ಕೆ ಹೋಗಲು ಸಾಧ್ಯವಾಗುತ್ತಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು. ಈ ಸಂದರ್ಭದಲ್ಲಿ ಅರಸು, ರವಿ, ಕೆಂಪಮ್ಮ, ಸೋಮಣ್ಣ, ಲಕ್ಷ್ಮಿ, ಮುನಿಯಮ್ಮ, ಕಾಳಮ್ಮ, ಶಿವಮ್ಮ, ರಮ್ಯಾ, ಮಾದೇವಿ, ಪವಿತ್ರ, ಕೆಂಪಮ್ಮ, ಸಂಜೀವ, ಅನಿತಾ, ಜೋಗ, ಸೌಮ್ಯ ಇದ್ದರು.

ಸಮ ಸಮಾಜದ ನಿರ್ಮಾಣಕ್ಕೆ ಶ್ರಮಿಸಿದ ದಾರ್ಶನಿಕ ಕನಕದಾಸರು

ಭೂಮಿ ಕಳೆದುಕೊಂಡವರಿಗೆ ಕಾರ್ಖಾನೆಗಳಲ್ಲಿ ಉದ್ಯೋಗ ನೀಡಲು ಕ್ರಮ



ಕೋರೆಹುಂಡಿ ಬಡಾವಣೆಯಲ್ಲಿ ಭಕ್ತ ಕನಕ ದಾಸ ಯುವಕರ ಸಂಘವನ್ನು ಶಾಸಕ ದರ್ಶನ್ ಉದ್ಘಾಟಿಸಿದರು.

ನಂಜನಗೂಡು, ಮಾ.13– ಭಕ್ತ ಕನಕದಾಸರು ಸಮ ಸಮಾಜದ ನಿರ್ಮಾಣಕ್ಕಾಗಿ ಶ್ರಮಿಸಿದ ಶ್ರೇಷ್ಠ ದಾರ್ಶನಿಕರು. ಸಂಘಟನೆಯ ಯುವಕರು ಅವರ ಹೆಸರಿಗೆ ಚ್ಯುತಿ ಬಾರದಂತೆ ಸಮಾಜವನ್ನು ಸಂಘಟನೆಗೊಳಿಸಿ ಸೇವಾ ಕಾರ್ಯಗಳಲ್ಲಿ ತೊಡಗಿಕೊಳ್ಳಿ ಎಂದು ಶಾಸಕ ದರ್ಶನ್ ಧ್ರುವನಾರಾಯಣ್ ಕರೆ ನೀಡಿದರು.

ನಗರದ ಕೋರೆಹುಂಡಿ ಬಡಾವಣೆಯಲ್ಲಿ ಭಕ್ತ ಕನಕದಾಸ ಯುವಕರ ಸಂಘವನ್ನು ಉದ್ಘಾಟಿಸಿ ಮಾತನಾಡಿದ ಅವರು, ಸಮಾಜದ ಯುವಕರು ಸಮುದಾಯದ ಬಡವರಿಗೆ ನೆರವು ನೀಡುವಂತಹ, ಸಮುದಾಯದ ಮಕ್ಕಳ ಶಿಕ್ಷಣಕ್ಕೆ ಉಪಯೋಗವಾಗುವಂತಹ ಕಾರ್ಯಕ್ರಮಗಳನ್ನು ರೂಪಿಸುವ ಮೂಲಕ ಸಮಾಜಕ್ಕೆ ನೆರವು ನೀಡಬೇಕು ಎಂದರು.

ಕೋರೆಹುಂಡಿ, ಚಾಮಲಾಪುರ ಬಡಾವಣೆಗಳ ಜನರು ಕಾರ್ಖಾನೆಗಳಿಗಾಗಿ ಭೂಮಿ ಕಳೆದುಕೊಂಡವರು. ಅವರಿಗೆ ಕಾರ್ಖಾನೆಗಳಲ್ಲಿ ಉದ್ಯೋಗ ನೀಡುತ್ತಿಲ್ಲ ಎಂಬ ಬಗ್ಗೆ ದೂರು ಕೇಳಿ ಬಂದಿದ್ದು. ನಿರುದ್ಯೋಗ ನಿವಾರಿಸುವ ಸಲುವಾಗಿ ಕಾರ್ಖಾನೆಯ ಮುಖ್ಯಸ್ಥರ ಸಭೆ ಕರೆದು ಉದ್ಯೋಗ ನೀಡುವಂತೆ ಸೂಚನೆ ನೀಡಲಾಗುವುದು. ಜೊತೆಗೆ ಕಾರ್ಖಾನೆಗಳ ಸಿಎಸ್‌ಆರ್ ಅನುದಾನದಲ್ಲಿ ಗ್ರಾಮಕ್ಕೆ ಅವಶ್ಯಕವಿರುವ ಚರಂಡಿ ಮತ್ತು ರಸ್ತೆ, ಶುದ್ಧ ಕುಡಿಯುವ ನೀರಿನ ಘಟಕ ಸೇರಿದಂತೆ ಅಗತ್ಯ ಸೌಲಭ್ಯ ಕಲ್ಪಿಸುವಂತೆ ಸೂಚನೆ ನೀಡಿ ಅಭಿವೃದ್ಧಿಗೆ ಕ್ರಮವಹಿಸುವುದಾಗಿ ಭರವಸೆ ನೀಡಿದರು.

ನಗರ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಸಿ.ಎಂ.ಶಂಕರ್ ಮಾತನಾಡಿ, ಕೋರೆಹುಂಡಿ, ಚಾಮಲಾಪುರ ಬಡಾವನೆಗಳ ಜನರು ಕಾರ್ಖಾನೆಗಾಗಿ ಭೂಮಿ ಕಳೆದುಕೊಂಡಿದ್ದರೂ ಸಹ ಅವರಿಗೆ ಉದ್ಯೋಗ ನೀಡದೆ ವಂಚಿಸಲಾಗುತ್ತಿದೆ. ಆದ್ದರಿಂದ ಈ ಭಾಗದ ಕಾರ್ಖಾನೆಗಳು ಶೇ 25 ರಷ್ಟು ಉದ್ಯೋಗವನ್ನು ಸ್ಥಳೀಯರಿಗೆ ಮೀಸಲಿಡುವಂತೆ ಸೂಚನೆ ನೀಡಬೇಕು. ಜೊತೆಗೆ ಈ ಬಡಾವಣೆಯಲ್ಲಿ ಸ್ಮಶಾನ ಅಭಿವೃದ್ಧಿಪಡಿಸಬೇಕು, ಪ್ರೌಢಶಾಲೆ ಮಂಜೂರು ಮಾಡಲು ಕ್ರಮವಹಿಸಬೇಕು ಎಂದು ಶಾಸಕರಲ್ಲಿ ಮನವಿ ಮಾಡಿದರು.

ಸಮಾರಂಭದಲ್ಲಿ ಮಾಜಿ ಶಾಸಕ ಕಳಲೆ ಕೇಶವಮೂರ್ತಿ, ಹುಲ್ಲಹಳ್ಳಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಶ್ರೀಕಂಠನಾಯಕ, ಕಾರ್ಮಿಕ ಮುಖಂಡ ಗೋವಿಂದರಾಜು, ಮುಖಂಡರಾದ ಜಯಮಾಲಾ ಬೀರೇಗೌಡ, ಮಲ್ಲೇಗೌಡ, ರುದ್ರೇಗೌಡ, ಭಕ್ತಕನಕದಾಸ ಯುವಕರ ಸಂಘದ ಅಧ್ಯಕ್ಷ ಬಸವರಾಜು, ರಾಮು, ಮಹದೇವು, ಜಯಕುಮಾರ್, ಸಿದ್ದರಾಜು, ಚಂದ್ರೇಗೌಡ, ಚಂದ್ರಶೇಖರ್, ಮದನ್, ನಾಗೇಂದ್ರ ಮಹೇಶ್, ರವಿ ಸೇರಿದಂತೆ ಹಲವಾರು ಪ್ರಮುಖರು ಇದ್ದರು.

ಮೃತ್ಯುಂಜಯಸ್ವಾಮಿ ನಿಧನ



ಸರಗೂರು, ಮಾ.13– ಪಟ್ಟಣದ ನಿವಾಸಿ ಮೃತ್ಯುಂಜಯಸ್ವಾಮಿ (ಜಯಣ್ಣ) ಬುಧವಾರ ನಿಧನರಾಗಿದ್ದಾರೆ. ಅವರಿಗೆ 84 ವರ್ಷ ವಯಸ್ಸಾಗಿತ್ತು. ವೀರಶೈವ ಸಮಾಜದ ಅಧ್ಯಕ್ಷರಾಗಿ, ಹಾಗೂ ಪತ್ರಕರ್ತರ ಸಂಘದ ಅಧ್ಯಕ್ಷರಾಗಿ ವರ್ತಕರ ಸಂಘದ ಉಪಾಧ್ಯಕ್ಷರಾಗಿಯೂ ಕರ್ತವ್ಯ ನಿರ್ವಹಿಸಿದ್ದರು. ದಿವಂಗತರು ಪತ್ನಿ, ಇಬ್ಬರು ಪುತ್ರರು, ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಇವರ ಅಂತ್ಯಕ್ರಿಯೆಯನ್ನು ಪಟ್ಟಣದ ವೀರಶೈವ ರುದ್ರಭೂಮಿಯಲ್ಲಿ ಗುರುವಾರ ನಡೆಸಲಾಗುವುದು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ತಾಲೂಕು ಪತ್ರಕರ್ತರ ಸಂಘ ಹಾಗೂ ವೀರಶೈವ ಸಮಾಜ ಸೇರಿದಂತೆ ಎಲ್ಲಾ ಸಮಾಜದ ಯಜಮಾನರು ಮುಖಂಡರು, ವರ್ತಕರ ಸಂಘದವರು ಮೃತರ ಅಂತಿಮ ದರ್ಶನ ಪಡೆದು ಸಂತಾಪ ಸೂಚಿಸಿದ್ದಾರೆ.



ಮೊದಲನೇ ವರ್ಷದ ಪುಣ್ಯಸ್ಮರಣೆ

ಕೆ.ನಾಗಣ್ಣ (ಬೆಲ್ಲದ ಅಂಗಡಿ)
ಮರಣ: 14.03.2023
ನೀವು ನಮ್ಮನ್ನಗಲಿ 1 ವರ್ಷ ಕಳೆಯಿತು ಆದರೆ ನಿಮ್ಮ ನೆನಪು ನಮ್ಮ ಮನದಲ್ಲಿ ಸದಾ ಅಮರ ನಿಮ್ಮ ದಿವ್ಯಾತ್ಮಕ್ಕೆ ಭಗವಂತನು ಚಿರಶಾಂತಿ ಕೊಡಲೆಂದು ಸ್ಮರಿಸುವ
ದುಃಖತಪ್ತ ಕುಟುಂಬ: ಪತ್ನಿ ಪದ್ಮ, ಮಗ, ಸೊಸೆಯಂದಿರು, ಅಳಿಯ, ಮಗಳು ಮತ್ತು ಮೊಮ್ಮಕ್ಕಳು



ನಗರಸಭಾ ಕಾರ್ಯಾಲಯ, ಹುಣಸೂರು, ಮೈಸೂರು ಜಿಲ್ಲೆ – 571105
CITY MUNICIPAL COUNCIL, HUNSUR MYSORE DIST., – 571105.
ಈ-ಮೇಲ್ : itstaff_ulb_hunsur@yahoo.co.in ಫ್ಯಾಕ್ಸ್ : 08222-252250 ಕಛೇರಿ ಫೋನ್ : 252048
E-mail : itstaff_ulb_hunsur@yahoo.co.in | Fax : 08222-252250 | Office Phone : 252048

ಸಂಖ್ಯೆ: ಹುನಕಾ/ಜೆ.ಇ(ವಿ)/ಸಿಆರ್/38/2023-24 ದಿನಾಂಕ:13-03-2024

ಸಾರ್ವಜನಿಕ ಪ್ರಕಟಣೆ

ಕುಡಿಯುವ ನೀರು ದುರ್ಬಳಕೆ ಮಾಡಿದರೆ ಕಠಿಣ ಕ್ರಮ ಕೈಗೊಳ್ಳುವ ಬಗ್ಗೆ

ಈಗಾಗಲೇ ಬೇಸಿಗೆಯು ಪ್ರಾರಂಭಗೊಂಡಿದ್ದು, ಹುಣಸೂರು ನಗರಸಭೆಯ ವ್ಯಾಪ್ತಿಗೆ ನೀರು ಸರಬರಾಜು ಮಾಡುವ ಕುಡಿಯುವ ನೀರಿನ ಮೂಲಗಳಲ್ಲಿ ನೀರಿನ ಪ್ರಮಾಣ-ಕಡಿಮೆಯಾಗುತ್ತಿರುವುದರಿಂದ ಸಾರ್ವಜನಿಕರು ನೀರನ್ನು ಮಿತವಾಗಿ ಬಳಸಲು ವಿನಂತಿಸಿದೆ. ನಗರಸಭೆಯಿಂದ ಸರಬರಾಜು ಮಾಡುವಕುಡಿಯುವ ನೀರಿನ ನಲ್ಲಿಗೆ ಪೈಪ್ ಸಿಕ್ಕಿಸಿ ವಾಹನ ತೊಳೆಯುವುದು, ಕಟ್ಟಡ ನಿರ್ಮಾಣಕ್ಕೆ ಬಳಸುವುದು, ರಸ್ತೆಗೆ ನೀರನ್ನು ಚೆಲ್ಲುವುದು, ನೀರಿನ ಪಂಪ್‌ಗೆಮೋಟಾರ್ ಪಂಪನ್ನು ಅಳವಡಿಸುವುದು, ತೋಟ-ಗಿಡ-ಮರಗಳಿಗೆ ನೀರು ಬಿಡುವುದು ಇತ್ಯಾದಿಗಳಿಗೆ ಅನಾವಶ್ಯಕ ನೀರನ್ನು ಬಳಕೆ ಮಾಡುತ್ತಿರುವುದು ಹಾಗೂ ನಲ್ಲಿಗಳಿಗೆ ಟ್ಯಾಪ್ ಅಳವಡಿಸಿಕೊಳ್ಳದೆ ಚರಂಡಿಗೆ ನೀರು ಬಿಡುವುದು ಕಂಡು ಬಂದಲ್ಲಿ ದಂಡ ವಿಧಿಸಲಾಗುವುದು. ಇದು ಪುನರಾವರ್ತಿತವಾದಲ್ಲಿ ಕರ್ನಾಟಕ ಪೌರಸಭೆಗಳ ಅಧಿನಿಯಮ 1964ರ ಪ್ರಕಾರ ನಲ್ಲಿನೀರಿನ ಸಂಪರ್ಕ ಕಡಿತಗೊಳಸಲಾಗುವುದು ಹಾಗೂ ಕಾನೂನಿನ ಅನ್ವಯದಂಡ ವಿಧಿಸಿ ಕಠಿಣಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಯುವುದು. ಕುಡಿಯುವ ನೀರು ಬಾರದೇ ಇದ್ದಲ್ಲಿ ಅಥವಾ ವ್ಯರ್ಥವಾಗುತ್ತಿರುವುದು ಕಂಡು ಬಂದಲ್ಲಿ ಟೋಲ್ ಫ್ರೀ ಸಂಖ್ಯೆ 08222-252250ಗೆ ಸಂಪರ್ಕಿಸುವುದು. ಮುಂದಿನ ದಿನಗಳಲ್ಲಿ ಮಳೆಗಾಲ ಪ್ರಾರಂಭವಾಗುವವರೆಗೆ ನೀರಿನ ಲಭ್ಯತೆಗೆ ಅನುಗುಣವಾಗಿ ಕುಡಿಯುವ ನೀರು ಸರಬರಾಜು ಮಾಡಲು ಕ್ರಮವಹಿಸಲಾಗುವುದು. ಒಂದು ವೇಳೆ ವಿದ್ಯುತ್ ಸರಬರಾಜು ಹಾಗೂ ಇತರೆ ಸಮಸ್ಯೆಯಿಂದ ನೀರು ಸರಬರಾಜಿನಲ್ಲಿ ವ್ಯತ್ಯಯ ಉಂಟಾದಲ್ಲಿ ಸಾರ್ವಜನಿಕರು ನಗರ ಸಭೆಯೊಂದಿಗೆ ಸಹಕರಿಸಲು ಈ ಮೂಲಕ ಕೋರಿದೆ.

ಸಹಿ/– ಪೌರಾಯುಕ್ತರು, ನಗರಸಭೆ, ಹುಣಸೂರು

ಮೈಸೂರು ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿ
ಮೆಗಾ ಡೈರಿ ಸಂಕೀರ್ಣ, ಬನ್ನೂರು ರಸ್ತೆ, ಆಲನಹಳ್ಳಿ ಅಂಚೆ, ಮೈಸೂರು – 570028.
ದೂರವಾಣಿ ಸಂಖ್ಯೆ:0821–2474475, ಫ್ಯಾಕ್ಸ್ ನಂ.0821–2474476,
ಇ–ಮೇಲ್ : purmymul@gmail.com

ಟೆಂಡರ್ ಪ್ರಕಟಣೆ (ಇ–ಟೆಂಡರ್ ಮುಖಾಂತರ ಮಾತ್ರ)

ಮೈಸೂರು ಜಿಲ್ಲಾ ಸಹಕಾರಿ ಹಾಲು ಒಕ್ಕೂಟಕ್ಕೆ ಅವಶ್ಯವಿರುವ ಈ ಕೆಳಕಂಡ ಸೇವೆ / ಸಾಮಾಗ್ರಿಗಳನ್ನು ಖರೀದಿಸಲು ಅರ್ಹ ಟೆಂಡರ್‌ದಾರರಿಂದ ಇ–ಪ್ರೊಕ್ಯೂರ್‌ಮೆಂಟ್ ಮುಖೇನ ಟೆಂಡರನ್ನು ಆಹ್ವಾನಿಸಲಾಗಿದೆ. ಟೆಂಡರ್ ದಾಸ್ತಾವೇಜುಗಳನ್ನು ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪ್ಲಾಟ್ ಫಾರಂ ಅಡಿ **https://kppp.karnataka.gov.in** ಅಪ್‌ಲೋಡ್ ಮಾಡಬಹುದಾಗಿರುತ್ತದೆ.

ಕ್ರ. ಸಂ	ಟೆಂಡರ್ ಪ್ರಕಟಣೆ ಮತ್ತು ದಿನಾಂಕ	ಸೇವೆಯ ವಿವರ	ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ
1	KMF/2023-24/ SE1674	ಒಕ್ಕೂಟಕ್ಕೆ ಅಗತ್ಯವಿರುವ ಪ್ಯಾಟೋಮೆಟಿಕ್ ಯಂತ್ರಗಳು ಮತ್ತು ಪೆಸ್ಟ್ ಕಂಟ್ರೋಲ್ ಸೇವೆಗಳ ದ್ವೈವಾರ್ಷಿಕ ನಿರ್ವಹಣೆ ವಹಿಸಿಕೊಡುವ ಬಗ್ಗೆ.	20.03.2024 ಸಂಜೆ 5.00 ಗಂಟೆಯವರೆಗೆ
2	KMF/2023-24/ IND0672	ಒಕ್ಕೂಟಕ್ಕೆ ಅವಶ್ಯವಿರುವ ಸಕ್ಕರೆ ಮತ್ತು ದಿನಸಿ ಸಾಮಗ್ರಿಗಳನ್ನು ಅರ್ಧ ವಾರ್ಷಿಕ ದರ ಗುತ್ತಿಗೆ ಆಧಾರದಲ್ಲಿ, ಬಟರ್ ಡೂಪ್ಲೆಕ್ಸ್ ಕರ್ಟನ್ಸ್‌ಗಳನ್ನು ವಾರ್ಷಿಕ ದರ ಗುತ್ತಿಗೆ ಆಧಾರದಲ್ಲಿ ಖರೀದಿಸುವ ಹಾಗೂ ಮೈಸೂರ್ ಪಾಕ್ ವ್ಯಾಟ್ ಅನ್ನು ಸರಬರಾಜು, ಅಳವಡಿಕೆ, ಪೂರೈಕೆಮಾಡುವ ಬಗ್ಗೆ.	20.03.2024 ಸಂಜೆ 5.00 ಗಂಟೆಯವರೆಗೆ
2	KMF/2023-24/ SE1673	ಎರಡು ವರ್ಷಗಳ ಅವಧಿಗೆ ವಿತರಣೆ ಮತ್ತು ವಾಪಸಾತಿ ಹಾಗೂ ಸಿದ್ಧ ದಾಸ್ತಾನು ವಿಭಾಗಕ್ಕೆ ಭದ್ರತಾ / ವಿತರಣಾ ವ್ಯವಸ್ಥೆಗಾಗಿ ಮಾನವ ದಿನಗಳ ಆಧಾರದಲ್ಲಿ ಭದ್ರತಾ ರಕ್ಷಕರುಗಳನ್ನು ಒದಗಿಸಲು ಗುತ್ತಿಗೆ ಟೆಂಡರ್ ಬಗ್ಗೆ.	12.04.2024 ಸಂಜೆ 5.00 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ ಖರೀದಿ ವಿಭಾಗದ ವ್ಯವಸ್ಥಾಪಕರನ್ನು (7411654265) ಸಂಪರ್ಕಿಸಬಹುದಾಗಿದೆ.
ಸಹಿ/–, ವ್ಯವಸ್ಥಾಪಕ ನಿರ್ದೇಶಕರು
ಮೈಸೂರು ಜಿಲ್ಲಾ ಸಹಕಾರಿ ಹಾಲು ಒಕ್ಕೂಟ ನಿ.,

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ನಂಜನಗೂಡು
ಹುಲ್ಲಹಳ್ಳಿ ರಸ್ತೆ ನಂಜನಗೂಡು–571301
ಇ–ಮೇಲ್:apmcnanjanagud@rediffmail.com,
ದೂರವಾಣಿ:08221–226309

ಸಂ.ಕೃಉಮಾಸ(ನಂ)/757/2023/2024 ದಿನಾಂಕ: 13.03.2024

ಪ್ರಕಟಣೆ

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ನಂಜನಗೂಡು ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿನ 2 ಕೊಠಡಿಗಳನ್ನು (ಜೇಷ್ಠತಾ ಆದಾರದ ಮೇಲೆ) ಅರ್ಹ ಪೇಟೆಕಾರ್ಯಕರ್ತರಿಗೆ ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ಮಾರುಕಟ್ಟೆ ಪ್ರಾಂಗಣದಲ್ಲಿ ಸ್ವತ್ತಿನ ಹಂಚಿಕೆ ನಿಯಂತ್ರಣ) ನಿಯಮಗಳು 2004 ರ ನಿಯಮಗಳನ್ವಯ ಲೀವ್–ಅಂಡ್–ಲೈಸೆನ್ಸ್ ಶುಲ್ಕದ ಆಧಾರದ ಮೇಲೆ ಹಾಗೂ 33 ತಿಂಗಳುಗಳ ನಂತರ ಶೇ 5 ರಷ್ಟನ್ನು ಹೆಚ್ಚಿಸುವ ಷರತ್ತಿಗೊಳಪಟ್ಟು ಗರಿಷ್ಠ 55 ತಿಂಗಳ ಅವಧಿಗೆ ಹಂಚಿಕೆ ಮಾಡಲು ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಕ್ರ.ಸಂ. 01 ಮಳಿಗೆ ವಿವರ: ಸಮಿತಿಯ ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿನ ರೈತ ಭವನದ ಎದುರಿಗೆ ಇರುವ ಮದುವೆ ಸಮಾರಂಭಗಳಿಗೆ ನಿರ್ಮಿಸಿರುವ ಸಭಾಂಗಣದ 2 ಕೊಠಡಿಗಳು. **ನೋಂದಣಿ ಶುಲ್ಕ (ತೆರಿಗೆ ಪ್ರತ್ಯೇಕ):** 500–00 **ಮಾಸಿಕ ಲೀವ್ ಅಂಡ್ ಲೈಸನ್ಸ್ ಶುಲ್ಕ:** 3,128/– (ಪ್ರತಿ ಕೊಠಡಿಗೆ) **ಮುಂಗಡ ಹಣ ರೂ.6,256–00**

ಷರತ್ತು ಹಾಗೂ ನಿಭಂಧನೆಗಳು: 1) ನೋಂದಣಿ ಶುಲ್ಕ ರೂ; 500–00 ನ್ನು ಪಾವತಿಸಿ ತಮ್ಮ ಹೆಸರನ್ನು ನೋಂದಾಯಿಸಿಕೊಂಡು ನಿಗಧಿತ ಅರ್ಜಿ ನಮೂನೆ–1 ನ್ನು ಸಲ್ಲಿಸಲು ಕೊನೆಯ ದಿ: 01.04.2024 ರ ಸಂಜೆ 4.00 ಗಂಟೆವರೆಗೆ **2)** ನೋಂದಾವಣಿ ಪಡೆದ ಅರ್ಜಿದಾರರು ನಿಗಧಿತ ಅರ್ಜಿ ನಮೂನೆಯೊಂದಿಗೆ ಮುಂಗಡ ಹಣ ಪಾವತಿಸಲು ಕೊನೆಯ ದಿ: 05.04.2024ರ ಮಧ್ಯಾಹ್ನ 12.00 ಗಂಟೆಯವರೆಗೆ. **3)** ಮುಂಗಡ ಪಾವತಿಯನ್ನು ಕಾರ್ಯದರ್ಶಿ, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ನಂಜನಗೂಡು ಇವರ ಹೆಸರಿನಲ್ಲಿ ಡಿ.ಡಿಯನ್ನು ಖರೀದಿಸಿ ಸಲ್ಲಿಸುವುದು. **4)** ಈ ಹಂಚಿಕೆಯು ಮಾನ್ಯ ನಿರ್ದೇಶಕರು, ಕೃಷಿ ಮಾರಾಟ ಇಲಾಖೆ ಬೆಂಗಳೂರು, ಇವರ ಅನುಮೋದನೆಯ ಷರತ್ತಿಗೊಳಪಟ್ಟಿರುತ್ತದೆ. **5)** ಹೆಚ್ಚಿನ ಷರತ್ತು ಹಾಗೂ ನಿಭಂದನೆಗಳನ್ನು ಕಛೇರಿ ವೇಳೆಯಲ್ಲಿ ಪಡೆಯಬಹುದು.

ಸಹಿ/– (ಮಹೇಶ.ಬಿ) ಕಾರ್ಯದರ್ಶಿ ಕೃ.ಉ.ಮಾ.ಸ., ನಂಜನಗೂಡು
ಸಹಿ/– (ಶಿವಕುಮಾರ್ ಕಾಸ್ನೂರು) ಆಡಳಿತಾಧಿಕಾರಿ ಕೃ.ಉ.ಮಾ.ಸ., ನಂಜನಗೂಡು

ಚಾಮರಾಜನಗರ ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿಯಮಿತ
ಕುದೇರು ಗ್ರಾಮ ಮತ್ತು ಅಂಚೆ, ಸಂತೇಮರಹಳ್ಳಿ ಹೋಬಳಿ, ಚಾಮರಾಜನಗರ - 571 316
ದೂರವಾಣಿ :08226-234848 E-mail: admnchamul@gmail.com

ಸಂಖ್ಯೆ: ಚಾಮುಲ್ /ಆಡಳಿತ/ಇನ್‌ಶ್ಯೂರೆನ್ಸ್–ಟೆಂಡರ್ /358–01,457/2024–25 ದಿನಾಂಕ 13.03.2024

ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ)

ಚಾಮರಾಜನಗರ ಜಿಲ್ಲಾ ಸಹಕಾರಿ ಹಾಲು ಒಕ್ಕೂಟಕ್ಕೆ ಅವಶ್ಯವಿರುವ ಈ ಕೆಳಕಂಡ ಸೇವೆಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಅಲ್ಪಾವಧಿ ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರ್ ದಾಸ್ತಾವೇಜುಗಳನ್ನು ಕರ್ನಾಟಕ ಸರ್ಕಾರದ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಪ್ಲಾಟ್ ಫಾರಂ ಅಡಿ **www.kppp.karnataka.gov.in** ಈ ವೆಬ್‌ಸೈಟ್‌ನಲ್ಲಿ ಪಡೆದು ಕೆಳಗಿನ ವಿವರದಂತೆ ಅಪ್‌ಲೋಡ್ ಮಾಡಬಹುದಾಗಿರುತ್ತದೆ.

ಕ್ರ.ಸಂ	ಟೆಂಡರ್‌ಗಳ ವಿವರ	ಟೆಂಡರ್ ಸಲ್ಲಿಸುವ ದಿನಾಂಕ ಮತ್ತು ಕೊನೆಯ ದಿನಾಂಕ
1	ಒಕ್ಕೂಟದ ನೌಕರರಿಗೆ ಮತ್ತು ಅವರ ಅವಲಂಬಿತರಿಗೆ ಆರೋಗ್ಯ ವಿಮೆಯನ್ನು 2024–2025ನೇ ಸಾಲಿಗೆ ಐ.ಆರ್.ಡಿ.ಎ ನೊಂದಾಯಿತ ಸರ್ಕಾರಿ ಸ್ವಾಮ್ಯದ ವಿಮಾ ಕಂಪನಿಗಳಿಂದ ಮಾಡಿಸುವ ಬಗ್ಗೆ. (ಚಾಮುಲ್ /ಆಡಳಿತ/ಆರೋಗ್ಯವಿಮಾ–ಟೆಂಡರ್ /358–01/2024–25)	ದಿನಾಂಕ 14.03.2024 ರಿಂದ 06.04.2024ರ ಮಧ್ಯಾಹ್ನ 2.00 ಗಂಟೆಯವರೆಗೆ.
2	ಒಕ್ಕೂಟದ ವ್ಯಾಪ್ತಿಗೆ ಒಳಪಡುವ ಕಟ್ಟಡಗಳು/ಯಂತ್ರೋಪಕರಣಗಳು ಹಾಗೂ ಇತ್ಯಾದಿಗಳನ್ನು 2024–2025ನೇ ಸಾಲಿಗೆ ಐ.ಆರ್.ಡಿ.ಎ ನೊಂದಾಯಿತ ಸರ್ಕಾರಿ ಸ್ವಾಮ್ಯದ ವಿಮಾ ಕಂಪನಿಗಳಿಂದ ಬೆಂಕಿ ಅಪಘಾತ/ಕಳ್ಳತನ/ಎಂ.ಬಿ.ಡಿ/ನಗದು ವಿಮಾ ಸುರಕ್ಷತೆಗೊಳಪಡಿಸುವ ಬಗ್ಗೆ. (ಚಾಮುಲ್ /ಆಡಳಿತ/ಯಂತ್ರೋಪಕರಣವಿಮಾ–ಟೆಂಡರ್ /457/2024–25)	ದಿನಾಂಕ 14.03.2024 ರಿಂದ 15.04.2024ರ ಮಧ್ಯಾಹ್ನ 2.00 ಗಂಟೆಯವರೆಗೆ.

ಹೆಚ್ಚಿನ ಮಾಹಿತಿಗಾಗಿ ವ್ಯವಸ್ಥಾಪಕರು (ಆಡಳಿತ)–7760968421 ರವರನ್ನು ಕಛೇರಿ ಸಮಯದಲ್ಲಿ ಸಂಪರ್ಕಿಸಿಬಹುದಾಗಿದೆ.
ಸಹಿ/–
ವ್ಯವಸ್ಥಾಪಕ ನಿರ್ದೇಶಕರು

ಹಸಿರು ನಮ್ಮ ಉಸಿರು

6ನೇ ವರ್ಷದ ಸವಿನೆನಪು



ಎ.ಅಂಕಯ್ಯ
(ನೀರಾವರಿ ಇಲಾಖೆ)
ಜನನ: 15.01.1950
ಮರಣ: 14.03.2018

ನಿಮ್ಮ ಆಶೀರ್ವಾದ ನಮ್ಮ ಮೇಲೆ ಸದಾ ಇರಲಿ
ದುಃಖತಪ್ತರು
ಪತ್ನಿ ಶಿವಮ್ಮ, ಅಳಿಯ ಶ್ರೀನಿವಾಸ ಮಗಳು ಶೋಭಾವತಿ ಮಗ ಮಧುಸೂಧನ ಸೊಸೆ ನಿವೇದಿತ ಡಾ॥ ನಂದನ, ಹರೀಶ, ಜಾಹ್ನವಿ, ಗೌರವ್, ಗಾನವಿ, ಕುಟುಂಬವರ್ಗ ದವರು, ವಾಜಮಂಗಲ

